ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 ಸಂಚಿಕೆ 41 ರೂ. 2.00 8 ಅಕ್ಟೋಬರ್ 1995

ಒಳಪುಟಗಳಲ್ಲಿ

ಅಕ್ಟೋಬರ್ 9: ಭೂ ಕಾಯ್ದೆ ತಿದ್ದುಪಡಿಗೆ ರಾಜ್ಯಾದ್ಯಂತ ಪ್ರತಿಭಟನೆ

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ರಾಜ್ಯದ ಜನತಾದಳ ಸರಕಾರ ಉದ್ದಿಮೆಗಳಿಗೆ ಭೂಮಿ ಸುಲಭವಾಗಿ ಸಿಗುವಂತೆ ಮಾಡಲೆಂದು ತಂದಿರುವ ಭೂ ಕಾಯ್ದೆ ತಿದ್ದುಪಡಿ ಮತ್ತು ಕಾರ್ಷಿಕ ನೀತಿಯನ್ನು ವಿರೋಧಿಸಿ ಅಕ್ಟೋಬರ್ 9ರಂದು ರಾಜ್ಯಾದ್ಯಂತ ಧರಣಿ, ಮತ ಪ್ರದರ್ಶನ ನಡೆಸಲು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ. ಅಂದು ಈ ತಿದ್ದುಪಡಿಯ ಪ್ರತಿಯನ್ನು ಸುಟ್ಟು ಹಾಕಿ ಬಡ ರೈತರ ಸಿಟ್ಟಿಗೆ ದನಿ ನೀಡಲು ನಿರ್ಧರಿಸಲಾಗಿದೆ. ಇದು ಈ ನೀತಿಗಳ ವಿರುದ್ಧ ರಾಜ್ಯ ಸಮಿತಿ ಕೈಗೊಳ್ಳಲು ನಿರ್ಧರಿಸಿರುವ ಒಂದು ವಿಸ್ತೃತ ಕಾರ್ಯಕ್ರಮದ ಭಾಗವಾಗಿ ರಾಜ್ಯಾದ್ಯಂತ ನಡೆಯಲಿದೆ.

ಸೆಪ್ಟೆಂಬರ್ 20ರಂದು ರಾಜ್ಯ ಸರಕಾರ ಕೃಷಿಯೇತರರು ಭೂಮಿ ಪಡೆಯಲು ಇರಬೇಕಾದ ಗರಿಷ್ಠ ಆದಾಯ ಮಿತಿ 1991ರ ತಿದ್ದುಪಡಿ ನಂತರ 50 ಸಾವಿರ ರೂ. ಇದ್ದುದನ್ನು ಎರಡು ಲಕ್ಷ ರೂ. ಗೆ ಹೆಚ್ಚಿಸುವ, ಕೃಷಿಯೇತರರಿಗೆ ಕೃಷಿ ಭೂಮಿ ವರ್ಗಾವಣೆಗೆ ಇರುವ ನಿರ್ಬಂಧಗಳನ್ನು ತೆಗೆದು ಹಾಕುವ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಬಳಸಬಹುದಾದ ಜಮೀನಿನ ಗರಿಷ್ಠ ಮಿತಿಯನ್ನು 2 ರಿಂದ 20 ಯುನಿಟ್ ಗಳಿಗೆ(100 ಎಕ್ರೆಗಳಿಗೆ) ಹೆಚ್ಚಿಸುವ ಭೂ ಸುಧಾರಣಾ(ತಿದ್ದುಪಡಿ) ಮಸೂದೆ ತಂದು ಪಾಸು ಮಾಡಿಸಿಕೊಂಡಿದೆ. ಇದರಿಂದ ಸಣ್ಣ ರೈತರು ಭೂಮಿ ಕಳಕೊಳ್ಳುತ್ತಾರೆ, ಆಹಾರ ಉತ್ಪಾದನೆ ಕುಂಠಿತವಾಗುತ್ತದೆ, ಇದು ಸರಕಾರ ಬಡ ರೈತರಿಗೆ ಮಾಡಿರುವ ದ್ರೋಹ ಎಂದು ಸಿಪಿಐ(ಎಂ) ಶಾಸಕ ಜಿ.ವಿ. ಶ್ರೀರಾಮ ರೆಡ್ಡಿ ಸಭಾತ್ಯಾಗ ಮಾಡಿದರು. ಮಂತ್ರಿಗಳು ಪಶ್ಚಿಮ ಬಂಗಾಳದ ಉದಾಹರಣೆ ನೀಡಲು ಪ್ರಯತ್ನಿಸಿದಾಗ ದೇಶದಲ್ಲೇ ಅತ್ಯುತ್ತಮ ರೀತಿಯಲ್ಲಿ ಭೂ ಸುಧಾರಣೆಗಳಲ್ಲಿ ಜ್ಯಾರಿ ಮಾಡಿದ ಆ ರಾಜ್ಯದಲ್ಲಿ ಕೈಗಾರಿಕೆ ಅಭಿವೃದ್ಧಿಯ ಹೆಸರಲ್ಲಿ ಭೂ ಸುಧಾರಣೆಯ ತಿದ್ದುಪಡಿ ಮಾಡಿಲ್ಲ ಎಂದು ಶ್ರೀರಾಮರೆಡ್ಡಿ ನೆನಪಿಸಿದರು. ವಿಧಾನ ಮಂಡಲದ ಅಧಿವೇಶನವನ್ನು ತಮ್ಮ ರಾಜಕೀಯ ಪ್ರಚಾರಕ್ಕೆ ಬಳಸುವ ಸಂಕುಚಿತ ಉದ್ದೇಶದಿಂದ ಸನದಲ್ಲಿ ಕಾಂಗ್ರೆ-ಬಿಜೆಪಿ ಸದಸ್ಯರು ಹಾಜರಿರಲಿಲ್ಲ. ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್(ಐ), ಸದಸ್ಯರು ಹಾಜರಿದ್ದು ಈ ತಿದ್ದುಪಡಿಗೆ ವಿರೋಧ ಸೂಚಿಸಿದ್ದರೆ ಇದು ಅಂಗೀಕಾರವಾಗುವ ಸಾಧ್ಯತೆ ಇರಲಿಲ್ಲ. ಇದನ್ನು ಸಿಪಿಐ(ಎಂ) ಶಾಸಕರು ಅವರ ಗಮನಕ್ಕೆ ತಂದರೂ ಉಪೇಕ್ಷಿಸಿದ ಕಾಂಗ್ರೆಸ್(ಐ) ಮರುದಿನ ಈ ತಿದ್ದುಪಡಿಯನ್ನು ವಿರೋಧಿಸುವ ನಾಟಕ ಮಾಡಿದರು. ಅಲ್ಲದೆ ಇದರಲ್ಲಿ ಭಾಗವಹಿಸಲು ಶ್ರೀರಾಮರೆಡ್ಡಿಯವರಿಗೆ ಆಹ್ವಾನವನ್ನು ನೀಡಿದರು! ನಿಮಗೆ ಇದರಲ್ಲಿ ನಿಜವಾದ ಆಸಕ್ತಿಯಿಲ್ಲ, ಇದು ಕೇವಲ ಗೋಸುಂಬೆತನದ ಪ್ರದರ್ಶನವಷ್ಟೇ ಎಂದು ಶ್ರೀರಾಮ ರೆಡ್ಡಿಯವರ ಆಹ್ವಾನವನ್ನು ತಿರಸ್ಕರಿಸಿದರು.

ಜನತೆಗೆ ಕಾಂಗ್ರೆ ಬಿಜೆಪಿ ದ್ರೋಹ

ಬರಗಾಲದ ಬಗ್ಗೆ ಚರ್ಚೆ ನಡೆಸಬೇಕೆಂದು ವಿರೋಧ ಪಕ್ಷಗಳ ಒತ್ತಾಯದ ಮೇರೆಗೆ ಆರಂಭವಾದ ವಿಧಾನಮಂಡಳದ ಪ್ರಸ್ತುತ ಅಧಿವೇಶನವನ್ನು ಬಹಿಷ್ಕರಿಸಿ ಬಿಜೆಪಿ-ಕಾಂಗ್ರೆಸ್(ಐ) ಭೂ ಸುಧಾರಣೆಗೆ ಜನ-ವಿರೋಧಿ ತಿದ್ದುಪಡಿ ಅನಾಯಾಸವಾಗಿ ಪಾಸು ಮಾಡಲು ಅವಕಾಶ ನೀಡಿವೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಬಲವಾಗಿ ಟೀಕಿಸಿದೆ.

ಸೆಪ್ಟೆಂಬರ್ 24-25ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ರಾಜ್ಯ ಸಮಿತಿ ಕಳೆದ ಸಭೆಯಿಂದೀಚೆಗೆ ನಡೆದ ರಾಜಕೀಯ ಬೆಳವಣಿಗೆಗಳ ಬಗ್ಗೆ ಚರ್ಚಿಸಿ ಒಂದು ನಿರ್ಣಯವನ್ನು ಅಂಗೀಕರಿಸಿತು.

ರಾಜ್ಯದ ಎರಡು ವಿರೋಧ ಪಕ್ಷಗಳು ಬರಗಾಲದ ಬಗ್ಗೆ ಚರ್ಚೆ ನಡೆಸಬೇಕು, ಅದಕ್ಕಾಗಿ ಅಧಿವೇಶನ ಕರೆಯಬೇಕು ಎಂದು ಅಬ್ಬರದ ಪ್ರಚಾರ ನಡೆಸಿದರು. ಆದರೆ ಸೆಪ್ಟೆಂಬರ್ 7ರಂದು ಅಧಿವೇಶನ ಕರೆದಾಗ ಬಿಜೆಪಿಗೆ ಈ ವಿಚಾರ ಮರೆತೇ ಹೋಯಿತು. ಬೇರೆ ಯಾವ ವಿರೋಧ ಪಕ್ಷಗಳನ್ನು ಕಡೆಗಣಿಸಿ ಅವಿಶ್ವಾಸ ನಿರ್ಣಯ ಮಂಡಿಸಿ ಒಂದು ರೀತಿಯಲ್ಲಿ ದೇವೇಗೌಡ ಸರಕಾರಕ್ಕೆ ಸಹಾಯ ಮಾಡಿತು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ.

ಸಿಪಿಐ(ಎಂ) ಬಹಳ ದಿನಗಳಿಂದಲೂ ಕಾವೇರಿ ಜಲವಿವಾದವನ್ನು ಮಾತುಕತೆಯಿಂದ ಬಗೆಹರಿಸಬೇಕು ಎಂದು ಹೇಳುತ್ತಾ ಬಂದಿದೆ. ಇದಕ್ಕೆ ಕೇಂದ್ರ ಸರಕಾರ ಎಲ್ಲರೂ ಒಪ್ಪುವಂತಹ ಆಧಾರದ ಮೇಲೆ ನದಿ ನೀರಿನ ಹಂಚಿಕೆ ಕುರಿತು ಸೂತ್ರಗಳನ್ನು ರಚಿಸಲಿಲ್ಲ, ಮಾತ್ರವಲ್ಲ ಎರಡೂ ಸರಕಾರಗಳ ನಡುವೆ ಸಂಧಾನ ಮಾಡಲು ಮುಂದಾಗಲಿಲ್ಲ. ಕೇಂದ್ರ ಸರಕಾರ ತನ್ನ ಸ್ವಾರ್ಥ ದೃಷ್ಟಿಯಿಂದ, ಅಂದರೆ ತಮಿಳುನಾಡಿನ ಸರಕಾರವನ್ನು ವಿರೋಧ ಕಟ್ಟಿಕೊಳ್ಳಲು ತಯಾರಿಲ್ಲದೆ ಈ ಸಮಸ್ಯೆ ನೆನೆಗುದಿಗೆ ಬಿದ್ದಿದೆ. ಕಾವೇರಿ ನ್ಯಾಯಪಂಚಾಯ್ತಿ ಮುಂದೆ ವೀರಪ್ಪ ಮೊಯಿಲಿ ಸರಕಾರವು ಕಷ್ಟ ಪರಿಸ್ಥಿತಿಯಲ್ಲಿ 16.8 ಟಿಎಂಸಿ ನೀರಿ ಬಿಡುವುದಾಗಿ ಹೇಳಿದ್ದರೂ ಅನಿವಾರ್ಯವಾಗಿ ದೇವೇಗೌಡರ ಸರಕಾರ 5 ಟಿಎಂಸಿ ನೀರನ್ನು ಬಿಟ್ಟಿದ್ದಕ್ಕೆ ಶಾಸನ ಸಭೆಯೇ ನಡೆಯದಂತೆ ಕಾಂಗ್ರೆಸ್(ಐ) ಮತ್ತು ಬಿಜೆಪಿ ಪಕ್ಷಗಳು ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ವರ್ತಿಸಿವೆ. ಇದೇ ದೃಷ್ಟಿಯಿಂದ ಐಎಎಸ್ ಅಧಿಕಾರಿ ವಾಸುದೇವನ್ ವಿಚಾರದಲ್ಲೂ ನಡೆದುಕೊಂಡಿವೆ.

ವಿಧಾನಸಭೆಯನ್ನು ಬಹಿಷ್ಕರಿಸಿ ಜನತಾದಳ ಸರಕಾರವು ಭೂ ಮಸೂದೆಗೆ ಜನ ವಿರೋಧಿ ತಿದ್ದುಪಡಿನಯ್ನು ಅನಾಯಾಸವಾಗಿ ಪಾಸು ಮಾಡುವಂತೆ ಸರಕಾರ ನಡೆದುಕೊಂಡ ನಂತರ ಈಗ ಈ ಎರಡೂ ಪಕ್ಷಗಳು ಕರ್ನಾಟಕದ ಜನತೆಗೆ ಮಾಡಿದ ದ್ರೋಹವನ್ನು ಮುಚ್ಚಿಕೊಳ್ಳಲು ವಿಶೇಷ ಶಾಸನ ಸಭೆಯನ್ನು ಕರೆದು

ಪುಟ 8 ಕ್ಕೆ

ಬೀಜಿಂಗ್‌ನಲ್ಲಿ ಇತ್ತೀಚೆಗೆ ಮುಗಿದ ವಿಶ್ವ ಮಹಿಳಾ ಸಮ್ಮೇಳನಗಳಲ್ಲಿ 'ಮಾನವ ಹಕ್ಕುಗಳ ಉಲ್ಲಂಘನೆ', ಟಿಬೇಟ್ ಇತ್ಯಾದಿಗಳ ಬಗ್ಗೆ ಸಣ್ಣ ಪುಟ್ಟ ಪ್ರದರ್ಶನಗಳು ನಡೆದರೆ ಅವನ್ನು ಉತ್ರೇಕ್ಷಿಸಿ ವರದಿ ಮಾಡುವ ನಮ್ಮ ಪತ್ರಿಕೆಗಳು ಇಡೀ ವಿಶ್ವದ ಜನರನ್ನು ಬಾಧಿಸುತ್ತಿರುವ ಹೊಸ ನೀತಿಗಳ ವಿರುದ್ಧ ಹೋರಾಟದ ದನಿ ಮೊಳಗಿಸಿದುದನ್ನು ಮಾತ್ರ ವರದಿ ಮಾಡಲಿಲ್ಲ. ಅಮೇರಿಕಾ ಪ್ರೇರಿತ 'SAP' ಕಾರ್ಯಕ್ರಮದ ವಿರುದ್ಧ ಮಹಿಳೆಯರ ಪ್ರತಿಭಟನೆಯ ಒಂದು ದೃಶ್ಯ - ಲೇಖನ ಪುಟ 4-5



ಭೂ ಮಸೂದೆಗೆ ತಿದ್ದುಪಡಿ ಮತ್ತು ನೂತನ ಕೃಷಿ ನೀತಿಯನ್ನು ಕೈ ಬಿಡಿ ಇಲ್ಲವೆ ರೈತರ ಚಳುವಳಿಯನ್ನು ಎದುರಿಸಿ

ಕಾಂಗ್ರೆಸಿನ ರೈತ ವಿರೋಧಿ ಹಾಗೂ ಜನ ವಿರೋಧಿ ಆರ್ಥಿಕ ನೀತಿ ಹಾಗೂ ಹೊಸ ಕೃಷಿ ನೀತಿಯನ್ನು ಧಿಕ್ಕರಿಸಿದ ರಾಜ್ಯದ ಜನತೆ ಬದಲಿ ಧೋರಣೆಯನ್ನು ಬಯಸಿ ಜನತಾ ದಳಕ್ಕೆ ರಾಜ್ಯದ ಅಧಿಕಾರವನ್ನು ನೀಡಿದ್ದಾರೆ. ಕಳೆದ ಒಂಭತ್ತು ತಿಂಗಳಿನ ಆಡಳಿತದಲ್ಲಿ ಜನತೆ ರಾಜ್ಯ ಸರ್ಕಾರದ ಧೋರಣೆಯಿಂದ ಭ್ರಮನಿರಸನಗೊಂಡಿದ್ದಾರೆ.

ಸೀರೆ, ಪಂಚೆ, ಉದ್ಯೋಗದ ಯೋಜನೆಗಳ ಭರವಸೆಯ ಜೊತೆಗೆ ನೂತನ ಕೃಷಿ ನೀತಿಯನು ಜಾರಿಗೆ ತರಲಾಗಿದೆ ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯನ್ನು ಜಾರಿ ಮಾಡುವಾಗ ರಾಜ್ಯದ ಹಿತಕ್ಕೆ ವಿರೋಧವಾಗಿದ್ದನ್ನು ಎಂದೂ ನಾನು ಒಪ್ಪುವುದಿಲ್ಲ, ಅಂತಹ ಪ್ರಸಂಗ ಬಂದರೆ ಅಧಿಕಾರವನ್ನು ಬಿಡುವುದಾಗಿ ದೊಡ್ಡ ರೀತಿಯಲ್ಲಿ ಹೇಳಿಕೊಂಡ ಮಾನ್ಯ ಮುಖ್ಯಮಂತ್ರಿ ಶ್ರೀ ಹೆಚ್.ಡಿ.ದೇವೇಗೌಡರು ಈಗ ನೂತನ ಕೃಷಿ ನೀತಿ ತರುವ ಮುಖಾಂತರ ಮಾಡಿರುವುದೇನೆಂದರೆ ಈ ಕೆಳಗಿನ ಪ್ರಶ್ನೆಗಳ ಮು ಖಾಂತರ ಉತ್ತರ ಬಯಸುವ ಕರ್ನಾಟಕ ಪ್ರಾಂತ ರೈತ ಸಂಘ ತಮ್ಮ ತಪ್ಪನ್ನು ತಿದ್ದಿಕೊಂಡು ಧೋರಣೆಯನ್ನು ಬದಲಿ ಮಾಡಬೇಕು ಇಲ್ಲವೆ ರೈತರ ಚಳುವಳಿಯನ್ನು ಎದುರಿಸಲು ಮುಂದಾಗಬೇಕೆಂದು ಕರೆಕೊಟ್ಟಿದೆ.

ರಾಜ್ಯದ ಹಿತವೆಂದರೆ, ಬಹುಸಂಖ್ಯಾತರ ಹಿತ ಕಾಪಾಡುವುದಾಗಿದೆ, ಭೂಮಿತಿ ಕಾಯ್ದೆಗೆ ತಂದ ತಿದ್ದುಪಡಿ ಯಾರ ಹಿತಕ್ಕಾಗಿ, ಎರಡು ಲಕ್ಷ ಕೃಷಿಯೇತರ ಆದಾಯ ವಿರುವವರೂ ಕೂಡ, ನೂರು ಎಕರೆಗಿತಂಲೂ ಹೆಚ್ಚು ಭೂಮಿಯನ್ನು ಖರೀದಿಸಲು ಹಾಗೂ ಬಹುರಾಷ್ಟ್ರೀಯ ಕಂಪನಿಗಳು, ರಾಷ್ಟ್ರೀಯ ಕಂಪನಿಗಳು ಅವಶ್ಯಕತೆಯಾಧಾರದಲ್ಲಿ ಭೂಮಿಯನ್ನು ಖರೀದಿಸಲು, ಇಲ್ಲವೆ ಗುತ್ತಿಗೆ ಪಡೆಯಲು ಅವಕಾಶ ನೀಡಿರುವುದು, ಬಡರೈತ, ಮಧ್ಯಮ ರೈತರ ಮಿಲಿಯಾಂತರ ಕುಟುಂಬಗಳು, ಭೂಮಿಯನ್ನು ಮಾರಿಕೊಂಡು ನಿರ್ಗತಿಕರಾಗುವುದಕ್ಕಾಗಿಯಲ್ಲವೆ, ಬಂಡವಾಳಶಾಹೀ ಭೂಮಾಲೀಕರನ್ನು ಬೆಳೆಸುವುದಕ್ಕಾಗಿಯಲ್ಲವೆ.

ಕೊಜೆಂಟ್ರಿಕ್ಸ್‌ದಂತಹ ವಿದೇಶಿ ಕಂಪನಿ ಹಾಕಿರುವ ಎಲ್ಲಾ ಶರತ್ತುಗಳನ್ನು ಒಪ್ಪುವ ಮುಖಾಂತರ ವಿದ್ಯುತ್‌ನ ಒಂದು ಯೂನಿಟ್ ಬೆಲೆಯನ್ನು ಗ್ರಾಹಕರಿಗೆ ಮೂರರಿಂದ ನಾಲ್ಕು ರೂಪಾಯಿಗೆ ಮಾರುವಂತೆ ಮಾಡುವುದು, ನೂರಾರು ಕೋಟಿ ಕೈಗಾರಿಕೋದ್ಯಮಿಗಳ ವಿದ್ಯುತ್ ಬಾಕಿಯನ್ನು ವಸೂಲಿ ಮಾಡದೆಯಿಲ್ಲದೆ ಬಡ, ಮಧ್ಯಮ ರೈತರ ಪಂಪ್ಸೆಟ್‌ಗಳಿಗೆ ವಿದ್ಯುತ್ ದರ ಹಾಕಲು ಮುಂದಾಗಿರುವದು ಯಾರ ಹಿತಕ್ಕಾಗಿ.

ಕೃಷ್ಣಾ ಕೊಳ್ಳದ 734/ಟಿ.ಎಂ.ಸಿ ನೀರನ್ನು ಬಳಸಿ ಕೊಳ್ಳಲು ಸಮಗ್ರ ಯೋಜನೆಯನ್ನು ರೂಪಿಸಿವೆ. ಕೇವಲ 173 ಟಿ.ಎಂ.ಸಿ. ನೀರನ್ನು ಮಾತ್ರ 2000 ಇಸ್ವಿಯೊಳಗಡೆ ಬಳಸಿಕೊಳ್ಳುವ ಕೃಷ್ಣಾ ಭಾಗ್ಯ ಜಲ ನಿಗಮವನ್ನು ರೂಪಿಸಿರುವುದು,

ನೀರಾವರಿ ಯೋಜನೆಗಳಿಗೆ ಪ್ರಥಮ ಆದ್ಯತೆಯಲಿ ಬಂಡವಾಳ ಒದಗಿಸದೇ ಇರುವದು. ನೀರಾವರಿ ತೆರಿಗೆಯನ್ನು ಹೆಚ್ಚಿಸಿ, ತೆರಿಗೆಯನ್ನು ವಸೂಲಿ ಮಾಡಲು ಖಾಸಗೀ ವ್ಯಕ್ತಿಗಳಿಗೆ, ನೀರಿನ ವಿತರಣೆಯ ಜವಾಬ್ದಾರಿಯನ್ನು ನೀಡಲು ಮುಂದಾಗಿರುವುದು ಯಾರ ಹಿತಕ್ಕಾಗಿ.

ರಾಜ್ಯ ಸರಕಾರ ಕಾಂಗ್ರೆಸ್ಸಿನ ಹೊಸ ಆರ್ಥಿಕ ನೀತಿಯ ಬಲಿಪಶುವಾಗುವುದನ್ನು ಬಿಟ್ಟು ರೈತ, ಕೃಷಿಕೂಲಿಕಾರರ ಪರವಾದ, ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಪರ್ಯಾಯ ಕೃಷಿ ನೀತಿಯಾಧಾರಿತ ಧೋರಣೆಯನ್ನು ಅಳವಡಿಸುವಂತೆ ಒತ್ತಾಯಿಸಲು ಅಕ್ಟೋಬರ್ ಹತ್ತರಂದು ನೂತನ ಕೃಷಿ ನೀತಿಯ ಪ್ರತಿಗಳನ್ನು ಸುಟ್ಟು ಹಾಕಲು ಭೂಮಿತಿ ಕಾಯ್ದೆ ತಿದ್ದು ಪಡಿ ಮಸೂದೆಯನ್ನು ಸುಟ್ಟು ಹಾಕುವ ಮುಖಾಂತರ ರಾಜ್ಯಾದ್ಯಂತ ಎಲ್ಲಾ ತಾಲೂಕ ಕೇಂದ್ರಗಳ ಮುಂದೆ ಬೃಹತ್ ಕಾರ್ಯಕ್ರಮಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕರೆ ಕೊಟ್ಟಿದ್ದು ಅದನ್ನು ಬೆಂಬಲಿಸಿ ಕಾರ್ಯ ಕ್ರಮ ಯಶಸ್ವಿಗೊಳಿಸಲು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಕರೆ ಕೊಟ್ಟಿದೆ.

ಜೊತೆಗೆ ನೀರಾವರಿ ಧೋರಣೆಯನ್ನು ಈ ಕೆಳಗಿನಂತೆ ರೂಪಿಸಿಕೊಳ್ಳಲು ಪ್ರಾಂತ ರೈತ ಸಂಘ ಜೊತೆಗೆ ಕೃಷ್ಣಾ ಕೊಳ್ಳದ ನೀರನ್ನು 2000 ಇಸ್ವಿಯೊಳಗಡೆ ಬಳಸಿಕೊಳ್ಳಲು ಒತ್ತಾಯಿಸಿ ಸಪ್ಟೆಂಬರ್ 4 ರಂದು ರಾಜ್ಯ ಮಟ್ಟದ ಸಮಾವೇಶವನ್ನು ಭೀಮರಾಯನ ಗುಡಿಯಲ್ಲಿ ನಡೆಸಿ, ಒಂದು ಮನವಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದೆ.(ಈ ಮನವಿ ಪತ್ರದಲ್ಲಿನ ಬೇಡಿಕೆಗಳನ್ನು ಪುಟ 8ರಲ್ಲಿ ಕೊಡಲಾಗಿದೆ)

ಒಟ್ಟಾರೆ ಕೃಷಿಯನ್ನು ಧಿಕ್ಕರಿಸಿ, ಪರ್ಯಾಯ ಕೃಷಿನೀತಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿ, ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ರಾಜ್ಯ ಸಮಿತಿಗಳು ಜಂಟಿಯಾಗಿ ಡಿಸೆಂಬರ್ ಕೊನೆಗೆ ಬೃಹತ್ ಪ್ರದರ್ಶನ ನಡೆಸಲು ಕರೆಕೊಟ್ಟಿವೆ.

ಸಂಸ್ಕೃತಿ ವರ್ತಮಾನ

ಢೋಂಗಿ ಧಾರ್ಮಿಕರನ್ನು ಬಯಲಿಗೆಳೆದ 'ಹಾಲು ಕುಡಿದ' ಗಣಪನ ಪವಾಡ!



ಸೆಪ್ಟೆಂಬರ್ 21ರ ಮಧ್ಯಾಹ್ನ - ಬೆಂಗಳೂರಿನಲ್ಲಿ, ಕರ್ನಾಟಕದಲ್ಲಿ ಮತ್ತ ನೋಡಿದರೆ ಇಡೀ ದೇಶದಲ್ಲಿ, ಅಷ್ಟೇ ಏಕೆ 'ಭೌತಿಕ' ಕಾರಣಗಳಿಗಾಗಿ ತಮ್ಮ 'ಅಧ್ಯಾತ್ಮಿಕ' ನಾಡನ್ನು ಬಿಟ್ಟು ಹೋದ ಹಿಂದೂಗಳು ಇರುವ ವಿಶ್ವದ ಎಲ್ಲಾ ಮೂಲೆಗಳಿಂದಲೂ ಸುದ್ದಿಯೋ ಸುದ್ದಿ - ಗಣಪ ಭಕ್ತರು ನೀಡಿದ ಹಾಲನ್ನು ಸೇವಿಸುತ್ತಿದ್ದಾನೆ ಎಂದು. ಹಲವು ಗಣೇಶ ದೇವಸ್ಥಾನಗಳೆದುರು ಜನ ಜಂಗುಳಿ, ಜಾತ್ರೆ, ನೂಕು ನುಗ್ಗಲು. ಸ್ವಾಭಾವಿಕವಾಗಿಯೇ ನಂತರ ಪೋಲೀಸ್ ವ್ಯಾನುಗಳು! ದಿಲ್ಲಿಯಲ್ಲಿ, ಬೆಂಗಳೂರಿನಲ್ಲಿ ಇತರೆಡೆ ವಯಸ್ಸಾದ ಭಕ್ತ-ಭಕ್ತೆಯರು ಮಾತ್ರವಲ್ಲ, ಜೀನ್ ಧಾರಿ-ಸಲ್ವಾರ್-ಕುರ್ತಾಧಾರಿ ಹದಿಹರೆಯದವರಿಂದ ಹಿಡಿದು ಬ್ರೀಫ್ ಕೇಸುಗಳನ್ನು ಹಿಡಿದ ಸೂಟುಬೂಟಿನ ಎಕ್ಸಿಕ್ಯೂಟಿವ್ ಗಳವರೆಗೆ ಗಣಪನ ಪವಾಡವನ್ನು 'ಕಣ್ಣಾರೆ' ನೋಡಲು ಧಾವಿಸಿದರು. ಮೈಕೈ ನೋಯಿಸಿಕೊಳ್ಳುವ ಜತೆಗೆ ಕೆಲವರು ಹಣವನ್ನೂ ಕಳೆದುಕೊಂಡರು. ಪವಾಡವನ್ನು ನಂಬುವ ಈ 'ಅಧ್ಯಾತ್ಮಿಕ' ಸ್ಪರ್ಧೆಗಳಲ್ಲಿ ಇಹಲೋಕದ ಹಾಲಿನ ಬೆಲೆ ದಿಲ್ಲಿಯಲ್ಲಿ ಲೀಟರಿಗೆ 80 ರೂ. ದಾಟಿದರೆ, ಮುಂಬೈಯಲ್ಲಿ 100-200ರೂ.ವರೆಗೂ ಹೋಯಿತು. ದಿಲ್ಲಿಯಲ್ಲಿ ತನ್ನ 200 ಮಿ.ಲೀ. ಹಾಲಿನ ಪ್ಯಾಕೇಟುಗಳ 'ಕೇವಲ' 5 ರೂಗೆ ಮಾರಿ ಭಾರೀ ಹಣ ಗಿಟ್ಟಿಸಿದ ರಾಜಕುಮಾರ್ ತಿವಾರಿ ಎಂಬಾತ ಗಂಭೀರವಾಗಿ ಉದ್ಗರಿಸಿದನಂತೆ - "ಆಶ್ಚರ್ಯವೇಕೆ? ದೇವರು ತಾನಿದ್ದೇನೆ ಎಂದು ತನ್ನ ಜನರಿಗೆ ಸೂಚಿಸುತ್ತಿದ್ದಾನೆ".

ಆದರೆ ಈ ದೈವಿಕ ಪವಾಡವನ್ನು ನೋಡುವ ಜನಗಳ ರಾಕ್ಷಸೀ ಉತ್ಸಾಹದಿಂದಾಗಿ ಪೋಲೀಸರನ್ನು ಕರೆಸಬೇಕಾಯಿತು ಎಂದು ದಿಲ್ಲಿಯ ಒಂದು ದೇವಸ್ಥಾನದ ಪೂಜಾರಿ ಗೋಳು ತೋಡಿಕೊಂಡ - "ಎಲ್ಲರೂ ದೇವಸ್ಥಾನದೊಳಗೆ ನುಗ್ಗಿದರು - ಗಣೇಶನಿಗೆ ಹಾಲು ಕುಡಿಸಲಾಗದಿದ್ದರೆ ಶಿವ, ಪಾರ್ವತಿಗಾದರೂ ಹಾಲು ಕುಡಿಸಲು ಪ್ರಯತ್ನಿಸಿದರು. ಅವರಿಗೆಲ್ಲಾ ಹೇಗೆ ತಿಳಿಹೇಳಲಿ ಎಂದು ನನಗೆ ತಿಳಿಯಲಿಲ್ಲ".

ಧರ್ಮ-ರಾಜಕೀಯದ ಬೆರಕೆ

ದಿಲ್ಲಿಯಲ್ಲಿ ಬಜೆಪಿ ಕಛೇರಿಯ ಆವರಣದಲ್ಲಿರುವ ದೇವಸ್ಥಾನಗಳಲ್ಲಿ ಅಡ್ವಾಣಿ ಮತ್ತಿತರ ಬಜೆಪಿ ಘಟಾನುಘಟಿಗಳೂ ಹಾಲು ಕುಡಿಸಿದರಂತೆ. ನಮ್ಮ ರಾಜ್ಯದ ವಿಧಾನ ಸಭೆ, ವಿಧಾನ ಪರಿಷತ್ತುಗಳಲ್ಲಂತೂ ಬಜೆಪಿ-ಕಾಂಗ್ರೆಸ್(ಐ) ಬಹಿಷ್ಕಾರದಿಂದಾಗಿ ಜನತಾದಳದ ಮಂತ್ರಿಗಳೇ ಗಣಪನ ಪವಾಡದ ಬಗ್ಗೆ ಚರ್ಚಿಗಿಳಿದರು.

ಇದು ಹೇಗಾಯಿತು? ಏನಾಯಿತು? ಕಡುಬು ತಿನ್ನುವುದಕ್ಕೆ ಹೆಸರಾದ, ಸಾಮಾನ್ಯವಾಗಿ ಹಾಲು ಕೇಳದ, ಚಮಚೆಯಲ್ಲಂತೂ ಏನೂ ಕುಡಿಯದ ಗಣಪನಿಗೇಕೆ ಅಂದು ಇದ್ದಕ್ಕಿದ್ದಂತೆ ಹಾಲಿನ ಹಸಿವು?

"ಇದು ಹಿಂದೂ ಶತಮಾನದ ಆರಂಭದ, ಹೊಸದೊಂದು ಹಿಂದೂ ಜಾಗೃತಿಯ ಸಂಕೇತ" ಎಂದು ಘೋಷಿಸಿದ್ದಾರೆ ವಿಶ್ವ ಹಿಂದೂ ಪರಿಷತ್ತಿನ ಜಂಟಿ ಕಾರ್ಯದರ್ಶಿ ಗಿರಿರಾಜ್ ಕಿಶೋರ್. ಈ 'ಪವಾಡ' ನಾಸ್ತಿಕರ ಕೆನ್ನೆಗೆ ಬಿಗಿದ ಏಟು, ಹಿಂದೂ ಧರ್ಮದ ಪ್ರಸಾರ ಹಾಗೂ ಇಡೀ ಸಮಾಜದ ಚಾರಿತ್ರ್ಯ ಸುಧಾರಣೆಗೆ ಇದು ನೆರವಾಗುತ್ತದೆ ಎಂದು ಅವರ ಭಾವನೆ. ಹಾಗಿದ್ದರೆ 'ಚಾರಿತ್ರ್ಯ' ಎಂದರೇನು ಎಂದು ಕೇಳಬೇಡಿ. ಮುಂದಿನ ಚುನಾವಣೆಗಳಲ್ಲಿ ಬಜೆಪಿಗೆ ಮತ ನೀಡಿ ಎಂದು ಹೇಳುವುದೊಂದು ಬಿಟ್ಟು ಮತ್ತೇನನ್ನೂ.


ಅವರ ಹೇಳಿಕೆ ತಿಳಿಸುತ್ತದೆ. ಎಂದು 'ಹಿಂದೂ' ದೈನಿಕದ ವಿಶೇಷ ವರದಿಗಾರರು ವಿಶ್ಲೇಷಿಸಿದ್ದಾರೆ. ವಿಹೆಚ್‌ಪಿ ಆರಂಭಿಸಿರುವ "ಏಕಾತ್ಮತಾ ಯಾತ್ರೆ"ಯ ಸಂದರ್ಭದಲ್ಲೇ ಈ 'ಪವಾಡ' ನಡೆದಿರುವುದು ಆಕಸ್ಮಿಕವೇನಲ್ಲ ಎಂದೂ ಹಲವರ ಅಭಿಪ್ರಾಯ. ಮುಂದಿನ ಲೋಕಸಭಾ ಚುನಾವಣೆಗಳ ಮೊದಲು ಇನ್ನೂ ಹಲವು ಇಂತಹ 'ಪವಾಡ'ಗಳು ನಡೆಯಲಿದೆ ಎಂದೂ ಹಲವರ ನಿರೀಕ್ಷೆ.

ಅತ್ತ ಧರ್ಮ-ರಾಜಕೀಯ ಮತ್ತು ಇನ್ನೇನೇನೋ ಬೆರೆಸುವುದರಲ್ಲಿ ನಿಷ್ಣಾತರೆನಿಸಿದ ಇನ್ನೂ ಬ್ಬರು, ಆಳುವ ವರ್ಗಗಳ ಹಲವು ರಾಜಕಾರಣಿಗಳ(ಈಗಿನ ಪ್ರಧಾನಮಂತ್ರಿಗಳೂ ಸೇರಿದಂತೆ) 'ಆಧ್ಯಾತ್ಮಿಕ ಗುರು' ಚಂದ್ರಾಸ್ವಾಮಿ ಕೂಡಾ ಈ 'ಪವಾಡ'ದ ಕೀರ್ತಿ ಗಿಟ್ಟಿಸುವಲ್ಲಿ ಹಿಂದೆ ಬೀಳಲಿಲ್ಲ. "ಚಂದ್ರಾಸ್ವಾಮಿ ಗಣೇಶನ ಅವತಾರ. ಅವರಿಗೆ ಸಿಟ್ಟು ಬಂದಿದೆ. ಅದ್ದರಿಂದ ದೇಶದ ಹಾಲನ್ನು ಪೂರ್ಣ ಭಕ್ಷಿಸಿ ಸೇಡು ತೀರಿಸಿಕೊಳ್ಳುತ್ತಿದ್ದಾರೆ" ಎಂಬ ವದಂತಿಗಳು ಒಂದು ಕಡೆಯಾದರೆ ಸ್ವತಃ ಚಂದ್ರಾಸ್ವಾಮಿ 'ಇದು ದೇವರ ಪವಾಡದ ಆರಂಭ ಮಾತ್ರ. ನಿನ್ನೆ ನಾನು ಗಣೇಶನ ಆವಾಹನೆ ಮಾಡಿದ್ದೆ. ಇದು ಅವನ ವರದಾನವೇ "ಇರಬಹುದು" ಎಂದರಂತೆ.

ಈ ನಡುವೆ ವಿಜ್ಞಾನಿಗಳು ದೇಶಾದ್ಯಂತ ಈ 'ಪವಾಡ'ದ ಹಿಂದಿರುವ ಭೌತಿಕ ಕಾರಣಗಳನ್ನು ಸಾಮಾಜಿಕ-ರಾಜಕೀಯ ಕಾರಣಗಳನ್ನು ಜನಗಳ ಮುಂದೆ ತೆರೆದಿಟ್ಟಾಗ(ಬಾಕ್ಸ್ ನೋಡಿ) ಆರಂಭದಲ್ಲಿ ಈ ವಿಹೆಚ್‌ಪಿಗಳ- ಚಂದ್ರಸ್ವಾಮಿಗಳ ತಂತ್ರಗಳಿಗೆ ಬಲಿಬಿದ್ದವರಲ್ಲಿ ಕೆಲವರಾದರೂ ಸತ್ಯವನ್ನು ಅರಿಯಲಾರಂಭಿಸಿದ್ದಾರೆ.

ಶೇಷನ್‌ರ ತಲೆಯಲ್ಲಿರುವುದು.....

ಆದರೆ ದೇಶವನ್ನೆಲ್ಲಾ ಶುದ್ಧಗೊಳಿಸುವುದಕ್ಕೇ ತನ್ನ ಅವತಾರವಾಗಿದೆ ಎಂದು ಬಲವಾಗಿ ನಂಬಿರುವ ಟಿ.ಎನ್. ಶೇಷನ್‌ರು ಈ ಎಲ್ಲಾ ವಿಜ್ಞಾನಿಗಳು ಮೂರನೇ ದರ್ಜೆಯ ವಿಜ್ಞಾನಿಗಳು, ಢೋಂಗಿ ವಿಜ್ಞಾನಿಗಳು ಎಂದೆಲ್ಲಾ ಹಾರಾಡಿದ್ದಾರೆ. "ಗಣೇಶನಿಗೆ ನೀಡಿದ ಹಾಲು ಎಲ್ಲಿ ಹೋಯಿತು?" ಎಂಬ ಘನ ಪ್ರಶ್ನೆ ಕೇಳಿದ್ದಾರೆ! ದೇಶಾದ್ಯಂತ ವಿಪರೀತ ಬೆಲೆಗೆ ಹರಿದ ಹಾಲನ್ನೆಲ್ಲಾ ವಿವಿಧ ಗಣಪಗಳು ಕುಡಿದಿದ್ದಾವೆಂದು ನಿಜಕ್ಕೂ ಈತ ನಂಬಿದ್ದಾರೆಯೇ? "ಇದನ್ನು ವಿಶ್ಲೇಷಣೆ ಮಾಡಿದ ವಿಜ್ಞಾನಿಗಳ ತಲೆಯಲ್ಲೇ ಒತ್ತಡವಿದೆ" ಎಂದ ಈ 'ಮಹಾಮಹಿಮ'ನ ತಲೆಯಲ್ಲಿ ಏನಿದೆ ಎಂದು ಈಗ ಯಾರಿಗೂ ಸಂಶಯವುಳಿದಿಲ್ಲ. ಚುನಾವಣೆಗಳಲ್ಲಿ ರಾಜಕೀಯ ದುರಾಚಾರಗಳ ಬಗ್ಗೆ ಹರಿಹಾಯುವ ಆದರೆ ಧರ್ಮವನ್ನು ರಾಜಕೀಯದೊಂದಿಗೆ ಬೆರೆಸುವ ದುರಾಚಾರದ ಬಗ್ಗೆ ಕಣ್ಣುಮುಚ್ಚಿಕೊಳ್ಳುವ, ಢೋಂಗಿ ಸ್ವಾಮಿ ಚಂದ್ರಾಸ್ವಾಮಿಯ ಭಕ್ತನಾದ ಈ ವ್ಯಕ್ತಿಯ ಈ ಆಣಿಮುತ್ತುಗಳು ಈ 'ಪವಾಡ'ದ ಢೋಂಗಿಗಳನ್ನೆಲ್ಲಾ ಬಯಲಿಗೆಳೆದಿವೆ, ಜತೆಗೆ ಆತನ ತಲೆಯನ್ನು



ದಿಲ್ಲಿಯಲ್ಲಿ ಗಣಪ ಕುಡಿದ ಹಾಲು ಎಲ್ಲಿ ಹೋಯಿತೆಂಬ ಶೇಷನ್‌ರ ಪ್ರಶ್ನೆಗೆ ಉತ್ತರ ನೀಡುತ್ತದೆ ಈ ಬಕೆಟ್. ಶೇಷನ್‌ರ ತಲೆಯಲ್ಲೇನಿದೆ ಎಂಬುದನ್ನೂ ಇದು ತೋರಿಸುತ್ತದೆ.

ಪವಾಡವಲ್ಲ, ಚಮತ್ಕಾರವಲ್ಲ....
ಸಾಮೂಹಿಕ ಸನ್ನಿಯ ಮೂಲಕ ಸ್ವಾರ್ಥ ಸಾಧನೆ

"ಗಣಪ" ಹೇಗೆ 'ಹಾಲು ಕುಡಿಯುತ್ತಾನೆ', 'ಏಕೆ' ಎಂಬ ಬಗ್ಗೆ ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಸಮಿತಿಯ ಹಾಗೂ ವಿವಿಧ ಜಿಲ್ಲಾ ಘಟಕಗಳು ವಿವರಣೆ ನೀಡಿ ಹೇಳಿಕೆಗಳನ್ನು ನೀಡಿವೆ. ಅದು ಹೀಗಿದೆ:

ಉಬ್ಬುತಗ್ಗುಗಳಿರುವ ಯಾವುದೇ ವಸ್ತು, ವಿಗ್ರಹ, ಅಮೃತಶಿಲೆಯ ಕಲ್ಲು, ಪಂಚಲೋಹ ಮುಂತಾದವುಗಳಲ್ಲಿ ಈ ಚಮತ್ಕಾರ ತೋರಿಸಲು ಸಾಧ್ಯ. ಸೊಂಡಿಲಾಗಲೀ, ಹೊಟ್ಟೆಯಲಾಗಲಿ, ಕಣ್ಣಾಗಲೀ, ಕಿವಿಯಾಗಲಿ, ಬೆನ್ನಿನ ಭಾಗವಾಗಲಿ ಅಥವಾ ಇನ್ನಾವುದೇ ಓರೆಕೋರೆ ಇರುವ ಸ್ಥಳದಲ್ಲಿ ಚಮಚದಿಂದ ನೀರು, ಹಾಲು, ಆಲ್ಕೋಹಾಲು ಮುಂತಾದ ಇನ್ನಾವುದೇ ದ್ರವವನ್ನು ಸೋಕಿಸಿದಾಗ ಉಂಟಾಗುವ ಸಂಪರ್ಕದಿಂದ ನಿಧಾನವಾಗಿ ಕೆಳಗೆ ಹರಿದುಹೋಗುವುದು ನಿಸರ್ಗದ ಸಹಜ ಸಂಗತಿ. ಆದರೆ ವಿಗ್ರಹ ಹಾಲು ಕುಡಿಯುತ್ತದೆ ಎಂಬ ಭ್ರಮೆಗೆ ಒಳಗಾದ ವ್ಯಕ್ತಿ, ಚಮಚದಲ್ಲಿರುವ ದ್ರವ ಖಾಲಿಯಾಗುವುದನ್ನು ಗಮನಿಸುತ್ತಾನೆಯೇ ಹೊರತು ಅದು ನಿಧಾನವಾಗಿ, ವಿಗ್ರಹದ ಶರೀರದ ಮೇಲ್ಮೈಯ ಮೇಲೆ ಕೆಳಕ್ಕೆ ಹರಿದು ಬರುವುದನ್ನು ಗಮನಿಸುವುದಿಲ್ಲ. ಜನಸಾಮಾನ್ಯರು ತಮ್ಮ 'ಕುಡಿಸುವ' ಪ್ರಯೋಗವನ್ನು ನಡೆಸಬಹುದು. ದ್ರವ ಕೆಳಗೆ ಹರಿಯುವುದನ್ನು ಸ್ಪಷ್ಟವಾಗಿ ಗುರುತಿಸಲು ವಿಗ್ರಹದ ಕೆಳಭಾಗವನ್ನು ಬೆರಳುಗಳಲ್ಲಿ ತಬ್ಬಿಕೊಂಡಾಗ ಆ ದ್ರವವು ಬೆರಳಿನ ಮೇಲೆ ಹರಿದು ಹೋಗುವುದನ್ನು ಗಮನಿಸಬಹುದು.

ಈ ಪ್ರಯೋಗವನ್ನು ನಾವು ಲೋಹದ ಗಣಪತಿಯ ವಿಗ್ರಹ, ಮಣ್ಣಿನ ಗಣಪತಿಯ ವಿಗ್ರಹ, ನಂದಿ, ಈಶ್ವರ, ನಾಯಿಮರಿ, ತರಕಾರಿಗಳು ಮತ್ತು ನಮ್ಮ ಬೆರಳಿನ ಗಂಟುಗಳ ಸ್ಥಾನದಲ್ಲಿಯೇ ಸೋಕಿಸಿ ದ್ರವವನ್ನು ಕುಡಿಸಿದ್ದೇವೆ.

ಈ ಪ್ರಯೋಗವನ್ನು ಎಲ್ಲರೂ ಕೈಗೊಂಡು, ಸತ್ಯವನ್ನು ತಿಳಿಯಬೇಕೆಂದು ಭಾರತ ಜ್ಞಾನ ವಿಜ್ಞಾನ ಸಮಿತಿಯು ಕಳಕಳಿಯ ಮನವಿ ಮಾಡಿಕೊಳ್ಳುತ್ತದೆ.

ಇಂತಹ ಸಾಮೂಹಿಕ ಸನ್ನಿ ಉಂಟಾಗುವ ಸಂದರ್ಭಗಳನ್ನು ಸಮಾಜದ ಪಟ್ಟಭದ್ರ ಹಿತಾಸಕ್ತಿಗಳು ದುರುಪಯೋಗಪಡಿಸಿಕೊಳ್ಳುವುದು ಖಂಡನೀಯ. ಭಾನಾಮತಿಯಂತಹ ಸಾಮೂಹಿಕ ಸನ್ನಿಯನ್ನು ಗುಲ್ಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಕೆಲವರು ದುರುಪಯೋಗಪಡಿಸಿಕೊಳ್ಳುವಂತೆಯೇ ಗಣಪತಿ ಹಾಲು ಕುಡಿಯುವ ಪ್ರಕರಣವನ್ನು ಚಂದ್ರಸ್ವಾಮಿ ಮತ್ತು ಅಂತಹ ವ್ಯಕ್ತಿಗಳು ದುರುಪಯೋಗಪಡಿಸಿ ಕೊಳ್ಳುವುದನ್ನು ಭಾರತ ಜ್ಞಾನ ವಿಜ್ಞಾನ ಸಮಿತಿ ಖಂಡಿಸುತ್ತದೆ.

ಗಣಪತಿ ಹಾಲು ಕುಡಿಯುವ ಈ ಸಾಮೂಹಿಕ ಸನ್ನಿಯನ್ನು ಭಾರದಾದ್ಯಂತ ವ್ಯವಸ್ಥಿತವಾಗಿ ಕಾಳ್ಗಿಚ್ಚಿನಂತೆ ಹಬ್ಬಿಸಿ ದುರುಪಯೋಗಪಡಿಸಿಕೊಳ್ಳುವ ಮೂಲಕ ಜನರನ್ನು ಮೌಢ್ಯದ ಕೂಪಕ್ಕೆ ಮತ್ತೆ ತಳ್ಳುತ್ತಿದ್ದಾರೆ. ಈ ಪ್ರಯತ್ನದ ಹಿಂದೆ ಇರುವ ಮೋಸವನ್ನು ಅರಿತು, ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವುದು ಇಂದಿನ ಅಗತ್ಯ.

ಎಲ್ಲಾ ವಿಜ್ಞಾನಾಸಕತ್ರೂ ಈ ಪ್ರಯೋಗವನ್ನು ನಡೆಸಿ, ಜನರಲ್ಲಿ ವೈಜ್ಞಾನಿಕ ಮಾಹಿತಿಯನ್ನು ನಿಡಬೇಕೆಂದು ಭಾರತ ಜ್ಞಾನ ವಿಜ್ಞಾನ ಸಮಿತಿ ಕರೆ ನೀಡುತ್ತದೆ.

❋ ❋ ❋ ❋ ❋ ❋ ❋

ಮಂಗಳೂರಿನ ತಮ್ಮ ಪ್ರಯೋಗಾಲಯದಲ್ಲಿ ಈ 'ಪವಾಡ'ದ ಹಿಂದಿರುವ ಭೌತಿಕ ನಿಯಮಗಳನ್ನು ಪ್ರದರ್ಶಿಸುತ್ತಿದ್ದ ಮೆಡಿಕಲ್ ಕಾಲೇಜಿನ ಪ್ರಧ್ಯಾಪಕ ಹಾಗೂ ಭಾರತ ಜ್ಞಾನ ವಿಜ್ಞಾನ ಸಮಿತಿಯ ದ.ಕ. ಜಿಲ್ಲಾ ಘಟಕದ ಅಧ್ಯಕ್ಷ ಪ್ರೊ. ನರೇಂದ್ರ ನಾಯಕರ ಮೇಲೆ 'ಹಿಂದೂ ಯುವ ಸೇನೆ'ಯ ಪ್ರಾಣಾಂತಿಕ ಹಲ್ಲೆ, ನಂತರ ಕಾವಿ ಪಡೆಗಳವರೆಲ್ಲಾ ಸೇರಿಕೊಂಡು ಈ ಪ್ರಾಧ್ಯಾಪಕರು ಹಿಂದೂ ನಂಬಿಕೆಗಳನ್ನು ಪ್ರಶ್ನಿಸುತ್ತಾ ಕೋಮು ಗಲಭೆ ಹುಟ್ಟು ಹಾಕುತ್ತಿದ್ದಾರೆ ಎಂದು ಜಿಲ್ಲಾಧಿಕಾರಿಗೆ ದೂರು ಕೊಡುವ ಪ್ರಯತ್ನ ನಡೆಸಿದ್ದಾರಂತೆ!

ಗಣಪನ 'ಪವಾಡ'ದ ಹಿಂದೆ ಏನಿದೆ ಅಥವಾ ಯಾರಿದ್ದಾರೆ, ಯಾಕಿದ್ದಾರೆ ಎಂದು ಬೇರೆ ಹೇಳಬೇಕೇ?

ದೇಶದ ಪ್ರಖ್ಯಾತ ಭೌತ ಶಾಸ್ತ್ರಜ್ಞ ಹಾಗೂ ದೂರದರ್ಶನದಲ್ಲಿ ಜನಪ್ರಿಯ ವಿಜ್ಞಾನ ಧಾರಾವಾಹಿ 'ಟರ್ನಿಂಗ್ ಪಾಯಿಂಟ್' ಮೂಲಕ ಜನಪ್ರಿಯವಾಗಿರುವ ಪ್ರೊ. ಯಶಪಾಲ್ ಇದು ಪವಾಡವಲ್ಲ, ಕೇವಲ ಭ್ರಮೆ ಎಂದು ವಿವರಿಸಿದ್ದಾರೆ.

❋ ❋ ❋ ❋ ❋ ❋ ❋

ವಿಗ್ರಹಕ್ಕೆ ಚಮಚೆಯಲ್ಲಿ ಕುಡಿಸಿದ ಹಾಲು ಕಣ್ಣಿಗೆ ಕಾಣಿಸದ ಬಿಳಿಯ ಪೊರೆಯ ರೂಪದಲ್ಲಿ ಕೆಳಗೆ ಹರಿದು ಬರುತ್ತದೆ. ಭಕ್ತ ಉನ್ಮಾದದ ಭರದಲ್ಲಿ ಅದನ್ನು ಕಾಣಲಾರರು ಎಂದಿದ್ದಾರೆ ರಾಷ್ಟ್ರೀಯ ಭೌತ ಶಾಸ್ತ್ರ ಪ್ರಯೋಗಾಲಯದ ಹಿರಿಯ ವಿಜ್ಞಾನಿ ಡಾ. ಹರಿಓಂ ಉಪಾಧ್ಯಾಯ.

❋ ❋ ❋ ❋ ❋ ❋ ❋

ಇದು ಸಮೂಹ ಮಾನಸಿಕ ಕಲ್ಪನೆ ಮತ್ತು ಕೆಲ ವೈಜ್ಞಾನಿಕ ತತ್ವಗಳ ಫಲ ಎಂದಿದ್ದಾರೆ ಮುಂಬೈಯ ನೆಹರೂ ತಾರಾಲಯದ ನಿರ್ದೇಶಕ ವಿ.ಎಸ್. ವೆಂಕಟವರ್ಧನ್.

ಈ ಪವಾಡವೆಂಬ ಭ್ರಮೆಯ ಸೃಷ್ಟಿ ಏಕೆ?

'ದಿಲ್ಲಿ ವಿಜ್ಞಾನ ವೇದಿಕೆ' (DSF) "ಪವಾಡ"ದ ಬಗ್ಗೆ ಜನಗಳ ಧಾರ್ಮಿಕ ಭಾವನೆಗಳ ದುರುಪಯೋಗಪಡಿಸಿಕೊಳ್ಳಲು ಕೆಲವು ಗುಂಪುಗಳು ಪ್ರಯತ್ನಿಸಿರುವುದರ ಬಗ್ಗೆ ತೀವ್ರವಾಗಿ ಟೀಕಿಸಿದೆ. ಒಂದು ಪವಾಡ ಮೂಡಿಬರುತ್ತಿದೆ ಎಂಬ ಕಲ್ಪನೆಯನ್ನು ಸೃಷ್ಟಿಸಲು ದೊಡ್ಡ ಪ್ರಮಾಣದ ಯೋಜನೆ ನಡೆದಿದೆ ಎಂದಿರುವ ವೇದಿಕೆ ಕೆಲವು ಕೋಮುವಾದಕ್ಕೆ ಕುಖ್ಯಾತವಾದ ಸಂಘಟನೆಗಳು ಹಾಗೂ ಢೋಂಗಿ ಧರ್ಮ ಪುರುಷರು ಈ ವಿದ್ಯಮಾನ ಕಂಡು ಸಂತೋಷಪಟ್ಟಿರುವ ಬಗ್ಗೆ ಪತ್ರಿಕಾ ಸುದ್ದಿಗಳು ಬಹಳ ಆತಂಕಕಾರಿ ಎಂದಿದೆ.

ಇಂತಹ ಒಂದು ಪವಾಡದ ಭ್ರಮೆ ಸೃಷ್ಟಿಸಲು ಸಾಮಾನ್ಯವಾಗಿ ಪೂಜೆ-ಪುನಸ್ಕಾರಗಳಲ್ಲಿ ಕಾಣಬಂದ ಕೆಲವು ಆಚರಣೆಗಳನ್ನು ಬಳಸಿಕೊಂಡದ್ದನ್ನು ಕಂಡಾಗ ಇದರ ಹಿಂದೆ ಏನೋ ಸಂಚು ಇದೆಯೆಂಬ ಸಂಶಯ ಬಲಗೊಳ್ಳುತ್ತದೆ ಎಂದು ವೇದಿಕೆ ಅಭಿಪ್ರಾಯಪಟ್ಟಿದೆ. ದೇವತೆಗಳಿಗೆ ನೈವೇದ್ಯ ಮಾಡಲು ಚಮಚೆಗಳನ್ನು ಬಳಸುವುದಿಲ್ಲ, ಹಾಲಿಗೆ ಸಾಮಾನ್ಯವಾಗಿ ಗಂಗಾಜಲ ಸೇರಿಸಲಾಗುತ್ತದೆ, ಗಣೇಶನಿಗಂತೂ ಸಾಮಾನ್ಯವಾಗಿ ಹಾಲಿನ ನೈವೇದ್ಯ ನೀಡುವುದಿಲ್ಲ ಎಂದು ದೆಹಲಿ ವಿಜ್ಞಾನ ವೇದಿಕೆ ನೆನಪಿಸಿದೆ.

ಈ ಘಟನೆ ನಡೆದ ಸಮಯವೂ ಗಮನಾರ್ಹ. ದಸರಾ, ದುರ್ಗಾ ಪೂಜೆಯಂತಹ ಹಬ್ಬಗಳ ವಾರದ ಮೊದಲು, ಕೆಲವು ಸಂಘಟನೆಗಳು 'ಏಕಾತ್ಮತಾ ಯಾತ್ರೆ' ನಡೆಯುವ ಮೊದಲು ಈ ಭ್ರಮೆಯ ಸೃಷ್ಟಿಯನ್ನು ನೋಡಿದರೆ ಅದರ ಉದ್ದೇಶ ಸ್ಪಷ್ಟವಾಗಿಯೂ ಧಾರ್ಮಿಕ ಭಾವನೆಗಳನ್ನು ಉನ್ಮಾದದ ಮಟ್ಟಕ್ಕೇರಿಸಿ ಕೋಮು ಉದ್ವೇಗವನ್ನು ಸೃಷ್ಟಿಸಲು ನೆಲ ಹದಗೊಳಿಸುವುದು ಎಂದು ದಿಲ್ಲಿ ವಿಜ್ಞಾನ ವೇದಿಕೆ ಹೇಳಿದೆ.

ವಂಚನೆಯ ಸಂಚಿನ ತನಿಖೆಯಾಗಲಿ

ಹಲವಾರು ವಿಜ್ಞಾನಿಗಳು, ಸಮಾಜ ಶಾಸ್ತ್ರಜ್ಞರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಈ ಹಾಲಿನ ಪವಾಡಗಳ ಹಿಂದೆ ವಂಚನೆ ನಡೆಸುವ ಒಂದು ಸಂಚು ಇದೆಯೇ ಎಂಬ ಬಗ್ಗೆ ತನಿಖೆ ನಡೆಸಬೇಕು ಎಂದು ಕೇಂದ್ರ-ರಾಜ್ಯ ಸರಕಾರಗಳನ್ನು ಒತ್ತಾಯಿಸಿದ್ದಾರೆ. ಜನರ ಧಾರ್ಮಿಕ ಭಾವನೆಗಳನ್ನು ಗೌರವಿಸುತ್ತಲೇ ನಾವು ಸಮಾಜದಿಂದ ಕುರುಡು ಭಾವನೆ, ಮೂಢನಂಬಿಕೆಗಳನ್ನು ನಿರ್ಮೂಲ ಮಾಡುವ ಹಾಗೂ ಜನಗಳಲ್ಲಿ ಒಂದು ವೈಜ್ಞಾನಿಕ ಹಾಗೂ ವಿಮರ್ಶಾತ್ಮಕ ನಿಲುವನ್ನು ಬೆಳೆಸುವ ಅಗತ್ಯವೂ ಇದೆ ಎಂದು ಗಣಿತಶಾಸ್ತ್ರ ಸಂಶೋಧನಾ ಸಂಸ್ಥೆ, ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆ, ಸಿಪಿಕ್ ವಿಜ್ಞಾನ ಫೌಂಡೇಶನ್, ಐಐಟಿ ಮುಂತಾದ ವಿದ್ಯಾ ಸಂಸ್ಥೆಗಳ ಪ್ರಾಧ್ಯಾಪಕರುಗಳು ವಿದ್ಯಾರ್ಥಿಗಳು ಸಹಿ ಮಾಡಿರುವ ಈ ಹೇಳಿಕೆ ಒತ್ತಿ ಹೇಳಿದೆ.

ಈ ಪವಾಡಗಳನ್ನು ನಂಬಿದ ಜನರ ಮುಗ್ಧತೆಯ ಲಾಭ ಪಡೆಯಲು ಹಿಂದುತ್ವದ ಕೋಮುವಾದಿ ಶಕ್ತಿಗಳು ಪ್ರಯತ್ನಿಸಿರುವುದು ಇಂತಹ ಊಹಾ-ಪೋಹಗಳನ್ನು ಹರಡಿಸುವ ಹಿಂದೆ ರಾಜಕೀಯ ಕುಚೋದ್ಯ ಇದೆ ಎಂಬುದನ್ನು ಸ್ಪಷ್ಟಪಡಿಸಿದೆ ಎಂದೂ ಈ ಹೇಳಿಕೆ ಅಭಿಪ್ರಾಯಪಟ್ಟಿದೆ.

ರಾಜಕೀಯ ಸಂತರು ದೇಶವನ್ನು ಅಪಹಾಸ್ಯಕ್ಕೆ ಈಡು ಮಾಡಿದ್ದಾರೆ

-ಮುಖ್ಯಮಂತ್ರಿಗಳು

❑ ಗಣೇಶನಿಗೆ ಹಾಲು ಕುಡಿಸುವ ಮೂಲಕ ರಾಜಕೀಯ ಸಂತರು ಹೊಸ ದೇಶದವರು ನಮ್ಮನ್ನು ಲಘುವಾಗಿ ನೋಡಿ ಅಪಹಾಸ್ಯಕ್ಕೆ ಈಡು ಮಾಡುತ್ತಿದ್ದಾರಲ್ಲ ಎಂಬ ಚಿಂತೆ ನನಗೆ ಕಾಡಿದೆ ಎಂದು ಮುಖ್ಯ ಮಂತ್ರಿ ದೇವೇಗೌಡರು ವಿಧಾನಸಭೆಯಲ್ಲಿ ವಿಷಾದ ವ್ಯಕ್ತಪಡಿಸಿದರು.

❑ ಅವರು ಹೀಗೆ ಹೇಳುವಾಗ ವಿಧಾನಸಭೆಯನ್ನು ಬಹಿಷ್ಕರಿಸಿ ಹೊರಗಿದ್ದ ಬಜೆಪಿ ಸದಸ್ಯರು ಮುಖ್ಯಮಂತ್ರಿಗಳು ಗಂಗಾ ನದಿಯ ಬಗ್ಗೆ ಅವಹೇಳನ ಮಾಡಿದ್ದಾರೆ ಎಂದು 'ಧರಣಿ' ನಡೆಸುತ್ತಿದ್ದರು - ತಾವು ತಮ್ಮ ಕೋಮುವಾದಿ ರಾಜಕೀಯದಿಂದ ಗಂಗಾಜಲದ ಕಲಬೆರಕೆ ಮಾಡಿದ್ದನ್ನು ಮರೆಮಾಚುತ್ತಾ.

❑ ಬಹುಶ- ಸದನದಲ್ಲಿ ಅವರ ಇರವನ್ನು ತುಂಬಲೆಂದೋ ಜನತಾದಳದ ಸದಸ್ಯರು-ಮಂತ್ರಿಗಳು ಪವಾಡವನ್ನು ನಂಬುವುದು ವಿಶ್ವಾಸದ ಪ್ರಶ್ನೆ ಎಂದೆಲ್ಲಾ ವಾದ-ವಿವಾದ ನಡೆಸಿದರು. ಸಚಿವ ದೇಶಪಾಂಡೆ ಹಾಗೂ ನಾಗೇಗೌಡರ ಮನೆಗಳ ಗಣೇಶ ವಿಗ್ರಹಗಳು 'ಹಾಲು ಕುಡಿದರೆ' ಎಂ.ಸಿ.ನಾಣಯ್ಯನವರ ಪ್ರಯತ್ನ ಮಾತ್ರ ಸಫಲವಾಗಲಿಲ್ಲವಂತೆ. ಇತರ ಸಚಿವರಾದ ಜಾಲಪ್ಪ, ಜಯಕುಮಾರ್, ದೇಶಪಾಂಡೆ - ನಾಗೇಗೌಡರ ಮಾತುಗಳ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾ "ಮೌಢ್ಯದ ಮಾನಸಿಕ ಸ್ಥಿತಿ ಆಳವಾದದ್ದು" ಎಂದರಂತೆ.

❑ ಗಣಪ ಹಾಲು ಕುಡಿಯುವ ಈ ಪುಕಾರು ಮೊದಲು ಬಂದದ್ದು ಬಜೆಪಿ ಆಳ್ವಿಕೆಯ ದಿಲ್ಲಿ, ಮುಂಬೈ, ಜಯಪುರಗಳಿಂದ ಎಂದೂ ಕೆಲವರು ಆಪಾದಿಸಿದ್ದಾರೆ.

❑ ಒರಿಸ್ಸಾದಲ್ಲಿ ಹಾಲಿನ ಅಭಿಷೇಕ ಮಾಡುವ ಗಣೇಶ ದೇವಸ್ಥಾನಗಳನ್ನು ಮುಚ್ಚುವಂತೆ ಮುಖ್ಯಮಂತ್ರಿ ಪಟ್ನಾಯಕ್ ಆದೇಶ ನೀಡಿದರಂತೆ. ಕೆಲ ಗುಂಪುಗಳು ಸ್ವಹಿತ ಸಾಧನೆಗೆ ಈ ವದಂತಿ ಹರಡಿಸಿದ್ದಾರೆ ಎಂದು ಅವರು ಆಪಾದಿಸಿದ್ದಾರೆ. ಅಲ್ಲಿ ಬಜೆಪಿ ಇದರ ವಿರುದ್ಧ 'ಧರಣಿ' ನಡೆಸಿದ ವರದಿ ಇನ್ನೂ ಬಂದಿಲ್ಲ.

❑ ಮುಂಬೈಯಲ್ಲಿ ಮುಖ್ಯಮಂತ್ರಿ ಜೋಷಿಯವರ ಮನೆಯ ಗಣಪ ಒಂದು ಚಮಚೆ ಹಾಲು ಕುಡಿದನಂತೆ. ಆದರೆ ಉಪಮುಖ್ಯ ಮಂತ್ರಿ ಮುಂಡೆಯವರು ಇವು ಕೇವಲ ವದಂತಿಗಳು ಎಂದರು. ಜತೆಗೆ ಇದರ ಹಿಂದೆ ಸಂಚೇನೂ ಇಲ್ಲ ಎಂದೂ ಹೇಳಿದರಂತೆ.

❑ ರಾಜಾಸ್ತಾನದ ರಾಜಧಾನಿ ಜಯಪುರದಲ್ಲಿ ಉಪ ಮುಖ್ಯಮಂತ್ರಿ ಹರಿಶಂಕರ್ ಭಾಬ್ರಾ 'ಉದ್ಯೋಗ ಭವನ'ದ ಆವರಣದಲ್ಲಿರುವ ಗಣಪ ಹಾಲು ಕುಡಿದ ಎಂದರೆ ಮ್ಯಾಜಿಸ್ಟ್ರೇಟ್ ಈ ಸುದ್ದಿ ಆಧಾರಹೀನ ಎಂದರು.

❑ ಸಿಕ್ಕಿಂನಲ್ಲಿ ಮುಖ್ಯಮಂತ್ರಿ ಜಿಯೋಂಗ್ ಲಿಪಾಂಗ್ ದೇವಸ್ಥಾನದಿಂದ ಮರಳಿದಾಗ ಮುಖ ಅರಳಿತ್ತಂತೆ.

ಕರ್ನಾಟಕ
ಸುದ್ದಿ ಸಮಾಚಾರ

ವಳ್ಳಿಯಪ್ಪ ಟೆಕ್ಸ್‌ಟೈಲ್ಸ್, ಸಾಮ್ರಾಟ್ ಅಶೋಕ್ ಕಾರ್ಮಿಕರ ಹೋರಾಟಕ್ಕೆ ಬೆಂಬಲ

ಮುಖ್ಯಮಂತ್ರಿ ಮನೆ ಮುಂದೆ ಧರಣಿ



ಸೆ.27 ರಂದು ಬೆಂಗಳೂರಿನಲ್ಲಿ ಸಾವಿರಾರು ಕಾರ್ಮಿಕರು ಸಿಐಟಿಯು ಕರೆಯ ಮೇರೆಗೆ ಒಂದು ದಿನದ ಮುಷ್ಕರವನ್ನು ಮಾಡಿ, ಮುಖ್ಯ ಮಂತ್ರಿಯವರ ಮನೆಯ ಮುಂದೆ ಧರಣಿ ಮಾಡಿ, ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಮತ್ತು ಸಾಮ್ರಾಟ್ ಅಶೋಕ್ ಕಾರ್ಖಾನೆಗಳ ಕಾರ್ಮಿಕರ ಹೋರಾಟಕ್ಕೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿದರು. ಮಹಿಳಾ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿಕಾರ್ಯಕ್ರಮದಲ್ಲಿಭಾಗವಹಿಸಿದ್ದರು.

ಮುಖ್ಯಮಂತ್ರಿಯವರು ಬೆಂಗಳೂರಿನಲ್ಲಿಲ್ಲವಾದ್ದರಿಂದ ಅವರ ಪರವಾಗಿ ಗೃಹ ಸಚಿವರಾದ ಪಿ.ಜಿ.ಆರ್.ಸಿಂಧ್ಯಾ ರವರು ಸಿಐಟಿಯು ಮನವಿಯನ್ನು ಸ್ವೀಕರಿಸಿ ಧರಣಿ ನಿರತ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿ ಈ ಎರಡು ಕಾರ್ಖಾನೆಯ ಕಾರ್ಮಿಕರ ಸಮಸ್ಯೆಗಳನ್ನು ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಜಂಟಿ ಸಭೆ ಕರೆದು ಶೀಘ್ರವಾಗಿ ಇತ್ಯರ್ಥ ಮಾಡುತ್ತೇವೆಂದು ಸರ್ಕಾರದ ಪರವಾಗಿ ಆಶ್ವಾಸನೆ ಕೊಟ್ಟರು.

ಸಭೆಯನ್ನುದ್ದೇಶಿಸಿ ಸಿಐಟಿಯು ರಾಜ್ಯಾಧ್ಯಕ್ಷರಾದ ಕಾಂ. ಸೂರ್ಯನಾರಾಯಣ ರಾವ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ. ಕೆ.ಎಸ್. ಸುಬ್ರಮಣ್ಯ, ಕಾರ್ಯದರ್ಶಿ ಆರ್.ಶ್ರೀನಿವಾಸ್ ಮತ್ತಿತರ ಕಾರ್ಮಿಕ ನಾಯಕರು ಮಾತನಾಡಿದರು. ಬೆಳಿಗ್ಗೆ 9-30 ಗಂಟೆಗೆ ಪ್ರಾರಂಭವಾದ ಧರಣಿ ಕಾರ್ಯಕ್ರಮ ಮಧ್ಯಾಹ್ನ 1ಗಂಟೆಗೆ ಮುಕ್ತಾಯವಾಯ್ತು.

ಬಲಿಷ್ಠ ಸಂಘಟನೆ ಕಟ್ಟಲು ಪವರ್‌ಲೂಂ ಕಾರ್ಮಿಕರ ಸಮಾವೇಶದ ಪಣ

ಬೆಂಗಳೂರು: ಸೆಪ್ಟೆಂಬರ್ 25 ರಂದು ಎ.ಡಿ.ಎ ರಂಗಮಂದಿರದಲ್ಲಿ ಬೆಂಗಳೂರಿನ ಅಸಂಘಟಿತ ಕಾರ್ಮಿಕ ವಲಯದ ಒಂದು ಭಾಗವಾದ ಪವರ್‌ಲೂಂ ಕಾರ್ಮಿಕರ ಪ್ರಥಮ ಸಮಾವೇಶವುಸಿಐಟಿಯುನೇತೃತ್ವದಲ್ಲಿನಡೆಯಿತು. ಸಮಾವೇಶವು ಸಂಘಟನೆಯನ್ನು ಬಲಪಡಿಸಲು ಒಕ್ಕೊರಲಿನ ನಿರ್ಧಾರ ತೆಗೆದುಕೊಂಡಿತು.

ಸಮಾವೇಶವನ್ನು ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರು ಉದ್ಘಾಟಿಸಿ ಮಾತನಾಡುತ್ತಾ ಇಂದು ಲಕ್ಷಾಂತರ ಅಸಂಘಟಿತ ಕಾರ್ಮಿಕ ವಲಯಕ್ಕೆ ಮತ್ತು ಉದ್ಯಮದ ಅಸ್ತಿತ್ವಕ್ಕೆ ಗಂಡಾಂತರ ಬರುತ್ತಿರುವುದರಿಂದ ಪ್ರಬಲವಾದ ಹೋರಾಟ ಅನಿವಾರ್ಯವಾಗಿದೆ. ಜನತೆಯ ಮಾನ ಮುಚ್ಚುವ ಪವರ್ ಲೂಂ, ಕೈಮಗ್ಗ ಹಾಗೂ ಇತರೆ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಜೀವನಕ್ಕೆ ಬೇಕಾದ ಒಂದು ಕಾನೂನನ್ನು ಸರ್ಕಾರ ಜಾರಿಗೆ ತಂದಿಲ್ಲ ಎಂಬುವುದು "ನಾಗರೀಕ ಸಮಾಜ ತಲೆತಗ್ಗಿಸುವಂತ" ವಿಚಾರವಾಗಿದೆ ಎಂದು ಸರ್ಕಾರದ ನೀತಿಯನ್ನು ಕಟುವಾಗಿ ಟೀಕಿಸಿದರು.

ಸಂಘಟಿತ ಕಾರ್ಮಿಕರಿಗೆ ಇಂದು ಎಲ್ಲಾ ಅವಶ್ಯಕತೆಗಳು ಇಲ್ಲದೆ ಇದ್ದರೂ ಕೂಡ ಕನಿಷ್ಠ ಅವಶ್ಯಕತೆಗಳನ್ನು ಸಂಘಟನಾ ಹೋರಾಟದ ಮೂಲಕ ಪಡೆದು ಕೊಂಡಿದ್ದಾರೆ. ಹೆಚ್ಚು ಶೋಷಣೆಗೆ ಒಳಗಾಗುತ್ತಿರುವ ಅಸಂಘಟಿತ ಕಾರ್ಮಿಕರು ಸಂಘಟಿತರಾಗುತ್ತಿಲ್ಲ, ಬದಲಿಗೆ ಶೋಷಣೆ ಮಾಡುವಂತಹ ಮಾಲೀಕರು ಇಂದು ಬಲಿಷ್ಠವಾದ ಸಂಘಟನೆ ಕಟ್ಟಿಕೊಂಡಿದ್ದಾರೆ ಎಂದರು. ಮಾಲೀಕರು ಒಂದು ದಿನದ ಮುಷ್ಕರ ಮಾಡಿದರೆ ಮಣಿಯುವ ಸರ್ಕಾರ ಕಾರ್ಮಿಕರು ವರ್ಷಾನುಗಟ್ಟಲೆಗಳಿಂದ ನಿರಂತರ ಹೋರಾಟ ನಡೆಸುತ್ತಿದ್ದರೂ ಕೂಡ ಗಮನ ಹರಿಸುತ್ತಿಲ್ಲ ಎಂದು ಹೇಳಿದರು.

ಕಾರ್ಮಿಕ ಇಲಾಖೆ ಕಾರ್ಮಿಕ ಇಲಾಖೆಯಾಗಿ ಉಳಿಯದೆ ಇಂದು ಮಾಲೀಕರ ಇಲಾಖೆಯಾಗಿ ಪರಿವರ್ತನೆಗೊಂಡಿದೆ, ಯಾವಾಗಲೂ ಕಾರ್ಮಿಕ ಕಛೇರಿಯಲ್ಲಿ ಮಾಲೀಕರೆ ತುಂಬಿರುತ್ತಾರೆ ಎಂದರು.

ಒಬ್ಬ ಐ.ಎ.ಎಸ್. ಅಧಿಕಾರಿ ಶಿಕ್ಷೆಗೊಳಗಾಗಿ ಜೈಲಿಗೆ ಹೋದರೆ ಸರ್ಕಾರ ಮತ್ತು ಪ್ರತಿಪಕ್ಷಗಳು ಸದನವನ್ನು ದುರುಪಯೋಗ ಪಡಿಸಿಕೊಂಡು ಚರ್ಚಿಸುತ್ತವೆ. ಆದರೆ ಲಕ್ಷಾಂತರ ಕಾರ್ಮಿಕರ ಕಠೋರವಾದ ಸಮಸ್ಯೆಗಳ ಬಗ್ಗೆ ಚಕಾರವೆತ್ತುತ್ತಿಲ್ಲ ಎಂದು ಸರ್ಕಾರ ಮತ್ತು ಪ್ರತಿಪಕ್ಷಗಳ ನೀತಿಯನ್ನು ಖಂಡಿಸಿದರು. ಆದ್ದರಿಂದ ಪವರ್ ಲೂಂ ಮತ್ತು ಇನ್ನಿತರೆ ಅಸಂಘಟಿತ ಕಾರ್ಮಿಕರು ಸಂಘಟಿತರಾಗುವಂತೆ ಕರೆ ನೀಡಿದರು.

ಸಮಾವೇಶಕ್ಕೆ ಶುಭಕೋರಿ ಕೈಮಗ್ಗ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷರಾದ ಕಾಂ.ನಿತ್ಯಾನಂದಸ್ವಾಮಿ, ಕೃಷಿಕೂಲಿಕಾರರ ಸಂಘದ ಕಾರ್ಯದರ್ಶಿ ಕಾಂ.ಪಿ. ಜಗನ್ನಾಥ್, ಮೈಕೋ ಕಾರ್ಮಿಕರಸಂಘದ ಶಂಕರೇಗೌಡ ಮಾತನಾಡಿದರು. ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಕಾಂ.ಪಿ.ರಾಮಚಂದ್ರರಾವ್ ಮಾತನಾಡುತ್ತಾ ಪವರ್ ಲೂಂ ಕಾರ್ಮಿಕರಿಗೆ ಕಾರ್ಖಾನೆ ಕಾಯಿದೆ ಜಾರಿಯಲಿಲ್ಲ ಎಂದರೆ ಆಶ್ಚರ್ಯವಾಗುತ್ತದೆ. ಹಿಂದೆ "ಕೊಡುವ ಕೂಲಿ ಗುಲಾಮನಿಗೆ" ಎಂಬ ಪದ್ಧತಿ ಇತ್ತು.ಆದರೆ ಇಂದು ಕಾರ್ಮಿಕ ಗುಲಾಮನಲ್ಲ ಎಂದು ಹೇಳಿ ಸಮಾವೇಶಕ್ಕೆ ಶುಭಕೋರಿ ನಿಮ್ಮ ಬೇಡಿಕೆಗಳ ಈಡೇರಿಕೆಗಾಗಿ ಬೆಂಗಳೂರು ಬಂದ್‌ನಂತಹ ಕಾರ್ಯಕ್ಕೂ ತಯಾರಾಗಬೇಕೆಂದು ಕರೆ ನೀಡಿದರು.

ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಂ.ಎಸ್.ಸೂರ್ಯನಾರಾಯಣರಾವ್ ಮಾತನಾಡಿ ಸರ್ಕಾರ ಇನ್ನೂ 15 ದಿನಗಳೊಳಗಾಗಿ ನಿಮ್ಮ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಹೇಳಿ ಆರು ತಿಂಗಳು ಕಳೆದರೂ ಕೇವಲ ಕನಿಷ್ಠ ಕೂಲಿಯ ಕರಡನ್ನು ಮಾತ್ರ ಬಿಡುಗಡೆ ಮಾಡಿದೆ.ಅದನ್ನು ಜಾರಿಗೆ ತರುವಂತಹ ಕಾನೂನಿನ ಬಗ್ಗೆ ಇನ್ನೂ ಚಕಾರವೆತ್ತಿಲ್ಲ ಎಂದು ಸರ್ಕಾರದ ನೀತಿಯನ್ನು ಖಂಡಿಸಿದರು. ಈ ವ್ಯವಸ್ಥೆಯು ಬಂಡವಾಳಿಗರ ಪರವಾಗಿರುವುದರಿಂದ ಕಾರ್ಮಿಕರು ತಮ್ಮ ಹಕ್ಕುಗಳನ್ನು ಪಡೆಯಬೇಕಾದರೆ ಪ್ರಬಲವಾದ ಸಂಘಟನೆ ಕಟ್ಟಿ ಹೋರಾಟಕ್ಕೆ ಮುಂದಾಗಲು ಕರೆ ನೀಡಿದರು.

ಸಮಾವೇಶವು ಕೆಲವು ನಿರ್ಣಯಗಳನ್ನು ತೆಗೆದುಕೊಂಡಿತು. ಕಾಂ.ಆರ್.ಶ್ರೀನಿವಾಸ್‌ರವರು ನಿರ್ಣಯಗಳನ್ನು ಮಂಡಿಸಿದರು.

ಕಾರ್ಮಿಕರಿಗೆ ಒಂದು ತಿಂಗಳ ಸಂಬಳವನ್ನು ಬೋನಸ್ ರೂಪದಲ್ಲಿ ಕೊಡಬೇಕು, ಅಕ್ಟೋಬರ್ 31 ರ ಒಳಗಾಗಿ ಕಾನೂನನ್ನು ಜಾರಿಗೆ ತರಬೇಕು, ಬೋನಸ್‌ಗಾಗಿ ಒತ್ತಾಯಿಸಿ ಇದೇ 30ರಂದು ಬ್ಯಾಡ್ಜ್ ಧರಿಸಿ ಕೆಲಸಮಾಡುವುದು, ಕಾರ್ಮಿಕರಿಂದ ಆಯುಧ ಪೂಜೆಯ ಸಮಯದಲ್ಲಿ ಖಾಲಿ ಹಾಳೆಯ ಮೇಲೆ ಸಹಿ ಪಡೆದು ಮೋಸ ಮಾಡಬಾರದೆಂದು ಮಾಲಿಕರಿಗೆ ಎಚ್ಚರಿಸುತ್ತಾ ಯಾವುದೇ ಕಾರಣಕ್ಕೂ ಖಾಲಿ ಹಾಳೆಯ ಮೇಲೆ ಸಹಿ ಹಾಕಬಾರದೆಂದು ಸಮಾವೇಶ ಸರ್ವಾನುಮತದಿಂದ ನಿರ್ಣಯಿಸಿತು. ಅದೇ ರೀತಿ ಯಾವುದೇ ಕಾರಣಕ್ಕೂ ಇನಾಮು ಎಂಬ ಹೆಸರಿನಲ್ಲಿ ಮಾಲಿಕರು ಕೊಡುವ ಸಣ್ಣ ಪ್ರಮಾಣದ ಹಣವನ್ನು ಪಡೆಯಬಾರದೆಂಬ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಸುಮಾರು ಸಾವಿರ ಪ್ರತಿನಿಧಿಗಳು ಭಾಗವಹಿಸಿದ್ದ ಸಮಾವೇಶದಲ್ಲಿ 10ಕ್ಕೂ ಹೆಚ್ಚು ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ನಂತರ ಹೊಸ ಸಮಿತಿಯನ್ನು ರಚಿಸಲಾಯಿತು.

ಅಧ್ಯಕ್ಷರಾಗಿ ಕಾಂ. ಎಸ್. ಸೂರ್ಯನಾರಾಯಣರಾವ್, ಕಾರ್ಯಾಧ್ಯಕ್ಷರಾಗಿ ಕಾಂ.ಆರ್.ಶ್ರೀನಿವಾಸ್, ಉಪಾಧ್ಯಕ್ಷರಾಗಿ ಕಾಂ.ಗೋಪಾಲಕೃಷ್ಣ, ಮಂಜುನಾಥ ಮತ್ತು ಶಂಕರ್, ಪ್ರಧಾನ ಕಾರ್ಯದರ್ಶಿಯಾಗಿ ಕಾಂ.ಎಂ.ಎಸ್. ಮೀನಾಕ್ಷಿ ಸುಂದರಂ, ಸಹ ಕಾರ್ಯದರ್ಶಿಗಳಾಗಿ ಶ್ರೀನಿವಾಸ್, ರಾಜಶೇಖರ ಮತ್ತು ತುಳಸೀರಾಮ್, ಖಜಾಂಚಿಯಾಗಿ ರಾಮಚಂದ್ರಯ್ಯ ಸರ್ವಾನುಮತದಿಂದ ಆಯ್ಕೆಯಾದರು.

ನರೇಂದ್ರ ನಾಯಕರ ಮೇಲೆ ಹಲ್ಲೆ ರಾಜ್ಯದಾದ್ಯಂತ ಪ್ರತಿಭಟನೆಗೆ ಕರೆ

ಗಣಪತಿಯ ವಿಗ್ರಹ ಹಾಲು ಕುಡಿಯುತ್ತಿದೆ' ಎಂಬ ಅಂಶದ ಹಿಂದಿನ ವೈಜ್ಞಾನಿಕ ಸತ್ಯವನ್ನು ಬಯಲುಗೊಳಿಸುತ್ತಿದ್ದ ಖ್ಯಾತ ವಿಚಾರವಾದಿ, ಅಧ್ಯಾಪಕ ನರೇಂದ್ರ ನಾಯಕರವರ ಮೇಲೆ ಕೆಲವು ಮೂಲಭೂತವಾದಿ ಶಕ್ತಿಗಳು ನಡೆಸಿರುವ ಮರಣಾಂತಿಕ ಹಲ್ಲೆಯನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಕರ್ನಾಟಕ ರಾಜ್ಯ ಸಮಿತಿಯು ಉಗ್ರವಾಗಿ ಖಂಡಿಸಿ, ರಾಜ್ಯದಾದ್ಯಂತ ಪ್ರತಿಭಟಿಸಲು ಕರೆ ನೀಡಿದೆ.

ಜನರ ಅಜ್ಞಾನ, ಅಂಧಶ್ರದ್ಧೆಯನ್ನೇ ಬಂಡವಾಳ ಮಾಡಿಕೊಂಡು ಬದುಕಲು ಯತ್ನಿಸುವ ಈ ಶಕ್ತಿಗಳು ವಿಜ್ಞಾನದ ಸತ್ಯವನ್ನು ಎದುರಿಸಲಾಗದ ಹೇಡಿಗಳು. ಸತ್ಯದ ಬೆಳಕಿನಲ್ಲಿ ತತ್ತರಿಸಿದ ಈ ಮತೀಯ ಮೂಲಭೂತವಾದಿಗಳ ಹತಾಶೆಯ ಹೇಯ. ಕೃತ್ಯವೇ ಈ ಹಲ್ಲೆಗೆ ಸಾಕ್ಷಿಯಾಗಿದೆ.

ಈ ಹಲ್ಲೆ ವಿಜ್ಞಾನದ ಸತ್ಯ ಮತ್ತು ಸತ್ವಗಳನ್ನು ಪ್ರೀತಿಸುವ, ಅಭಿವ್ಯಕ್ತಿಸುವ ಎಲ್ಲರ ಮೇಲಿನ ಹಲ್ಲೆಯಾಗಿದೆ. ಈ ಹಲ್ಲೆಯನ್ನು ಪ್ರತಿಭಟಿಸಿ ಪವಾಡದ ಹಿಂದಿರುವ ಮೋಸದ ಮುಖಗಳನ್ನು ಬಯಲಿಗೆಳೆಯಲು ರಾಜ್ಯದಾದ್ಯಂತ ಪ್ರತಿಭಟನಾ ಪ್ರದರ್ಶನ ಸಭೆಗಳನ್ನು ನಡೆಸಬೇಕೆಂದು ಯುವಜನ ಫೆಡರೇಷನ್ ಕರೆ ನೀಡಿದೆ. ಹಲ್ಲೆಖೋರರನ್ನು ಈ ಕೂಡಲೇ ಬಂಧಿಸಬೇಕೆಂದು ಪೋಲೀಸ್ ವರಿಷ್ಠಾಧಿಕಾರಿ, ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದೆ.

ಬೆಂಗಳೂರಿನಲ್ಲಿ ಪ್ರತಿಭಟನೆ

ಮಂಗಳೂರಿನಲ್ಲಿ ಪ್ರೊ. ನರೇಂದ್ರ ನಾಯಕ್ ರವರ ಮೇಲೆ ಕೋಮುವಾದಿಗಳು ನಡೆಸಿದ ಹಲ್ಲೆಯನ್ನು ಪ್ರತಿಭಟಿಸಿ ಸೆಪ್ಟೆಂಬರ್ 28 ರಂದು ಬೆಂಗಳೂರಿನಲ್ಲಿ ಭಾರತ ವಿಜ್ಞಾನ ಸಮಿತಿ, ಎಸ್.ಎಫ್.ಐ., ಡಿ.ವೈ.ಎಫ್.ಐ., ಜನವಾದಿ ಮಹಿಳಾ ಸಂಘಟನೆ ಮತ್ತಿತರ ಪ್ರಗತಿ ಪರ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಹಾಗೂ ಪ್ರಮುಖ ಬುದ್ಧಿಜೀವಿಗಳು ಮಹಾತ್ಮಾಗಾಂಧಿಯವರ ಪ್ರತಿಮೆಯೆದುರು ಧರಣಿ ನಡೆಸಿ ಹಲ್ಲೆಕೋರರನ್ನು ಬಂಧಿಸಬೇಕೆಂದು ಒತ್ತಾಯಿಸಿದರು.

ಖ್ಯಾತ ಚಿಂತಕ ಡಾ. ಜಿ.ರಾಮಕೃಷ್ಣ ಪತ್ರಕರ್ತೆ ಡಾ. ವಿಜಯಾ, ನಟ ಹಾಗೂ ಪ್ರಾಧ್ಯಾಪಕ ಜಿ.ಕೆ. ಗೋವಿಂದರಾವ್, ಬಿಜೆವಿಎಸ್ ಮುಖಂಡರಾದ ಡಾ. ನಿರಂಜನಾರಾಧ್ಯ, ಜನತಾದಳ ಮುಖಂಡರಾದ ರಮೇಶ್ ಬಂದಗದ್ದೆ, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗೂ 'ಐಕ್ಯರಂಗ' ಸಂಪಾದಕರಾದ ಪಿ. ರಾಮಚಂದ್ರರಾವ್, ಎಸ್.ಎಫ್.ಐ. ಮುಖಂಡರಾದ ಶಾಂತಾರಾಮ ನಾಯಕ್, ಪ್ರಕಾಶ್, ಡಿ.ವೈ.ಎಫ್.ಐ.ನ ಎಸ್.ವೈ. ಗುರುಶಾಂತ್, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ವಿಮಲಾ ಈ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದರು.

ಈ ಸಂಘಟನೆಗಳ ನೂರಾರು ಕಾರ್ಯಕರ್ತರು ನಂತರ ಮೆರವಣಿಗೆಯಲ್ಲಿ ಹೋಗಿ ರಾಜ್ಯ ಪೋಲೀಸ್ ಮಹಾನಿರ್ದೇಶಕರಿಗೆ ಒಂದು ಮನವಿ ಪತ್ರವನ್ನು ಸಲ್ಲಿಸಿದರು.

ಹರಿಹರ ಪಾಲಿಫೈಬರ್ಸ್ ಚುನಾವಣೆ: ಸಿಐಟಿಯುಗೆ ಪ್ರಚಂಡ ಜಯ

ಹರಿಹರ: ಹರಿಹರ ಪಾಲಿಫೈಬರ್ಸ್ ಎಂಪ್ಲಾಯಿಸ್ ಯೂನಿಯನ್ ಚುನಾವಣೆಯಲ್ಲಿ ಎಲ್ಲಾ ಪದಾಧಿಕಾರಿಗಳ ಸ್ಥಾನಗಳನ್ನು ಗೆದ್ದುಕೊಂಡು ಸಿಐಟಿಯು ಪ್ರಚಂಡ ಜಯ ಸಂಪಾದಿಸಿದೆ .ಕಳೆದ ನಾಲ್ಕುವರೆ ವರ್ಷಗಳಿಂದ ಸಂಘದ ಅಧ್ಯಕ್ಷರಾಗಿದ್ದ ಎಐಟಿಯುಸಿಯ ಪಂಪಾಪತಿಯವರನ್ನು 278 ಮತಗಳ ಅಂತರದಿಂದ ಸೋಲಿಸಿರುವ ಕಾಂ.ಸೂರ್ಯನಾರಾಯಣ ರಾವ್‌ರವರು ಸಂಘದ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಸಂಗಾತಿಗಳಾದ ಜಿ.ಎಂ. ಮಲ್ಲಿಕಾರ್ಜುನಸ್ವಾಮಿ, ಚನ್ನೇಗೌಡರ, ಬಸವರಾಜ ಹುಗ್ಗಿ, ಹೆಚ್.ಹೆಚ್.ನಿಂಗಪ್ಪ ಮತ್ತು ಕರಬಸಪ್ಪ ಅವರುಗಳು ಇತರ ಪದಾಧಿಕಾರಿಗಳ ಸ್ಥಾನಗಳಿಗೆ ಆಯ್ಕೆಗೊಂಡಿರುವ ಸಿಐಟಿಯು ಅಭ್ಯರ್ಥಿಗಳು. ಕಾರ್ಯಕಾರಿ ಸಮಿತಿ ಸದಸ್ಯರ ಒಟ್ಟು 21 ಸ್ಥಾನಗಳಲ್ಲಿ 8 ಸ್ಥಾನಗಳನ್ನು ಸಿಐಟಿಯು ಸಂಪಾದಿಸಿದೆ. ಎಐಟಿಯುಸಿಗೆ ನಾಲ್ಕು ಸ್ಥಾನಗಳು ಮಾತ್ರ ಸಿಕ್ಕಿವೆ. ಉಳಿದ 9 ಸ್ಥಾನಗಳು ಸ್ವತಂತ್ರವಾಗಿ ಸ್ಪರ್ಧಿಸಿದ ಗುಂಪಿಗೆ ಸಿಕ್ಕವೆ. ಹರಿಹರ ಪಾಲಿಫೈಬರ್ಸ್ ಕಾರ್ಮಿಕ ಸಂಘದ ಚುನಾವಣೆಯಲ್ಲಿ ಸಿಐಟಿಯುನ ಈ ಸಾಧನೆ ಸುತ್ತಲಿನ ಕಾರ್ಖಾನೆಗಳ ಕಾರ್ಮಿಕರಲ್ಲಿ ಅತ್ಯುತ್ಸಾಹ ಮೂಡಿಸಿದೆ.

"ಡಿ.ವೈ.ಎಫ್.ಐ 5ನೇ ಬೆಂಗಳೂರು ಜಿಲ್ಲಾ ಸಮ್ಮೇಳನ"

ನಗರದ ತುಮಕೂರು ರಸ್ತೆಯಲ್ಲಿರುವ ಟಿ.ದಾಸರಹಳ್ಳಿಯಲ್ಲಿ ಡಿ.ವೈ.ಎಫ್.ಐ 5ನೇ ಜಿಲ್ಲಾ ಸಮ್ಮೇಳನ ಸೆಪ್ಟೆಂಬರ್ 24 ರಂದು ಯಶಸ್ವಿಯಾಗಿ ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷರಾದ ಎಂ.ಅಶೋಕನ್ ವಹಿಸಿದ ರಾಜ್ಯ ಅಧ್ಯಕ್ಷರಾದ ಹೆಚ್.ಎನ್.ನಾಗಮೋಹನದಾಸ್ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ಕೆ.ಎಸ್. ಸುಬ್ರಮಣ್ಯ ರವರು ಮಾತನಾಡಿದರು.

ಉದ್ಘಾಟನಾ ಸಮಾರಂಭಕ್ಕೆ ಮೊದಲು ಜಾಲಹಳ್ಳಿ ಕ್ರಾಸ್‌ನಿಂದ ಸುಮಾರು 300 ಜನರ ಮೆರವಣಿಗೆ ಜಿಲ್ಲೆಯ ಅಭಿವೃದ್ಧಿಗೆ ಒತ್ತಾಯಿಸಿ ನಡೆಯಿತು. ಇದೇ ಸಂದರ್ಭದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬಳಿ ನಾಮ ಫಲಕ ಹಾಕಲಾಯಿತು.

ಘಟಕಗಳಿಂದ ಆಯ್ಕೆಯಾದ 75 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಕಾಂ. ನಂಜರಾಜ್ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ವರದಿ ಮಂಡಿಸಿದರು. ರಾಜ್ಯ ಸಹ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾರ್ಗದರ್ಶನ ನೀಡಿದರು.

ಸಮ್ಮೇಳನವು ಹೊಸ ಜಿಲ್ಲಾ ಸಮಿತಿಯನ್ನು ಆಯ್ಕೆಮಾಡಿತು. ಎಂ.ಅಶೋಕನ್ (ಅಧ್ಯಕ್ಷರು), ಹೇಮಂತರಾಜು, ಎ.ಎಂ.ರವೀಂದ್ರನ್(ಉಪಾಧ್ಯಕ್ಷರುಗಳು), ಗೋಪಾಲಕೃಷ್ಣ (ಕಾರ್ಯದರ್ಶಿ) ಎಂ.ಲಕ್ಷ್ಮಣ್, ನಾರಾಯಣಸ್ವಾಮಿ(ಸಹಕಾರ್ಯದರ್ಶಿಗಳು) ಕೆ.ಶ್ರೀನಿವಾಸ(ಖಜಾಂಚಿ) ಮತ್ತು 19 ಸದಸ್ಯರನ್ನು ಒಳಗೊಂಡ ಹೊಸ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ವಿಶ್ವ ಸಂಸ್ಥೆಯ ಆಶ್ರಯದಲ್ಲಿ ನಾಲ್ಕನೇ ವಿಶ್ವ ಮಹಿಳಾ ಸಮ್ಮೇಳನ ಮತ್ತು ಸರ್ಕಾರಿಯೇತರ ಸಂಘಟನೆಗಳ ವೇದಿಕೆ (ಎನ್‌ಜಿಓ
ಫೋರಂ) ಸಮ್ಮೇಳನ ಆಗಸ್ಟ್ 30ರಿಂದ ಸೆಪ್ಟೆಂಬರ್ 15ರವರೆಗೆ ಬೀಜಿಂಗ್‌ನಲ್ಲಿ ನಡೆದವು. ವಿಶ್ವದಾದ್ಯಂತ ಮಹಿಳೆಯರು
ಎದುರಿಸುತ್ತಿರುವ ವಿಶಿಷ್ಟ ಸಮಸ್ಯೆಗಳಿಗೆ ಸ್ಪಷ್ಟ ಕಾರಣವನ್ನು ಹುಡುಕುತ್ತಿರುವ ಸಂದರ್ಭದಲ್ಲಿ ನಡೆದ ಈ ಸಮ್ಮೇಳನ ಒಂದು
ಮೈಲಿಗಲ್ಲು. ವಿಶ್ವದ ಎಲ್ಲ ದೇಶಗಳಿಂದ ಬಂದ 36000 ಜನ ಪ್ರತಿನಿಧಿಗಳು ತಮ್ಮ ತಮ್ಮ ದೇಶಗಳಲ್ಲಿನ ಮಹಿಳೆಯರ ಸ್ಥಿತಿ-ಗತಿ
ಗಳ ಕುರಿತು ಅವರ ಸ್ಥಾನ-ಮಾನಗಳಿಗೆ ಸಂಬಂಧಿಸಿದಂತೆ ನಡೆಸುವ ಹೋರಾಟಗಳನ್ನು ಕುರಿತು ವಿಶ್ಲೇಷಣೆ ನಡೆಸಿದರು. ಪ್ರಥಮ
ಬಾರಿಗೆ ವಿಶ್ವ ಮಹಿಳಾ ಸಮ್ಮೇಳನದಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (AIDWA) 9 ಜನ ಪ್ರತಿನಿಧಿಗಳನ್ನು
ಕಳುಹಿಸಲು ಸಾಧ್ಯವಾಯಿತು. ಸುಭಾಷಿಣಿ ಅಲಿ (ಮಾಜಿ ಎಂ.ಪಿ. ಸಹಕಾರ್ಯದರ್ಶಿ ಎ.ಐ.ಡಿ.ಡಬ್ಲ್ಯು.ಎ.) ಶ್ಯಾಮಲಿ ಗುಪ್ತ
(ಪಶ್ಚಿಮಬಂಗಾಳ ಘಟಕದ ಪ್ರಧಾನ ಕಾರ್ಯದರ್ಶಿ ಮತ್ತು ಸಹ ಕಾರ್ಯದರ್ಶಿ ಎ.ಐ.ಡಿ.ಡಬ್ಲ್ಯು.ಎ.) ವಿಮಲ ಕೆ.ಎಸ್.
(ಪ್ರಧಾನ ಕಾರ್ಯದರ್ಶಿ ಕರ್ನಾಟಕ, ಕೇಂದ್ರ ಸಮಿತಿ ಸದಸ್ಯರು) ಸುಧಾ.ಎಸ್. (ಪ್ರಧಾನ ಕಾರ್ಯದರ್ಶಿ ತಮಿಳುನಾಡು ಕೇಂದ್ರ
ಸಮಿತಿ ಸದಸ್ಯರು) ರಂಜನಾ ನಿರುಲ ಸಿ.ಸಿ. ಮೆಂಬರ್ ದಿಲ್ಲಿಯಿಂದ ಇಂದು ಅಗ್ನಿಹೋತ್ರಿ (ಸಿ.ಸಿ. ಮೆಂಬರ್ ದಿಲ್ಲಿಯಿಂದ) ಕೀರ್ತಿ
ಸಿಂಗ್ (ದೆಹಲಿ) ಮಾಲತಿ ಮೆನನ್, ದಿವ್ಯಾ ಕಪೂರ್ ಎಐಡಿಡಬ್ಲ್ಯುಎನ್ನು ಬೀಜಿಂಗ್‌ನಲ್ಲಿ ಪ್ರತಿನಿಧಿಸಿದ್ದರು. ಈ ಎರಡು
ಸಮ್ಮೇಳನಗಳ ಒಂದುಹಕ್ಕಿ ನೋಟವನ್ನು 'ಐಕ್ಯರಂಗ'ಕ್ಕಾಗಿ ಕೆ.ಎಸ್. ವಿಮಲಾ ಇಲ್ಲಿ ನೀಡಿದ್ದಾರೆ.

ಮಹಿಳೆಯರ ಕಾರ್ಯವ್ಯಾಪ್ತಿಯನ್ನು ಮನಗಾಣಿಸಿದ ವಿಶ್ವ ಸಮ್ಮೇಳನ

ಕೆ.ಎಸ್. ವಿಮಲ

'ಆಕರ್ಷಕ, ಅರ್ಥಪೂರ್ಣ ಪ್ರಾರಂಭ'

ಆಗಸ್ಟ್ 30ರಂದು ಬೀಜಿಂಗ್‌ನ ವರ್ಕರ್ಸ್ ಸ್ಟೇಡಿಯಂನಲ್ಲಿ ಹಲವು ವರ್ಣರಂಜಿತ ಕಾರ್ಯಕ್ರಮಗಳೊಂದಿಗೆ ಮತ್ತು ಸಂಘಟಕರ ಪುಟ್ಟ ಭಾಷಣಗಳೊಂದಿಗೆ ಉದ್ಘಾಟನಾ ಸಮಾರಂಭ ನಡೆಯಿತು. ಮಹಿಳೆಯರ ಸ್ವಭಾವತಃ ಶಾಂತಿ ಪ್ರಿಯರು ಎಂಬ ಸಂದೇಶವನ್ನು ಇಡೀ ವಿಶ್ವಕ್ಕೆ ಸಾರಲೋ ಎಂಬಂತೆ ಕಾರ್ಯಕ್ರಮದ ಕೊನೆಯಲ್ಲಿ ಸಾವಿರಾರು ಪಾರಿವಾಳಗಳನ್ನು ಹಾರಿ ಬಿಡಲಾಯಿತು. ನೈರೋಬಿ ಸಮ್ಮೇಳನದ ಜ್ಯೋತಿಯನ್ನು ಬೀಜಿಂಗ್ ಸಮ್ಮೇಳನಕ್ಕೆ ಕೊಂಡೊಯ್ಯುವಾಗ ಸಮಸ್ತ ಜನಸಮೂಹ ಹರ್ಷೋದ್ಗಾರ ವ್ಯಕ್ತಪಡಿಸಿತು. ಸಮಾರಂಭಕ್ಕೆ ಬಂದ ಅತಿಥಿಗಳಿಗೆ ಮತ್ತು ವಿಶ್ವದ ಎಲ್ಲೆಡೆಯಿಂದ ಬಂದ ಪ್ರತಿನಿಧಿಗಳಿಗೆ ತೊಂದರೆಯಾಗಬಾರದೆಂಬ ಕಾರಣದಿಂದ 'ಚೈನಾ ಸಂಘಟನಾ ಸಮಿತಿ' ಮುತುವರ್ಜಿವಹಿಸಿ ಆಸನದ ವ್ಯವಸ್ಥೆ ಮಾಡಿತ್ತು. ಯಾವದೇ ಪೂರ್ವೋದ್ದೇಶಗಳಿಲ್ಲದಿದ್ದರೂ ಮೂರನೇ ಜಗತ್ತಿನ ರಾಷ್ಟ್ರಗಳ ಪ್ರತಿನಿಧಿಗಳು ಪ್ರಜ್ವಲಿಸುವ ಸೂರ್ಯನಿಗೆ ಅಭಿಮುಖವಾಗಿ ಕುಳಿತಿದ್ದು, ಮಹಿಳೆಯರ ಸಮಸ್ಯೆಗಳ ವಿರುದ್ಧ ಅಭಿವೃದ್ಧಿಶೀಲ ಜಗತ್ತಿನ ಸಹೋದರಿಯರು ಮುಂದುವರೆಯುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯಂತಿತ್ತು.

ಸ್ಪಷ್ಟ ಧೋರಣೆ -ಅಪ್ರಸ್ತುತ ವಿಷಯಗಳಿಗೆ ವಿದಾಯ

ಆಗಸ್ಟ್ 31 ರಿಂದ ಪ್ರಾರಂಭವಾದ ಎನ್.ಜಿ.ಓ ಫೋರಮ್ ಹಲವರ ಕುಹಕ, ಕೆಣಕು ಮಾತುಗಳಿಗೆ ನೇರ ಉತ್ತರದಂತಿತ್ತು. ಬೀಜಿಂಗ್ ಸಮ್ಮೇಳನ ಮೂಲ ಉದ್ದೇಶ, ಮುಖ್ಯ ಉದ್ದೇಶ 'ಮಾನವ ಹಕ್ಕುಗಳ ಬಗ್ಗ ಚರ್ಚೆ' ಮಾತ್ರ ಎಂಬ ಅಭಿಪ್ರಾಯವನ್ನು ಹಲವಾರು ವ್ಯಕ್ತಪಡಿಸಿದ್ದರು. ಮಹಿಳಾ ಸಂಘಟನೆಗಳ ಕಾರ್ಯವ್ಯಾಪ್ತಿ ಈ ಕೇವಲ ಕೌಟುಂಬಿಕ ಕಲಹಗಳು, ಅತ್ಯಾಚಾರ, ಹಿಂಸೆ, ವಿಚ್ಛೇದನಗಳ ಕುರಿತಂತೆ ಎಂಬ ಅಭಿಪ್ರಾಯ ಹಲವರಲ್ಲಿ ಇತ್ತು. ಇಂದಿಗೂ ಇದೆ. ಆದರೆ ಬೀಜಿಂಗ್ ಎನ್.ಜಿ.ಓ ಫೋರಂ ಮಹಿಳೆಯರ ಕಾರ್ಯವ್ಯಾಪ್ತಿ 'ಸೀಮಿತ' ವರ್ತುಲದಿಂದಾಚೆ ಇರುವುದನ್ನು ಸ್ಪಷ್ಟವಾಗಿ ಇಡೀ ವಿಶ್ವಕ್ಕೆ ತೋರಿಸಿ ಕೊಟ್ಟಿತು. ದಿನವೊಂದಕ್ಕೆ ಸುಮಾರು 360 ವರ್ಕ್ ಶಾಪ್ ಗಳು ಬೆಳಿಗ್ಗೆ 9.00 ರಿಂದ ಸಂಜೆ 7ರವರೆಗೆ ನಡೆಯುತ್ತಿದ್ದವು. ಎರಡರಿಂದ ಮೂರು ನಿರ್ದಿಷ್ಟ ವಿಷಯದ ಮೇಲಿನ ಚರ್ಚೆಗಳ ಪ್ಲೀನರಿಗಳು ಸಮಾವೇಶ ಸಭಾಂಗಣದಲ್ಲಿ ನಡೆಯುತ್ತಿದ್ದವು. ಸಮಸ್ಯೆಗಳಿಗೆ ಪರಿಹಾರ ಹುಡುಕುವ ಹೆಜ್ಜೆಗಳು ಎಷ್ಟು ದೃಢವಾಗಿದ್ದವೆಂದರೆ ಮಹಿಳೆಯರ ಬದ್ಧತೆಯನ್ನು ಪ್ರಶ್ನಿಸಲೆಂದೇ ಬಂದಂತಿದ್ದ 'ಸುರಿಮಳೆ' ಸೋಲಬೇಕಾಯಿತು.

ಪ್ರಮುಖ ಅಂಶಗಳು

ಸಾಮಾನ್ಯವಾಗಿ ಎಲ್ಲ ವಿಷಯಗಳನ್ನೂ ಒಳಗೊಂಡಂತೆ ವರ್ಕ ಶಾಪ್ ಗಳು ನಿಗದಿತಗೊಂಡಿದ್ದರೂ ಮೊದಲ ಹಂತದಲ್ಲಿಯೇ ಹಲವು ಗಂಭೀರ ವಿಷಯಗಳು ಪ್ರಾಮುಖ್ಯತೆ ಪಡೆಯಲು ಸಾಧ್ಯವಾಯಿತು.

'ಹಿಂಸೆ' -'ಕ್ರೌರ್ಯ'ವನ್ನು ಕುರಿತಂತೆ ಚರ್ಚೆ ವಿಶ್ವದ ಎಲ್ಲ ದೇಶಗಳ ಮಹಿಳೆಯರ ಚರ್ಚೆಗಳಲ್ಲಿ ಮೊದಲ ಸ್ಥಾನ ಪಡೆಯಿತು.

ಕೌಟುಂಬಿಕ ಹಿಂಸೆ, ರಾಜಕೀಯ ಹಿಂಸೆ, ನಿರಾಶ್ರಿತರ ಮೇಲೆ ನಡೆಯುತ್ತಿರುವ ಹಿಂಸೆ, ವರ್ಗ ಹಿಂಸೆ, ಸಾಮಾಜಿಕ, ಸಾಂಸ್ಕೃತಿಕ ಹಿಂಸೆ, ಜಾತಿ ಮತ ಧರ್ಮಗಳ ಹಿಂಸೆ, ಮತಾಂಧತೆ ಹುಟ್ಟು ಹಾಕುತ್ತಿರುವ ಹಿಂಸೆ ಇವುಗಳ ಬಗ್ಗೆ ವ್ಯಾಪಕ ಚರ್ಚೆ ನಡೆಯಿತು. 'ಸಾರ್ವಜನಿಕ ವಿಚಾರಣೆ'ಯ ಸಂದರ್ಭದಲ್ಲಿ ವ್ಯಕ್ತವಾದ ಅನಿಸಿಕೆ ಅನುಭವಗಳು ಮನ ಮಿಡಿಯುವಂತಿತ್ತು. ಯುದ್ಧದ ಭೀಕರತೆಯ ಬಲಿಪಶುಗಳು, ಧರ್ಮಾಂಧತೆಯ ಕಪಿಮುಷ್ಠಿಯಲ್ಲಿ ನಲುಗಿದ ಧ್ವನಿಗಳು ತಮ್ಮ ಅನುಭವಗಳನ್ನು ಹೇಳಿಕೊಳ್ಳುವಾಗ ಅದರ ತೀವ್ರತೆ ಎಂತವರ ಕಲ್ಲೆದೆಯನ್ನೂ ಕರಗಿಸುವಂತಿದ್ದವು ಮತ್ತು ಇಂತಹ ಹಿಂಸೆಗಳನ್ನು ಎದುರಿಸಿ ನಿಲ್ಲುವ ಮನೋಸ್ಥೈರ್ಯವನ್ನು ತೋರಿಸಿತ್ತು.

'ಜಾಗತೀಕರಣ'ವೆಂಬ ಶಾಪ

ಸರಿಸುಮಾರು ಜಗತ್ತಿನ ಎಲ್ಲ ರಾಷ್ಟ್ರಗಳೂ ಇಂದು 'ಜಾಗತೀಕರಣ' ಮೂಲ ರಚನೆಯ ಹೊಂದಾಣಿಕೆಯ ಕಾರ್ಯಕ್ರಮ (ಸ್ಟ್ರಕ್ಚರಲ್ ಅಡ್ಜಸ್ಟಮೆಂಟ್ ಪ್ರೋಗ್ರಾಮ್ - SAP)ದ ಮೂಲಕ ಸ್ವರ್ಗವನ್ನು ಧರೆಗಿಳಿಸುತ್ತೇವೆ ಎಂದು ಸಾರುತ್ತಿವೆ. ಆದರೆ ಬೀಜಿಂಗ್ ಎನ್.ಜಿ.ಓ. ಫೋರಂನಲ್ಲಿ ಸೇರಿದ ಸಾವಿರಾರು ಮಹಿಳೆಯರು ಈ 'ಸ್ಯಾಪ್' (SAP) ಜನರ ಪಾಲಿಗೆ ಎಂತಹ 'ಶಾಪ'ವಾಗಿ ಪರಿಣಮಿಸಿದೆ ಎಂಬುದನ್ನು ತೋರಿಸಿಕೊಟ್ಟರು. ಪ್ರತಿನಿಧಿಗಳ ಆಸಕ್ತಿಗೆ ಅನುಗುಣವಾಗಿ ಭಾಗವಹಿಸಲು, ಪರಸ್ಪರ ವಿಚಾರ-ವಿನಿಮಯ ಮಾಡಿಕೊಳ್ಳಲು, ಅನುಭವಗಳನ್ನು ಹಂಚಿಕೊಳ್ಳಲು ಅವಕಾಶವಾಗುವಂತೆ ಹಲವು ವರ್ಕ್‌ಶಾಪ್‌ಗಳನ್ನು ನಡೆಸಿ, ಅಲ್ಲಿ ಚರ್ಚೆಯ ಮೂಲಕ ಸ್ಯಾಪ್ ವಿರುದ್ಧ ಮಹಿಳೆಯರು ಸಮರ ಸಾರಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ವಿಸ್ತಾರವಾದ 'ಗ್ಲೋಬಲ್ ಟೆಂಟ್ ಏರಿಯಾ'ದ ಸುತ್ತ ಪ್ರತಿದಿನ ಜಾಗತೀಕರಣದ ವಿರುದ್ಧ, ಸಾಮ್ರಾಜ್ಯಶಾಹಿಯ ವಿರುದ್ಧ ಇಡೀ ವಿಶ್ವದ ಪೋಲೀಸ್ ತಾನೆಂಬಂತೆ ವರ್ತಿಸುತ್ತಿರುವ ಅಮೇರಿಕದ ಸರ್ವಾಧಿಕಾರಶಾಹಿಯ ವಿರುದ್ಧ ಪ್ರತಿಭಟನಾ ಮೆರವಣಿಗೆಗಳು ನಡೆಯುತ್ತಿದ್ದವು. ಸ್ಪಷ್ಟ ಉದಾಹರಣೆ ನೀಡಬೇಕೆಂದರೆ ಸಾಕಷ್ಟು ವಿವಾದಗಳಿಗೆ ಸಿಕ್ಕು ಕೊನೆಗೂ ಸಮ್ಮೇಳನದಲ್ಲಿ ಭಾಗವಹಿಸಲು ಬಂದ ಅಮೇರಿಕಾದ ಹಿಲೆರಿ ಕ್ಲಿಂಟನ್ - 'ಸಮಾವೇಶ ಸಭಾಂಗಣ'ದಲ್ಲಿ 'ಮಾನವ ಹಕ್ಕುಗಳ' ಕುರಿತು ಮಾತನಾಡುತ್ತಿರುವಾಗ ಸಭಾಂಗಣದ ಹೊರಗೆ ಸುರಿಯುತ್ತಿದ್ದ ಮಳೆಯಲ್ಲಿ ಸಾವಿರಾರು ಮಹಿಳೆಯರು ಅಮೇರಿಕದ ಸಾಮ್ರಾಜ್ಯಶಾಹಿ ನೀತಿಯ ವಿರುದ್ಧ, ಸ್ಯಾಪ್ ವಿರುದ್ಧ ಪ್ರತಿಭಟನಾ ಪ್ರದರ್ಶನ ನಡೆಸುತ್ತಿದ್ದರು. ಮಾನವ ಹಕ್ಕುಗಳ ಬಗ್ಗೆ ಉದ್ದುದ್ದ ಮಾತನಾಡುತ್ತಿರುವ ಅಮೇರಿಕ ಮೊದಲು ತನ್ನ ಸಾಮ್ರಾಜ್ಯಶಾಹಿ ನೀತಿಯ ಮೂಲಕ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಮಾನವ ಹಕ್ಕುಗಳನ್ನು ಕಸಿಯುವುದನ್ನು ನಿಲ್ಲಿಸಬೇಕು ಎಂಬ ಒಕ್ಕೊರಲಿನ ಕೂಗು ಕೇಳಿ ಬರುತ್ತಿತ್ತು. ವಿಪರ್ಯಾಸವೆಂದರೆ ಪಾಶ್ಚಾತ್ಯ ಮಾಧ್ಯಮಗಳ ಮೂಲಕವೇ ವಿಶ್ವವನ್ನು ನೋಡುವ ನಮ್ಮ ದೇಶದ ಪತ್ರಿಕೆಗಳಿಗೆ ಇವು ಯಾವವೂ ಸುದ್ದಿಯಾಗಿಯೇ ಬರಲಿಲ್ಲ.



ಬೃಹತ್ ತಿಯಾನ್‌ಮನ್ ಚೌಕವನ್ನು ಚೊಕ್ಕಟವಾಗಿಡುವ ಜವಾಬ್ದಾರಿಯಿರುವ ಕಾರ್ಯಕರ್ತೆಯೊಬ್ಬರೊಂದಿಗೆ AIDWA ನಿಯೋಗದ ಸುಧಾ ಮತ್ತು ರಂಜನಾ

ಇಡೀ ವಿಶ್ವ ಸಮ್ಮೇಳನದ ಘೋಷಣೆ 'ಶಾಂತಿ-ಸಮಾನತೆ ಅಭಿವೃದ್ಧಿ' ಶಾಂತಿ -ಸಮಾನತೆಗಾಗಿ ಮಹಿಳೆಯರು ಎಂತಹ ಹೋರಾಟಕ್ಕೂ ಸಿದ್ಧ ಎಂಬ ಧ್ವನಿ ಸ್ಪಷ್ಟವಾಗಿ ಸಮ್ಮೇಳನದಲ್ಲಿ ಕೇಳಿಬರುತ್ತಿತ್ತು.

ಜಾಗತೀಕರಣ ಕುರಿತಂತೆ ನಡೆದ ಒಂದು ಪ್ಲೀನರಿಯಲ್ಲಿ ಶ್ರೀಮತಿ ಹೆಲೆನ್ ಓ ಕನಲ್ (ಡಬ್ಲ್ಯೂ.ಇ.ಡಿ.ಇ.- ಐರಿಷ್) ರವರು 'ಶಾಂತಿ'ಯ ಕುರಿತು ಆಡಿದ ಮಾತುಗಳು ಮಾರ್ಮಿಕವಾಗಿದ್ದವು. ಯುನೈಟೆಡ್ ಕಿಂಗ್ ಡಮ್ ನ ಪ್ರತಿನಿಧಿಯಾಗಿ ಭಾಗವಹಿಸಿದ


ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಬಗ್ಗೆ ನಿಖರತೆ ಇರದ ಕಾರಣ ವರ್ಕ್ ಶಾಪ್ ಗಳ ಬಗ್ಗೆಯಾಗಲಿ, ಅಲ್ಲಿ ನಡೆಸುವ ಚಟುವಟಿಕೆಗಳ ಬಗ್ಗೆಯಾಗಲಿ ಪೂರ್ವ ಸಿದ್ಧತೆಗಳನ್ನು ನಮ್ಮ ಸಂಘಟನೆ ಮಾಡಿರಲಿಲ್ಲ, ಆದರೆ ಸಮ್ಮೇಳನದಲ್ಲಿ ನಡೆದ ಹಲವು ವರ್ಕ್‌ಶಾಪ್‌ಗಳಲ್ಲಿ ಪರಿಣಾಮಕಾರಿಯಾಗಿ ಮಧ್ಯಪ್ರವೇಶ ಮಾಡಿ ಒಂದು ಸ್ಪಷ್ಟ ಅಭಿಪ್ರಾಯ ಮೂಡಿಸಲು ಸಾಧ್ಯವಾದ್ದರಿಂದ ಸ್ಯಾಪ್ ಕುರಿತು ಒಂದು ಸ್ವತಂತ್ರ ವರ್ಕ್‌ಶಾಪ್‌ಅನ್ನು ಎಐಡಿಡ ಬ್ಲ್ಯುಎ ನಡೆಸಲು ಸಾಧ್ಯವಾಯಿತು. **(Struggle & Strategies V/s SAP).** ಬೇರೆ ಬೇರೆ ದೇಶಗಳ ಪ್ರತಿನಿಧಿಗಳು ಭಾಗವಹಿಸಿದ ವರ್ಕ್ ಶಾಪ್ ಉತ್ತಮವಾಗಿ ನಡೆಯಿತು. ಇನ್ನೂ ಒಂದು ಮುಖ್ಯ ಅಂಶವೆಂದರೆ ಬೇರೆ ದೇಶದ ಪ್ರತಿನಿಧಿಗಳು ತಮ್ಮ ಚಟುವಟಿಕೆಗಳ ಬಗ್ಗೆ ಪ್ರಚಾರ ಸಾಮಗ್ರಿಗಳನ್ನು ಪುಕ್ಕಟೆ ಹಂಚುತ್ತಿದ್ದರು. ಆದರೆ **AIDWA** -ಬೀಜಿಂಗ್ ಸಮ್ಮೇಳನದ ಸಂದರ್ಭದಲ್ಲಿಯೇ ತಂದ **``CRITIQUE ON UN FLAT FORM OF ACTION''** ಮತ್ತು ಎ.ಐ.ಡಿ.ಡಬ್ಲ್ಯು.ಎ.ಯ ನೇತೃತ್ವದಲ್ಲಿ ಇತರ ಆರು ರಾಷ್ಟ್ರ ಮಟ್ಟದ ಸಂಘಟನೆಗಳು ಸೇರಿ ಕೇಂದ್ರ ಸರ್ಕಾರದ ದಸ್ತಾವೇಜಿಗೆ "ಪರ್ಯಾಯ"ವನ್ನು ಸೂಚಿಸಿದ ಟಿಪ್ಪಣಿ ಮತ್ತು ನಮ್ಮ ಮುಖಪತ್ರಿಕೆಯಾದ **`Womens' Equality''** ಗಳನ್ನು ಮಾರಾಟ ಮಾಡಲು ಸಾಧ್ಯವಾಯಿತು.

ಮತಾಂಧತೆಯ ವಿರುದ್ಧ ಮಹಿಳಾ ಸಮರ

'ಸ್ಯಾಪ್'ನಷ್ಟೇ ಗಂಡಾಂತರ
ಯಾದ ಮತ್ತೊಂದು ಅಂಶ ಫಂಡಮೆ
ಲಿಸಂ (ಮೂಲ ಭೂತವಾದ ಅ
ಮತಾಂಧತೆ) ಇದು 3ನೇ ಸ್ಥಾನ

ಎನ್.ಜಿ.ಓ ಫೋರಂನಲ್ಲಿ ಗಮನ ಸೆ
ಅಂಶ. ಪ್ರಜಾಸತ್ತಾತ್ಮಕ ಚಳುವಳಿಗ
ಬಲಗೊಳ್ಳುತ್ತಿರುವ ಜೊತೆಯಲ್ಲಿ
ಮತಾಂಧತೆಯೂ ಘಟಸರ್ಪದಂತೆ ಹ
ಯೆತ್ತುತ್ತಿದೆ. ಒಂದು ಕಡೆ, ಆರ್ಥಿಕ, ಸಾ
ಜಿಕ ಒತ್ತಡಗಳು ಮಹಿಳೆಯನ್ನು ಜರ್
ರಿತಗೊಳಿಸುತ್ತಿದ್ದರೆ ಇನ್ನೊಂದು
ಧಾರ್ಮಿಕ ಒತ್ತಡ ಅವಳ ಬದುಕ
ಹೊಸಕಿ ಹಾಕುತ್ತಿದೆ. ಇದರ ವಿರುದ್ಧ
ವಳಿ ಬಲಗೊಳ್ಳುತ್ತಿರುವುದು ಎನ್.ಜಿ
ಫೋರಂನಲ್ಲಿ ಕಂಡು ಬಂದು ಅಂಶ. ಮೂ
ಭೂತವಾದಿಗಳ ಹಿಡಿತದಿಂದ ತ
ಕೊಂಡು ಇರಾನ್ ನಿಂದ ಹೊರಬಂ
ಬೇರೆ ದೇಶಗಳಲ್ಲಿ ವಾಸಿಸುತ್ತಿರುವ
ಳೆಯರು ತಮ್ಮ ಪ್ರಾಣವನ್ನೇ ಪಣಕ್ಕಿ
ಮತಾಂಧತೆಯ ವಿರುದ್ಧ ಹೋರಾಡು
ದ್ದಾರೆ. ಇಡೀ ವಿಶ್ವ ನವ ನಾಗರೀಕತೆಯ
ದಾಪುಗಾಲು ಹ
ತ್ತಿರುವಾಗ ಅ
ಶ್ರದ್ಧೆಯಿಂದ ಕು
ಡಾದ ಇಸ್ಲಾ
ಮೂಲಭೂತವಾ
ಗಳು ತಮ್ಮ ಇ
ಸಮಾಜವನ್ನು
ಮಾನಗಳ
ಹಿಂದೆ ತೆಗೆ
ಕೊಂಡು ಹೋ
ತ್ತಿದ್ದಾರೆ ಎಂಬ
ಈ ಮಹಿಳೆಯ
ಕೂಗು. ಉಪ
ವ್ಯಾಸಂಗಮು
ವೈದ್ಯಕೀಯ
ಯಲ್ಲಿದ್ದ ಮಹಿ
ಯೊಬ್ಬರು ಇಸ್ಲ
ಸಂಪ್ರದಾಯದ

ಲಿನ್ ರವರು ಮಾತನಾಡುತ್ತಾ ಆ ದೇಶ ದಲ್ಲಿ ದೊಡ್ಡ ಮಟ್ಟದಲ್ಲಿ ಶಸ್ತ್ರಾಸ್ತ್ರ ತಯಾರಿ ಸುವುದು ಅತಿ ಮುಖ್ಯ ಉದ್ಯಮವಾಗಿರು ವಾಗ 'ಶಾಂತಿ'ಯ ಮಾತು ಹಾಸ್ಯಾಸ್ಪದ ಎಂದರು. 'ಜಾಗತೀಕರಣ'ಯಾವುದೇ ಹಂತ ದಲ್ಲಿಯೂ ಎಲ್ಲರಿಗೂ ಅನುಕೂಲವಾಗಲು ಸಾಧ್ಯವೇ ಇಲ್ಲ, ಜಾಗತೀಕರಣ ಜಾಲದಲ್ಲಿ ಸಿಲುಕಿದ ಯಾವುದೇ ರಾಷ್ಟ್ರ ಕೂಡ ತನ್ನ ಪ್ರಜೆಗಳಿಗೆ ಏನು ಬೇಕು ಎಂಬುದನ್ನು ನಿರ್ಧರಿಸಲಾಗದ ಒತ್ತಡಕ್ಕೆ ಒಳಗಾಗುತ್ತಿದೆ. ಜಾಗತೀಕರಣ 'ಹಂಚುತ್ತಿರುವುದು ಬಡತ ನವನ್ನೇ ಹೊರತು ಸಂಪತ್ತನ್ನಲ್ಲ' ಎಂಬ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದರು. ತನ್ನ ಆದೇಶಗ ಳ ಅನುಸಾರವಾಗಿ ಕ್ಯೂಬಾ ನಡೆಯುತ್ತಿಲ್ಲ ಎಂಬ ಕಾರಣಕ್ಕಾಗಿ ಅಮೇರಿಕ ಕ್ಯೂಬಾದ ಮೇಲೆ ವಿಧಿಸಿರುವ ನಿಷೇಧವನ್ನು ವಿರೋ ಧಿಸಿ ಗೊತ್ತುವಳಿಯನ್ನು ಅಂಗೀಕರಿಸಿ ಅಧಿಕೃತ ಸಮ್ಮೇಳನಕ್ಕೆ ಕಳಿಸಿದಂತಹ ಶಿಬಿರಗಳೂ ಇವೆ. ಹೀಗೆ ಉದಾಹರಣೆಗಳನ್ನು ಕೊಡುತ್ತಾ ಹೋದರೆ ಅಮೇರಿಕದಂತಹ ಸಾಮ್ರಾಜ್ಯ ಶಾಹಿ ದೇಶಗಳ ವಿರುದ್ಧ ನಡೆದ ಕಾರ್ಯಕ್ರ ಮಗಳೇ ಇಡೀ ಲೇಖನವಾದೀತು. ಗ್ಯಾಟ್, ಡಂಕೆಲ್ ಪ್ರಸ್ತಾಪಗಳ ವಿರುದ್ಧ ಬೀದಿ ನಾಟ ಕಗಳೂ ಪ್ರದರ್ಶಿತವಾದವು. ಹೀಗೆ 36000 ಜನ ಪ್ರತಿನಿಧಿಗಳು ಭಾಗವಹಿಸಿದ್ದ ಎನ್.ಜಿ.ಓ ಫೋರಂ ನಲ್ಲಿ ಅಲ್ಲಲ್ಲಿ ಹರಡಿ, ಹಂಚಿ ಹೋದಂತೆ 'ಮಾನವ ಹಕ್ಕುಗಳ ಉಲ್ಲಂ ಘನೆ' ಟಿಬೆಟ್ ಪ್ರಸ್ತಾಪಗಳ ಕುರಿತಂತೆ ಚಿಕ್ಕ ಪುಟ್ಟ ಪ್ರದರ್ಶನಗಳು ನಡೆದಿದ್ದರೂ ಮಾಧ್ಯ ಮಗಳು ಉತ್ಪ್ರೇಕ್ಷಿಸಿ ವರದಿ ಮಾಡಿದಷ್ಟು ನಡೆಯಲಿಲ್ಲ. ಬದಲಿಗೆ ಇಡೀ ವಿಶ್ವದ ಜನ ರನ್ನು ಬಾಧಿಸುತ್ತಿರುವ ಹೊಸ ನೀತಿಗಳ ವಿರುದ್ಧ ಹೋರಾಟದ ಧ್ವನಿ ಇತರ ಎಲ್ಲ ಅಂಶಗ ಳನ್ನೂ ಮೀರಿ ಬಂದಿತ್ತು. ❑



IDWA ಏರ್ಪಡಿಸಿದ್ದ SAP ಕುರಿತ ಕಮ್ಮಟದಲ್ಲಿ - ಸುಭಾಷಿಣಿ ಅಲಿ, ಶ್ಯಾಮಲ ಗುಪ್ತ, ರಂಜನಾ ಮತ್ತು ವಿಮಲಾ

ಬುರ್ಖಾ ಹಾಕಿಕೊಳ್ಳಲಿಲ್ಲ ಎಂಬ ಕಾರಣ ಕ್ಕಾಗಿ ಚಿತ್ರಹಿಂಸೆಗೆ ಒಳಗಾಗಿ ಜೀವ ತೆರ ಬೇಕಾಗಿ ಬಂದ ಬಗ್ಗೆ, ಮದುವೆಯಾಗದ ಮಹಿಳೆಯರು ಪುರುಷರಿರುವ ಹುಟ್ಟುಹ ಬ್ಬದ ಪಾರ್ಟಿಯಲ್ಲಿ ಭಾಗವಹಿಸಿದರೆಂಬ ಕಾರಣಕ್ಕಾಗಿ ಛಡಿ ಏಟುಗಳನ್ನು ತಿಂದು ಸೆರೆಮನೆ ವಾಸ ಅನುಭವಿಸುತ್ತಿರುವುದರ ವಿರುದ್ಧ ಮತ್ತು ಇಂತಹುದೇ ಹಲವು ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಪಡೆಯುವ ಹೋರಾಟದಲ್ಲಿ ಸಿಗುವ ಜಯ ಸಮಾನ ತೆಯತ್ತ ಹೆಜ್ಜೆ ಎಂಬ ದೃಢ ನಂಬಿಕೆಯಿಂದ ಆ ಮಹಿಳೆಯರು ಹೋರಾಡುತ್ತಿದ್ದಾರೆ. ಅಂತೆಯೇ ಗರ್ಭಪಾತವನ್ನು ಕಾನೂನು ಬಾಹಿರ ಎನ್ನುವ ಮಹಿಳೆಯರ ಮೂಲ ಭೂತ ಹಕ್ಕುಗಳ ಬಗ್ಗೆ ಕಿವುಡಾಗಿರುವ ಕ್ರಿಶ್ಚಿಯನ್ ಮತಾಂಧತೆಯ ವಿರುದ್ಧ ಮಹಿ ಳೆಯರ ಹಕ್ಕುಗಳ ಬಗ್ಗೆ ಬಹಳ ಮಾತನಾ ಡುತ್ತ ಆದರೆ ಧರ್ಮದ ಹೆಸರಿನಲ್ಲಿ ಮಹಿಳೆಯರನ್ನು ಹಲವು ರೀತಿಯಲ್ಲಿ ಶೋಷಿಸುತ್ತಿರುವ ಹಿಂದೂ ಸಂಪ್ರದಾಯವಾದದ ವಿರುದ್ಧ ಮಹಿಳೆ ಯರು ಸಿಟಿದೆದ್ದು ನಿಂತಿದ್ದಾರೆ ಎಂಬುದು ಪ್ರಮುಖವಾಗಿ ವ್ಯಕ್ತವಾದ ಅಂಶ. ಇದರ ಜೊತೆಗೆ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಇಡೀ ಮಹಿಳಾ ಚಳುವ ಳಿಗೆ ಪೆಟ್ಟು ಕೊಡುವ ದಿಕ್ಕಿನಲ್ಲಿ ಬೆಳೆಯು ತ್ತಿರುವ ಮೂಲಭೂತವಾದ. ತುಂಬ ಗಾಬ ರಿಗೊಳಿಸುವ ಅಂಶವೆಂದರೆ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಮತಾಂಧತೆಯ ಬೆಂಬಲಿಗರಾಗಿ ಭಾಗವಹಿಸಿದ ಮಹಿಳೆ ಯರು ಕ್ಯಾಥೋಲಿಕ್ ವರ್ಜಿನ್ ಮೇರಿ ಮತ್ತು ಮರಿಯಮ್‌ರು ಮಹಾನ್ ಸ್ತ್ರೀವಾ ದಿಗಳೆಂಬ ಅಭಿಪ್ರಾಯ ವ್ಯಕ್ತಪಡಿಸಿ ಇತರ ಮಹಿಳಾ ಚಳುವಳಿಗಳನ್ನು ಸ್ತ್ರೀ ವಿರೋಧಿ, ಅಸಹಜ ಕುಟುಂಬ ವಿರೋಧಿ ಬಣ್ಣಿಸಿದ್ದು ಇದು ಇಡೀ ಮಹಿಳಾ ಚಳುವಳಿಗೆ ಒಂದು ಸವಾಲಾಗಿ ಪರಿಣಮಿಸಲಿದೆ.

ಇಷ್ಟೆಲ್ಲ ಚಟುವಟಿಕೆಗಳು 10 ದಿನ ಗಳ ಕಾಲ ಸುಸೂತ್ರವಾಗಿ ನಡೆಯುವಂತೆ ಕಾಳಜಿ ವಹಿಸಿದ ಚೈನಾ ಸಂಘಟನಾ ಸಮಿತಿಯ ಕಾರ್ಯಕ್ಷಮತೆಯ ಕುರಿತು ಎರಡು ಮಾತು ಬರೆಯದಿದ್ದರೆ ಈ ವರದಿ ಅಪೂರ್ಣವಾದೀತು. ಪಕದ ಹಲವು ರಾಷ್ಟ್ರ ಗಳಿಂದ ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿದ 36000 ಪ್ರತಿನಿಧಿಗಳಿಗೆ ವ್ಯವಸ್ಥೆ ಮಾಡಿದ ಚೈನಾ ಸಂಘಟನಾ ಸಮಿತಿಯ ಕಾರ್ಯ ನಿಜಕ್ಕೂ ಶ್ಲಾಘನೀಯ. ವಿಮಾನ ನಿಲ್ದಾಣದಲ್ಲಿ ಇಳಿದಾಗಿನಿಂದ ಸಮಾವೇಶ ಮುಗಿದು ಹೊರಡುವವರೆಗೂ ಅತ್ಯಂತ ಸಹನೆಯಿಂದ, ಸದಾ ಹಸನ್ಮುಖದಿಂದ ಯಾವ ಕೆಲಸಕ್ಕೂ ಬೇಸರಿಸಿಕೊಳ್ಳದ ಕಾರ್ಯಕರ್ತರ ಕಾರ್ಯಕ್ಷಮತೆಯನ್ನು ಯಾರೂ ಮೆಚ್ಚಲೇಬೇಕು. ಪ್ರತಿಕೂಲ ಹವಾಮಾನವಿದ್ದು ಇದ್ದಕ್ಕಿದ್ದಂತೆ ಸುರಿದ ಸುರಿಮಳೆ ಕೂಡಾ ಯಾರನ್ನು ಧೃತಿಗೆಡಿಸ ಲಿಲ್ಲ. ಅಭಿವೃದ್ಧಿಯ ಉತ್ತುಂಗಕ್ಕೇರಿದ ರಾಷ್ಟ್ರ ಗಳೂ ಕೂಡಾ ಹುಬ್ಬೇರಿಸುವಂತೆ ಮಾಡಿದ ವ್ಯವಸ್ಥೆ ಇಡೀ ಜಗತ್ತಿಗೆ ಚೀನಿಯರ ದಕ್ಷತೆ ಯನ್ನು ಎತ್ತಿ ತೋರಿಸಿದೆ. ಆದರೆ ದುರದೃ ಷ್ಟವಶಾತ್ ಪಾಶ್ಚಿಮಾತ್ಯ ರಾಷ್ಟ್ರಗಳ ಕಾಮಾಲೆ ಪೀಡಿತ ಕಣ್ಣುಗಳಿಗೆ ಜಗತ್ತೆಲ್ಲ ಹಳದಿಯಾಗಿಯೇ ಕಂಡಿತೆನ್ನಬಹುದು. ಪ್ರತಿನಿಧಿಗಳ ಸುರಕ್ಷತೆಗಾಗಿ ಮಾಡಿದ ರಕ್ಷ ಣಾ ವ್ಯವಸ್ಥೆಯನ್ನು ಬೇಹುಗಾರಿಕೆ ಎಂದು ದೂರಿದ್ದು ವರದಿಯಾಗಿರುವುದು ನೋಡಿ ದಾಗ ಸ್ವತಃ 15 ದಿನಗಳ ಸಮ್ಮೇಳನದಲ್ಲಿ ಭಾಗವಹಿಸಿ ಬಂದ ನನಗೆ ಅಚ್ಚರಿ ಎನಿ ಸಿತು. ಬಹುಶಃ ಜಾಗತೀಕರಣ ಮತ್ತು ಅದರ ದುಷ್ಪರಿಣಾಮಗಳ ಕುರಿತು ಒಕ್ಕೊ ರಲಿನ ವಿರೋಧಿ ಧ್ವನಿ ಕೇಳತೊಡಗಿದಾಗ ಉಂಟಾದ ಭಯದಿಂದ ಆ ಧ್ವನಿ ಹೊರ ಬೀಳದಂತೆ ತಡೆಯುವ ಪ್ರಯತ್ನವಾಗಿ ಈ ಅಪಪ್ರಚಾರ ವ್ಯವಸ್ಥೆ ಗೊಂಡಿತೇ ಎನ್ನುವ ಸಂದೇಹ ಮೂಡುತ್ತಿದೆ. ಸಾಮ್ರಾ ಜ್ಯಶಾಹಿಗಳಿಗೆ ಸೆಡ್ಡು ಹೊಡೆದು ನಿಲ್ಲುವ ಮಟ್ಟಿಗೆ ಅಭಿವೃದ್ಧಿ ಕಣ್ಣಿಗೆ ರಾಚುವಂತೆ ಬೆಳೆಯುತ್ತಿರುವ ಚೈನಾ ದೇಶಕ್ಕೆ ಮತ್ತು ಅಲ್ಲಿನ ಜನರಿಗೆ 'ಲಾಲ್ ಸಲಾಂ'. ❑

ಈಗ ಕಾಫಿಗಾಗಿ ಕದನ

ಉದಾರೀಕರಣವನ್ನು ಹಲವರು ಹೊಗ ಳುತ್ತಾರೆ. ಹಾಗೆ ಕಾಫಿಗೆ ಉದಾರೀಕರಣ ಬಂದಾಗ ದೇಶಕ್ಕೆ ಬಹಳ ಒಳ್ಳೆಯದಾಗುತ್ತದೆ ಎಂದು ಬಹಳ ಜನ ಹೇಳಿದ್ದರು. ಕಾಫಿ ಮಾರಾಟದ ಮೇಲೆ ಇದ್ದ ನಿಬಂಧನೆಗಳನ್ನು ತೆಗೆದಾಗ ಕಾಫಿಯ ರಫ್ತು ಬಹಳ ಹೆಚ್ಚಾಗಿ ದೇಶಕ್ಕೆ ವಿದೇಶೀ ವಿನಿಮಯದ ಹೊಳೆ ಹರಿಯುತ್ತದೆ ಎಂದಿದ್ದರು. ಸ್ವಲ್ಪ ಮಟ್ಟಿಗೆ ಇದು ನಿಜವಾಯಿತು. ಅಂತರ್ರಾಷ್ಟ್ರೀಯ ಮಟ್ಟ ದಲ್ಲಿ ಅಂದಿನಿಂದ ಹಲವಾರು ಕಾರಣಗಳಿ ಗಾಗಿ ಕಾಫಿಯ ಬೆಲೆ ಹೆಚ್ಚಾಗೇ ಇದೆ. ಜಗತ್ತಿ ನಾದ್ಯಂತ ಕಾಫಿಯ ಬೆಲೆ ಹೆಚ್ಚಾಗೆ ಇದ್ದರೆ ಕಾಫಿ ಬೆಳೆಗಾರರಿಗೆ ಒಳ್ಳೆಯದಲ್ಲವೇ? ಖಂಡಿತ ಹೌದು.

ಆದರೆ ಕಾಫಿ ಕುಡಿಯುವವರಿಗೆ? ಇಲ್ಲೇ ಬಂದಿರುವುದು ಸಮಸ್ಯೆ. ಈ ಉದಾರೀಕರ ಣದಿಂದ ಕಾಫಿಯ ಬೆಲೆ ಗಗನಕ್ಕೇರಿ ಕುಳಿ ತಿದೆ. ಕಾಫಿ ಬೆಳೆಗಾರ ತನ್ನ ಬೆಳೆಯ ಒಂದು ಭಾಗವನ್ನು ಕಡಿಮೆ ಬೆಲೆಗೆ ಕಾಫಿ ಮಂಡಳಿಗೆ ಮಾರಬೇಕು. ಕಾಫಿ ಮಂಡಳಿ ಈ ಕಾಫಿ ಯನ್ನು ದೇಶೀ ಮಾರುಕಟ್ಟೆಯಲ್ಲಿ ಸುಲಭ ಬೆಲೆಗೆ ಮಾರಬೇಕು ಎಂದಿತ್ತು. ಆದರಲ್ಲೂ ದೊಡ್ಡ ಕಾಫಿ ಬೆಳೆಗಾರರು ಹೀಗೆ ಮಾಡಿದರೆ ಆಗ ದೇಶದ ಬಳಕೆದಾರರಿಗೆ ಕಡಿಮೆ ದರ ದಲ್ಲಿ ಕಾಫಿ ದೊರೆಯುತ್ತದೆ.

ಆದರೀಗ ದೊಡ್ಡ ಕಾಫಿ ಬೆಳೆಗಾರರು ಈ ನಿಬಂಧನೆಯ ವಿರುದ್ಧ ಧ್ವನಿ ಎತ್ತತೊಡ ಗಿದ್ದಾರೆ. ಅಪಾರ ಲಾಭದ ರುಚಿ ಕಂಡ ಈ ಬೆಳೆಗಾರರಿಗೆ ಈಗ ದೇಶದ ಜನಕ್ಕಾಗೀ ಈ ಲಾಭದಲ್ಲಿ ಕಡಿತ ಉಂಟಾಗುತ್ತದೆಂಬುದು ಸಹಿಸಲಸಾಧ್ಯವಾದುದು. ಆದ್ದರಿಂದ ಅವರು ಹೋರಾಟಕ್ಕಿಳಿಯಲು ತಯಾರಾಗುತ್ತಿದ್ದಾರೆ. ಉದಾರೀಕರಣದ ಬಲವಾದ ಪ್ರತಿಪಾದನೆ ಮಾಡುತ್ತಿರುವ ಕೇಂದ್ರ ವಾಣಿಜ್ಯ ಮಂತ್ರಿ ಚಿದಂಬರಂ ಈ ಬೆಳೆಗಾರರ ಮನವೊಲಿ ಸಲು ಪ್ರಯತ್ನಿಸಿದ್ದಾರೆ. ಆದರೆ ಪರಿಣಾಮ ಶೂನ್ಯ.

ಆಗಲೇ ಗಗನಕ್ಕೇರಿರುವ ಕಫಿಯ ಬೆಲೆ ಇನ್ನೂ ಮೇಲಕ್ಕೇರಿಸಿದರೆ ಅದು ಕಷ್ಟವಾಗು ತ್ತದೆ. ದೇಶದ ಬಡ ಜನ ಕಾಫಿ ಕುಡಿಯುವು ದನ್ನೇ ಬಿಡಬೇಕಾಗುತ್ತದೆ. ಜೀವನ ಪರ್ಯಂತ ಕಾಫಿ ಹಲವು ಜನರ ಜೀವನದ ಒಂದು ಅತ್ಯಾವಶ್ಯಕ ಸರಕಾಗಿ ಹೋಗಿದೆ. ಈಗ ಇದು ಕೈಗೆಟುಕದೇ ಹೋದರೆ ಉದಾರೀಕ ರಣ ಜನರಿಗೆ ನೀಡಿದ ಕೊಡುಗೆ ಎನ್ನೋ ಣವೇ?


ಈಗ ನೀವೂ ವಿದೇಶೀ ಸಾಲ ಪಡೆಯಬಹುದು

ಉತ್ಪಾದಿಸುವ ಎಲ್ಲವನ್ನೂ ವಿದೇಶಗ ಳಿಗೆ ರಫ್ತು ಮಾಡುವಿರೆಂದರೆ ನೀವೂ ವಿದೇಶೀ ಸಾಲ ಪಡೆಯಬಹುದು. ಸಾಮಾನ್ಯವಾಗಿ ಸರಕಾರ ವಿದೇಶೀ ಸಾಲ ಪಡೆಯುತ್ತದೆ. ಕಂಪೆನಿಗಳು ವಿದೇಶೀ ಸಾಲ ಪಡೆಯುವು ದಾದರೆ ಹಲವು ನಿಬಂಧನೆಗಳನ್ನು ಪಾಲಿಸ ಬೇಕು. ಯಾಕೆಂದರೆ ಎಲ್ಲಾ ಕಂಪನಿಗಳು ವಿದೇಶೀ ಸಾಲ ಪಡಯತೊಡಗಿದರೆ ಅದ ರಿಂದಾಗಿ ದೇಶದ ಆರ್ಥಿಕವೇ ತೊಂದರೆಗೊ ಳಗಾಗಿಬಿಡುತ್ತದೆ. ಆದ್ದರಿಂದಲೇ ಈ ನಿಬಂಧನೆಗಳು. ಖಾಸಗಿಯವರು ವಿದೇಶೀ ಸಾಲ ಪಡೆಯುವುದು ದೇಶಕ್ಕೆ ಹಾನಿಯಾ ಗದೆ ಇರುವಂತೆ ನೋಡಿಕೊಳ್ಳಲು.

ಈಗ ರಫ್ತು ಮಾಡುವ ಘಟಕಗಳಿಗೆ ಈ ನಿಬಂಧನೆಗಳನ್ನು ಕೇಂದ್ರ ಸರಕಾರ ಪೂರ್ಣ ವಾಗಿ ಸಡಿಲಿಸಿದೆ. ಈ ಘಟಕಗಳು ಸುಮಾರಿ 15 ದಶಲಕ್ಷ ಡಾಲರುಗಳಷ್ಟು ವಿದೇಶೀ ಸಾಲ ವನ್ನು ಪಡೆಯಬಹುದು. ಇಲ್ಲಿ ಕೆಲ ನಿಬಂಧ ನೆಗಳಿವೆ. ಆದರೆ ಖಾಸಗಿಯವರು ಅವನ್ನು ಉಲ್ಲಂಘಿಸಬಹುದು.

ಈ ಕ್ರಮಕ್ಕೆ ಇನ್ನೊಂದು ಮುಖವಿದೆ. ಉದಾರೀಕರಣದಿಂದಾಗಿ ದೇಶದ ರಫ್ತು ಹೆಚ್ಚು ತ್ತದೆ. ಹಾಗೇ ದೇಶದ ರಫ್ತು ಹೆಚ್ಚುವುದರಿಂದ ನಮ್ಮ ವಿದೇಶೀ ವ್ಯಾಪಾರ ಬಾಕಿ ಸಮಸ್ಯೆ

ನರಸಿಂಹರಾವ್ ಸರಕಾರದ 52ನೇ ತಿಂಗಳಲ್ಲಿ



- ಜೆ. ಎಸ್. ಮಣಿ

ಬಗೆಹರಿಯುತ್ತದೆ. ಇದು ಉದಾರೀಕರಣ ಬಂದಾಗಿನಿಂದ ಹೂಡುತ್ತಿರುವ ವಾದ. ಆದರೆ ನಿರೀಕ್ಷಿತ ಪ್ರಮಾಣದಲ್ಲಿ ರಫ್ತು ಹೆಚ್ಚುತ್ತಿಲ್ಲ. ಆದ್ದರಿಂದ ರಫ್ತು ಹೆಚ್ಚಿಸುವ ಸಲುವಾಗಿ ಶತಾ ಯಗತಾಯ ಪ್ರಯತ್ನ ಮಾಡಬೇಕಾದ ಸ್ಥಿತಿ ಯಲ್ಲಿ ಸರಕಾರವಿದೆ. ಆದ್ದರಿಂದಲೇ ಈ ಕ್ರಮ.

ಆದರೆ ಇದರಿಂದಲಾದರೂ ನಮ್ಮ ಸಮಸ್ಯೆ ಬಗೆಹರಿದು ಪರಿಸ್ಥಿತಿ ಸುಧಾರಿಸುತ್ತದೆಯೇ? ಖಂಡಿತ ಇಲ್ಲ. ಬದಲಿಗೆ ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತದೆ. ಸರಕಾರ ಚಾಪೆಯ ಕೆಳಗೆ ನುಸುಳಿದರೆ ಖಾಸಗಿಯವರು ರಂಗೋಲಿಯ ಕೆಳಗೆ ನುಸುಳುವಷ್ಟು ಚಾಣಾಕ್ಷಗಳಿರುತ್ತಾರೆ. ರಫ್ತಿನ ಹೆಸರಿನಲ್ಲಿ ವಿದೇಶೀ ಸಾಲ ಪಡೆದು ತಮ್ಮ ಲಾಭ ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಅವರು ಮಾಡುತ್ತಾರೆ. ಅದರಿಂದಾಗಿ ಈ ವಿದೇಶೀ ಸಾಲ ದೇಶದ ಉತ್ಪಾದನೆ ರಫ್ತನ್ನು ಸ್ವಲ್ಪವೂ ಹೆಚ್ಚಿಸದೇ ಹೋಗಬಹುದು.

ಸಿಂಗಾಪುರದಲ್ಲಿ ಭಿಕ್ಷೆ

ನಮ್ಮ ಕೇಂದ್ರ ಅರ್ಥ ಮಂತ್ರಿ ಉದಾರೀ ಕರಣದ ರೂವಾರಿ ಡಾ.ಮನಮೋಹನಸಿಂ ಗರು ಈಗ ಸಿಂಗಾಪುರಕ್ಕೆ ಹೋಗಿ ಅಲ್ಲಿಯೂ ಭಿಕ್ಷೆ ಬೇಡುತ್ತಿದ್ದಾರೆ. ನಮ್ಮ ದೇಶದ ಅಂತರ್ರ ಚನೆಗಳಲ್ಲೂ(ರಸ್ತೆ, ವಿದ್ಯುತ್, ಟೆಲಿ ಸಂಪರ್ಕ ಇತ್ಯಾದಿ) ಖಾಸಗಿಯವರಿಗೆ ಹಣ ಹೂಡಲು ಅಪಾರ ಅವಕಾಶವಿದೆ. ಆದ್ದರಿಂದ ಇಲ್ಲಿಗೆ ಬಂದು ಹಣ ಹೂಡಿ ಎಂದು ಗೋಗೆರೆಯುತ್ತಿದ್ದಾರೆ.

ಎನ್ರಾನ್ ಒಪ್ಪಂದ ರದ್ದತಿ ದೊಡ್ಡ ಅನಾಹುತ ಎಂಬಂತೆ ಇಂತಹುದು ಇನ್ನು ಮುಂದೆ ಆಗುವುದಿಲ್ಲ. ಆದ್ದರಿಂದ ಧೈರ್ಯದಿಂದ ಬಂದು ನಮ್ಮಲ್ಲಿ ಹಣ ಹೂಡಿ ಎಂದು ಅಂಗಲಾಚಿದ್ದಾರೆ.

ಉದಾರೀಕರಣ ಪ್ರಾರಂಭಿಸಿದಾಗ ಹಾಗೂ ನಂತರದಲ್ಲಿ ಉದಾರೀಕರಣದ ನಂತರ ಖಾಸಗಿಯವರು ಈ ಅಂತರ್ರಚನೆಗಳಲ್ಲಿ ಹಣ ಹೂಡುತ್ತಾರೆ. ಆದ್ದರಿಂದ ಸಾರ್ವಜನಿಕ ಹಣ ಹೂಡಿಕೆಯ ಅವಶ್ಯಕತೆ ಇರುವುದಿಲ್ಲ ಎಂದು ಕೊಚ್ಚಿಕೊಳ್ಳುತ್ತಿದ್ದ ಮನಮೋಹನ್ ಸಿಂಗರು ಈಗ ಹೀಗೆ ಅಂಗಲಾಚುವ ಪರಿಸ್ಥಿ ತಿಯೇಕೆ?

ಯಾಕೆಂದರೆ ಖಾಸಗಿ ಹೂಡಿಕೆ ಅಂತರ್ರ ಚನಾ ಸೌಕರ್ಯಗಳಲ್ಲಿ ಆಗುತ್ತಿಲ್ಲ. ದೇಶದಲ್ಲಿ ಹೂಡಿಕೆಯ ಪ್ರಮಾಣವೇ ಕಡಿಮೆಯಾಗಿ ಹೋಗಿದೆ. ಸಾರ್ವಜನಿಕ ಹಣ ಹೂಡಿಕೆ ಯಾದ ಕಡೆಗೇ ಖಾಸಗೀ ಹಣ ಹೂಡಿ ಕೆಯೂ ಹರಿದು ಬರುತ್ತದೆ ಎಂಬುದು ವಾಸ್ತವ.

ಆದ್ದರಿಂದಲೇ ಅವರು ಬಂಡವಾಳಿಗ ರಲ್ಲಿ ಅಂಗಲಾಚುತ್ತಿರುವುದು. ಈಗ ಹಣ ಹೂಡುತ್ತೇನೆಂದರೂ ಸರ್ಕಾರದ ಬಳಿ ಹಣ ವಿಲ್ಲ. ವಿದೇಶೀ ಸಾಲ ಮರುಪಾವತಿ ಮಾಡ ಬೇಕು. ಬ್ಯಾಂಕ್-ಫಂಡ್ ಗಳ ಸಾಲ ತೀರಿಸ ಬೇಕು. ದೇಶದೊಳಗಿನ ಶ್ರೀಮಂತರಿಂದ ಕರ ವಸೂಲಿ ಮಾಡುವಂತಿಲ್ಲ (ಉದಾರೀಕ ರಣ!!) ಎಲ್ಲ ತೊಂದರೆಗಳ ಲಕ್ಷಣಗಳು ಆಗಲೇ ಕಾಣುತ್ತಿವೆ. ಉದಾರೀಕರಣದ ಪರಿ ಣಾಮಗಳಲ್ಲವೇ ಇವು?

ಅಸಲಿ ರೂಪ ಬೆಳಕಿಗೆ

ಕಾಂಗ್ರೆಸ್ಸಿಗಿಂತ ತಾನು ಭಿನ್ನ. ತಾನು ಉದಾ ರೀಕರಣ ವಿರೋಧಿಸುತ್ತೇನೆ ಎಂದೆಲ್ಲ ಹೇಳುವ ಜನತಾದಳ ಈಗ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಬಡಜನರಿಂದ ಶ್ರೀಮಂತರು ಜಮೀನು ಕಸಿದುಕೊಳ್ಳುವು ದಕ್ಕೆ ಅನುಕೂಲ ಮಾಡಿಕೊಡುವ ಮಸೂದೆ ಯನ್ನು ತಂದಿದೆ. ರಾಜ್ಯದ ಆರ್ಥಿಕ ಅಭಿ ವೃದ್ಧಿ ಬೆಂಗಳೂರಿನ ವಸತಿ ಸಮಸ್ಯೆಯ ಪರಿಹಾರ ಇವನ್ನೆಲ್ಲ ಸಾಧಿಸುವ ಸಲುವಾಗೇ ಈಗಿನ ಭೂಸುಧಾರಣಾ ಕಾಯಿದೆ ಎಂದೆಲ್ಲ ದೇವೇಗೌಡರು ಮತ್ತು ಅವರ ಪಕ್ಷದ ಜನ ಹೇಳಿಕೊಳ್ಳುತ್ತಿದ್ದಾರೆ.

ಈ ದಿಸೆಯಲ್ಲಿ ಆಗಲೇ ವಿಚಾರ ಮಾಡ ತೊಡಗಿದ್ದ ಮತ್ತು ಇಂತಹ ಮಸೂದೆಯನ್ನು ಜಾರಿಗೆ ತರುವ ತಯಾರಿಯಲ್ಲಿದ್ದ ಕಾಂಗ್ರೆ ಗಳು ಇದನ್ನು ಜನವಿರೋಧಿ ಎಂದು ರಾಜ ಕೀಯ ಲಾಭಕ್ಕಾಗಿ ಮಾತ್ರ ಬೊಬ್ಬೆ ಹಾಕಿ ವಿರೋಧಿಸುತ್ತಿದ್ದಾರೆ. ಬೂರ್ಜ್ವ-ಭೂಮಾ ಲಿಕ ವರ್ಗದ ಹಿತಾಸಕ್ತಿ ಕಾಯುವ ಈ ಎ ರಡೂ ಪಕ್ಷಗಳು ನಿಜದಲ್ಲಿ ತಮ್ಮಿಬ್ಬರ ಅಸಲು ಒಂದೇ ಎಂದು ತೋರಿಸಿಕೊಡುತ್ತಿದ್ದಾರೆ. ದುಡಿವ ಜನರ, ಬಡರೈತ, ಕೃಷಿ ಕೂಲಿಕಾ ರರ ಹಿತಗಳನ್ನು ಇವರು ಬಂಡವಾಳಿಗ ಭೂಮಾಲಿಕರ ಪರವಾಗಿ ಬಲಿಕೊಡುತ್ತಿದ್ದಾರೆ.

ಮಾನವ ಅಭಿವೃದ್ಧಿ ವರದಿ 1995

ವಿಶ್ವ ಸಂಸ್ಥೆಯ ಮಾನವ ಅಭಿವೃದ್ಧಿ ವರದಿ 1995 ಹೊರ ಬಂದಿದೆ. ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಜಗತ್ತಿನ ಮಹಿಳೆಯರ ಸಮಾವೇಶ ನಡೆದ ಹಿನ್ನೆಲೆಯಲ್ಲಿ ಈ ವರದಿ ಬಂತು. ಆದ್ದರಿಂದ ಮಹಿಳೆಯರ ಸ್ಥಿತಿ ಗತಿಯ ಬಗ್ಗೆ ಈ ವರದಿ ಹೆಚ್ಚಿನ ಗಮನ ನೀಡಿದೆ.

ಕಳೆದೆರೆಡು ದಶಕದಲ್ಲಿ ಮಹಿಳೆಯರ ಸಾಕ್ಷರತೆಯ ದೊಡ್ಡ ಪ್ರಗತಿಯಾಗಿರಬಹುದು. ಆದರೆ ಇದರಿಂದ ಪುರುಷರೊಂದಿಗೆ ರಾಜ ಕೀಯ ಮತ್ತು ಆರ್ಥಿಕ ಸಮಾನತೆಯ ಬಂದಿ ರುವುದು ಬಹಳ ಕಡಿಮೆ. ಜಗತ್ತಿನ ಜನಸಂ ಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಸ್ಥಿತಿ ಇಂದಿಗೆ ಶೋಚನೀಯ.

ಹಿಂದೆ ಪ್ರಗತಿಯನ್ನು ದೇಶದ ಒಟ್ಟುತ್ಪಾ ದನೆಯವಲಂಬಿಸಿ ಅಳೆಯಲಾಗುತ್ತಿತ್ತು. ಈ ಉತ್ಪಾದನೆಯನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿ ತಲಾ ಇಷ್ಟು ಉತ್ಪಾದನೆ ಆಯಿತು. ಇಷ್ಟು ಉತ್ಪಾದನೆ ಆದರೆ ಇಂತಹ ಜೀವನ ಮಟ್ಟ ಎಂಬುದರ ಮೇಲೆ ದೇಶದ ಪ್ರಗತಿ ಯನ್ನು ನಿರ್ಧರಿಸಲಾಗುತ್ತಿತ್ತು. ಆದರೆ ಐದು ವರ್ಷಗಳ ಹಿಂದೆ ಬಂದ ಮಾನವ ಅಭಿವೃದ್ಧಿ ವರದಿ (ಮಾ.ಅ.ವ), ಈ ವಿಧಾನವೇ ತಪ್ಪು ಎಂಬುದನ್ನು ತೋರಿತು. ಯಾಕೆಂದರೆ ಉತ್ಪಾ ದನೆ ಆದರೆ ಅದು ವಿತರಣೆ ಸಮವಾಗಿ ಆಗಬೇಕು ಜೊತೆಗೆ ಶಿಕ್ಷಣ ಇತ್ಯಾದಿಗಳು ಲಭ್ಯವಾಗಬೇಕು.

ಆದ್ದರಿಂದ ಈ ಸಾರಿ ಮಾನವ ಅಭಿ ವೃದ್ಧಿ ಸೂಚ್ಯಂಕದ ಜೊತೆಗೆ ಟೆಂಡರ್ ಎಂಪವರ್‌ಮೆಂಟ್ ಮೆಷರ್ ಅಂದರೆ ಮಹಿ ಳೆಯರ ಚೈತನ್ಯೀಕರಣ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳಲಾ ಯಿತು. ಈ ವಿಧಾನ ಮಹಿಳೆ ಮತ್ತು ಪುರು ಷರ ನಡುವಿನ ಸಮಾನತೆ/ ಅಸಮಾನತೆಯ ಮೇಲೆ ಆ ದೇಶದ ಪ್ರಗತಿಯನ್ನು ಅಳೆಯುತ್ತದೆ.

ಈ ವರದಿಯ ಪ್ರಕಾರ ಜಗತ್ತಿನಲ್ಲಿ ಲಕ್ಷ ಶತಕೋಟಿ ಡಾಲರುಗಳಷ್ಟು ಮೌಲ್ಯದ ಕೆಲ ಸಗಳಿಗೆ ಪ್ರತಿಫಲವನ್ನೇ ನೀಡಲಾಗುತ್ತಿಲ್ಲ. ಇದರಲ್ಲಿ ಬಹುತೇಕ ಪಾಲು ಮಹಿಳೆಯರು ಮಾಡುವ ಕೆಲಸಕ್ಕೆ ಸಂಬಂಧಿಸಿದ್ದು. ಅಂದರೆ ಅಡಿಗೆ ಮನೆಗೆಲಸದಂತಹ ಮಹಿಳೆಯರು ಮಾಡುವ ಕೆಲಸಗಳಿಗೆ ಯಾವುದೇ ಬೆಲೆ ಯನ್ನೇ ಕಟ್ಟಲಾಗುತ್ತಿಲ್ಲ/ ಪಾವತಿಸಲಾಗುತ್ತಿಲ್ಲ. ಈ ಹಣ ಮಹಿಳೆಯರು ದುಡಿದದ್ದು ಆದರೆ ಅವರಿಗೆ ಸೇರುತ್ತಿಲ್ಲ.

ಮಹಿಳೆಯರ ಅಸಮಾನತೆ ತೊಡೆದು ಹಾಕಲು ಅಂತಹ ಒಂದು ಕಾರ್ಯಕ್ರಮ ಹಮ್ಮಿಕೊಳ್ಳಲು ಇಷ್ಟೊಂದು ಹಣ ಬೇಕಾ ಗಿಲ್ಲ. ಬರೇ 20 ಶತಕೋಟಿ ಡಾಲರುಗಳಿದ್ದರೆ ಸಾಕು ಆದರೆ ಈ ಲಿಂಗ ಅಸಮಾನತೆಯನ್ನು ತೊಡೆದು ಹಾಕಲು ಬೇಕಾದ ರಾಜಕೀಯ ಸಂಕಲ್ಪ ಇಲ್ಲ. ಲಿಂಗ ಸಂಬಂಧಿತ ಅಭಿವೃದ್ಧಿ ಸೂಚ್ಯಂಕ ಉಪಯೋಗಿಸಿದರೂ ನಿಜದಲ್ಲಿ ಯಾವ್ಯಾವ ದೇಶದಲ್ಲಿ ಮಹಿಳೆಯರ ಸ್ಥಾನ ಏನು ಎಂಬುದು ಗೊತ್ತಾಗುವುದಿಲ್ಲ.

ಈ ದೃಷ್ಟಿಕೋನದಿಂದ ನೋಡಿದರೆ ಭಾರತ ಜಗತ್ತಿನ ದೇಶಗಳಲ್ಲಿ 99ನೇ ಸ್ಥಾನದ ಲ್ಲಿದೆ, ಸೌದಿ ಅರೇಬಿಯಾ 81ನೇ ಸ್ಥಾನದಲ್ಲಿ ದ್ದರೆ ಪಾಕಿಸ್ತಾನ 103ನೇ ಸ್ಥಾನದಲ್ಲಿದೆ.

ವರದಿ ಅಸಮಾನತೆ ತೊಡೆದು ಹಾಕಲು ಐದು ಪ್ರಸ್ತಾಪಗಳನ್ನು ಮುಂದಿರಿಸಿದೆ.

1. ಎಲ್ಲ ದೇಶಗಳು ಮಹಿಳೆಯರ ವಿರು ದ್ಧದ ಬೇಧಭಾವ ಕೊನೆಗಾಣಿಸುವ ಕಾನೂ ನುಗಳನ್ನು ಜಾರಿಗೆ ತರಬೇಕು.
2. ಮದುವೆ, ವಿಚ್ಛೇದನ, ದತ್ತು ವಾರ ಸುದಾರಿಕೆ ಇವುಗಳಿಗೆ ಸಂಬಂಧಪಟ್ಟ ಕಾನೂ ನುಗಳಿಗೆಲ್ಲ ತಿದ್ದುಪಡಿ ತಂದು ಇವುಗಳಲ್ಲಿ ಮಹಿಳೆಯರಿಗೂ ಸಮಾನ ಸ್ಥಾನ ಕಲ್ಪಿಸು ವುದು.
3. ಮುಖ್ಯ ವೃತ್ತಿನಿರತ ಹೊಣೆಗಾರಿಕೆ ಯಲ್ಲಿ ಶೇ. 30 ರಷ್ಟನ್ನು ಮಹಿಳೆಯರಿಗೆ ಮೀಸಲಿಡುವುದು. ಇದನ್ನು ಕ್ರಮೇಣ ಶೇ. 50ಕ್ಕೆ ಏರಿಸಬಹುದು.
4. ಮಹಿಳೆಯರ ಶಿಕ್ಷಣ, ಆರೋಗ್ಯ, ಇತ್ಯಾದಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ಹೂಡುವುದು.
5. ಜಾಗತಿಕವಾಗಿ ಎಲ್ಲ ತರಹದ ಲಿಂಗ ಅಸಮಾನತೆ ತೊಡೆದು ಹಾಕಲು ನಿಗದಿತ ಗುರಿಯ ಕಾರ್ಯಕ್ರಮ ಹಮ್ಮಿಕೊಳ್ಳುವುದು.



ಒರಿಸ್ಸಾದಲ್ಲಿ ಎರಡು ಲಕ್ಷ ಜನರ ಬಂಧನ

ಹೌದು, ಪ್ರತಿಪಕ್ಷಗಳು ನೀಡಿದ ಕರೆಗೆ ಒರಿಸ್ಸಾ ರಾಜ್ಯಾದ್ಯಂತ ಜನರ ಪ್ರತಿಕ್ರಿಯೆ ಅಭೂತಪೂರ್ವವಾಗಿತ್ತು. ಜನರು ಎದುರಿಸುತ್ತಿರುವ ನಾನಾ ಸಮಸ್ಯೆಗಳನ್ನು ಪರಹರಿಸುವಂತೆ ಒತ್ತಾಯಿಸಿ ರಾಜ್ಯದ ಕಾಂಗ್ರೆಸ್(ಐ) ಸರಕಾರವನ್ನು ಒತ್ತಾಯಿಸಿ ಪ್ರಮುಖ ಪ್ರತಿಪಕ್ಷಗಳಾದ ಜನತಾದಳ, ಸಿಪಿಐ(ಎಂ), ಸಿಪಿಐ ಮತ್ತು ಸಮಾಜವಾದಿ ಜನತಾ ಪಕ್ಷ(ಎಸ್ ಜೆ ಪಿ) ಅಸಹಕಾರ ಚಳುವಳಿಯನ್ನು ಹಮ್ಮಿಕೊಂಡಿದ್ದವು

ರಾಜ್ಯದಲ್ಲಿ ಕಾಂಗ್ರೆ ಅಧಿಕಾರಕ್ಕೆ ಮರಳಿ ಬಂದಂದಿನಿಂದ ಪ್ರತಿಪಕ್ಷಗಳು ನಡೆಸುತ್ತಿರುವ ಸರಣಿ ಚಳುವಳಿಯ ಮೂರನೇ ಘಟ್ಟ ಇದಾಗಿದೆ.

ಹಿಂದೆ ರಾಜ್ಯ ಮಟ್ಟದ ಧರಣಿ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರದರ್ಶನಗಳನ್ನು ನಡೆಸಿದಾಗ ಜನತೆ ಪ್ರತಿಪಕ್ಷಗಳಿಗೆ ಬೆಂಬಲವಾಗಿ ನಿಂತಿತ್ತು. ಸ್ಥಳೀಯ ಸಂಸ್ಥೆಗಳು ಹಾಗೂ ವಿಶೇಷ ನ್ಯಾಯಾಲಯಗಳ ವಿಸರ್ಜನೆ, ಬೆಲೆಯೇರಿಕೆ, ಕಾನೂನು ಮತ್ತು ಸುವ್ಯವಸ್ಥೆ ಕುಸಿದು ಬಿದ್ದಿರುವುದು ಹಾಗೂ ಜನರನ್ನು ಬಾಧಿಸುವ ಇತರ ಹಲವು ಸಮಸ್ಯೆಗಳನ್ನು ಎತ್ತಿಕೊಂಡು ಪ್ರತಿಪಕ್ಷಗಳು ಚಳುವಳಿಯನ್ನು ನಡೆಸುತ್ತಿವೆ.

ಈ ವರ್ಷ ಮಾರ್ಚ್‌ನಲ್ಲಿ ಕಾಂಗ್ರೆ ಮರಳಿ ಅದಿಕಾರಕ್ಕೆ ಬಂದ ಮೇಲೆ ಆಗಸ್ಟ್‌ನಲ್ಲಿ ಚುನಾಯಿತ ಪಂಚಾಯಿತಿಗಳು ಮತ್ತು ಪೌರಸಭೆಗಳನ್ನು ವಿಸರ್ಜಿಸಿತ್ತು. ಇವುಗಳಿಗೆ ನಡೆದ ಚುನಾವಣೆಗಳು ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗೆ ಅನುಗುಣವಾಗಿರಲಿಲ್ಲ ಎಂದು ನೆಪವೊಡ್ಡಿ ಕಾಂಗ್ರೆ ಸರಕಾರ ಈ ಕ್ರಮ ಕೈಗೊಂಡಿತ್ತು. ಆದರೆ ನಿಜವಾದ ಕಾರಣ ಬೇರೆಯೇ ಇತ್ತು. ಬಹುತೇಕ ಸ್ಥಳೀಯ ಸಂಸ್ಥೆಗಳು ಕಾಂಗ್ರೆಸ್ಸೇತರ ಪಕ್ಷಗಳ ನಿಯಂತ್ರಣದಲ್ಲಿದ್ದವು.

ಅದೇ ರೀತಿ ರಾಜ್ಯದ ಹಿಂದಿನ ಜನತಾದಳ ಸರಕಾರ ನೇಮಿಸಿದ್ದ ವಿಶೇಷ ನ್ಯಾಯಾಲಯಗಳನ್ನು ಕೂಡ ಕಾಂಗ್ರೆ ವಿಸರ್ಜಿಸಿದೆ. ಈಗಿನ ಮುಖ್ಯಮಂತ್ರಿ ಜೆ.ಬಿ. ಪಟ್ನಾಯಕ್ ಮತ್ತು ಇವರ ಅನೇಕ ಕಾಂಗ್ರೆ ನಾಯಕರನ್ನು ಭ್ರಷ್ಟಾಚಾರದ ಆರೋಪದ ಮೇಲೆ ವಿಶೇಷ ನ್ಯಾಯಾಲಯಗಳ ಕಟಕಟೆಗೆ ಎಳೆದು ತರಲಾಗಿತ್ತು.

ಮಾರಾಟ ತೆರಿಗೆಯನ್ನು ಹೆಚ್ಚಿಸಲು ಸರಕಾರ ನಿರ್ಧರಿಸಿರುವುದರಿಂದ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಕಾನೂನು ಮತ್ತು ಸುವ್ಯವಸ್ಥೆ ಕಾಂಗ್ರೆ ಸರಕಾರ ಅಧಿಕಾರಕ್ಕೆ ಬಂದ ನಂತರದ ಅವಧಿಯಲ್ಲಿ ಕುಸಿತದ ಪರಮಾವಧಿ ಹಂತವನ್ನು ತಲುಪಿದೆ.

ಈ ಎಲ್ಲಾ ಪ್ರಶ್ನೆಗಳನ್ನು ಪ್ರತಿ ಪಕ್ಷಗಳು ಜನತಾ ನ್ಯಾಯಾಲಯದ ಮುಂದಿಟ್ಟಿವೆ.

ಸೆಪ್ಟೆಂಬರ್ 15ರ ನಾಗರಿಕ ಅಸಹಕಾರ ಆಂದೋಲನದ ಸಂದರ್ಭದಲ್ಲಿ ರಾಜಧಾನಿ ಭುವನೇಶ್ವರದಲ್ಲಿ ಅನೇಕ ನಾಯಕರ ಸಹಿತ 5000ಕ್ಕೂ ಹೆಚ್ಚು ಜನರು ಸ್ವಯಂ ಬಂಧನಕ್ಕೆ ಒಳಗಾದರು. ಮಾಜಿ ಮುಖ್ಯಮಂತ್ರಿ ಬಿಜು ಪಟ್ನಾಯಕ್, ಶ್ರೀಕಾಂತ ಜೇನಾ, ಬಿಜಯ ಮಹಾಪಾತ್ರ, ನಲ್ಲನಿ ಬೋಹಲ್(ಎಲ್ಲರೂ ಜನತಾದಳ), ಶಿವಾಜಿ ಪಟ್ನಾಯಕ್, ಜನಾರ್ಧನ ಪತಿ, ನಬಾ ಮೊಹಂತಿ(ಎಲ್ಲರೂ ಸಿಪಿಐ(ಎಂ)) ಲೋಕನಾಥ ಚೌಧರಿ, ದ್ಯುತಿ ಕೃಷ್ಣ ಪಂಡಾ(ಇಬ್ಬರೂ ಸಿಪಿಐ), ಹೇಮಂತ ಗಜೇಂದ್ರ(ಎಸ್.ಜೆ.ಪಿ) ಮೊದಲಾದವರು ಆಂದೋಳನದ ನೇತೃತ್ವ ವಹಿಸಿದ್ದರು.

ರಾಜ್ಯದ ಹಲವು ಕಡೆಗಳಲ್ಲಿ ಕೂಡ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದ ವರದಿಗಳು ರಾಜ್ಯ ರಾಜಧಾನಿಯನ್ನು ತಲುಪಿವೆ. ಚಳುವಳಿಯ ಮುನ್ನಾ ದಿನ ರಾತ್ರಿಯೇ ಸರಕಾರ ಮುನ್ನೆಚ್ಚರಿಕೆ ಕ್ರಮವಾಗಿ ಪ್ರತಿಪಕ್ಷಗಳ ಕಾರ್ಯಕರ್ತರನ್ನು ಬಂಧಿಸಿತ್ತು.

ಈ ಚಳುವಳಿ ರಾಜ್ಯದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮೈತ್ರಿಯನ್ನು ಬಲಪಡಿಸುವತ್ತ ಒಂದು ದೊಡ್ಡ ಹೆಜ್ಜೆಯಾಗಿದೆ. ❑

ಪ. ಬಂಗಾಳದಲ್ಲಿ ರ್‍ಯಾಲಿ-ಧರಣಿಗಳು

ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ಕರೆಗೆ ಪ್ರತಿಕ್ರಿಯೆಯಾಗಿ ಪಶ್ಚಿಮ ಬಂಗಾಳದಾದ್ಯಂತ ಸೆ. 15ರಂದು ಸಾವಿರಾರು ಜನರು ರ್‍ಯಾಲಿಗಳು ಹಾಗೂ ಧರಣಿಗಳಲ್ಲಿ ಪಾಲ್ಗೊಂಡರು.

ಮಿಡ್ನಾಪುರ ಜಿಲ್ಲೆಯ ಹಾಲ್ದಿಯಾದಲ್ಲಿ 50 ಸಾವಿರಕ್ಕೂ ಹೆಚ್ಚು ಜನರು ವಿಪರೀತ ಮಳೆಯನ್ನು ಲೆಕ್ಕಿಸದೆ ರ್‍ಯಾಲಿಯಲ್ಲಿ ಪಾಲ್ಗೊಂಡರು. ದೇಶದ ಹಿತಾಸಕ್ತಿಗೆ ತಡೆಯೊಡ್ಡಿರುವ ಕೇಂದ್ರದ ನೀತಿಗಳೊಂದಿಗೆ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಜ್ಯೋತಿ ಬಸು ಈ ರ್‍ಯಾಲಿಯಲ್ಲಿ ಘೋಷಿಸಿದರು.

ಬರ್ದ್ವಾನ್ ಜಿಲ್ಲಾ ಕೇಂದ್ರದಲ್ಲಿ ವಿದ್ಯಾರ್ಥಿ ಯುವಜನರ ಬೃಹತ್ ರ್‍ಯಾಲಿಯಲ್ಲಿ 30000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ❑

ಚಂದ್ರಸ್ವಾಮಿ ಬಂಧನ ಆಗ್ರಹಿಸಿ ಆಂದೋಳನ

ವಿವಾದಾತ್ಮಕ 'ದೇವಮಾನವ' ಎಂದು ಸಮೂಹ ಮಾಧ್ಯಮಗಳ ಬಣ್ಣನೆಗೆ ಒಳಗಾಗಿರುವ ಖದೀಮ ಚಂದ್ರಸ್ವಾಮಿಯನ್ನು ಬಂಧಿಸುವಂತೆ ಒತ್ತಾಯಿಸಲು ಜನಾಂದೋಳನವನ್ನು ರೂಪಿಸಲು ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿ ನಿರ್ಧರಿಸಿದೆ. ಚಂದ್ರಸ್ವಾಮಿ ಮತ್ತು ಪ್ರಧಾನಿ ನರಸಿಂಹರಾವ್ ನಡುವಿನ ಸಂಬಂಧವನ್ನು ಬಯಲಿಗೆಳೆಯಲು ಪಕ್ಷ ಕಾರ್ಯಕ್ರಮ ಹಮ್ಮಿಕೊಳ್ಳಲಿದೆ. ❑

ತ್ರಿಪುರಾ: ಕೂಲಿಗಾಗಿ ಬಟ್ಟೆ

ಕೂಲಿಗಾಗಿ ಕಾಳು ರೀತಿಯಲ್ಲಿ 'ಕೂಲಿಗಾಗಿ ಬಟ್ಟೆ' ಯೋಜನೆಯನ್ನು ತ್ರಿಪುರಾದ ಎಡರಂಗ ಸರಕಾರ ಮತ್ತೆ ಜಾರಿಗೆ ತಂದಿದೆ. ಹಿಂದೆಯೂ ರಾಜ್ಯದಲ್ಲಿ ಎಡರಂಗ ಸರಕಾರವೇ ಈ ಯೋಜನೆಯನ್ನು ಪರಿಚಯಿಸಿತ್ತು ಎನ್ನುವುದನ್ನು ನೆನಪಿಸಿಕೊಳ್ಳಬಹುದು.

ಹಬ್ಬದ ಸಂಬರ್ಧಲ್ಲಿ ಗ್ರಾಮೀಣ ಬಡವರಿಗೆ ಹೊಸ ಬಟ್ಟೆಗಳನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ವರ್ಷದ ಹಬ್ಬದ ಋತುವಿನಲ್ಲಿ ಸುಮಾರು ಒಂದೂವರೆ ಲಕ್ಷ ಜನರು ರಾಜ್ಯದಾದ್ಯಂತ ಈ ಯೋಜನೆಯನ್ವಯ ಕೆಲಸ ಪಡೆಯಲಿದ್ದಾರೆ. ❑

ಶಿಕ್ಷಣ ರಂಗದ ಸಮಸ್ಯೆಗಳು ಹಾಗೂ ಶಿಕ್ಷಣ ಖಾಸಗೀಕರಣದ ವಿರುದ್ಧ

ವಿದ್ಯಾರ್ಥಿಗಳ ಬೃಹತ್ ವಿಧಾನಸೌಧ ಚಲೋ



ಹಾಸ್ಟೆಲ್ ವಿದ್ಯಾರ್ಥಿಗಳ ವಿವಿಧ ಬೇಡಿಕೆಗಳು, ಖಾಲಿ ಶಿಕ್ಷಕ ಹುದ್ದೆಗಳ ಭರ್ತಿ, ಐ.ಟಿ.ಐ. ವಿದ್ಯಾರ್ಥಿಗಳಿಗೆ ಮಾತೃಭಾಷೆಯಲ್ಲಿ ಪ್ರಶ್ನೆ ಪತ್ರಿಕೆ, ಸ್ಟೈಫಂಡ್ ಹೆಚ್ಚಳ, ಜೆ.ಒ.ಸಿ ವಿದ್ಯಾರ್ಥಿಗಳಿಗೆ ಫಲಿತಾಂಶ ಮುಂತಾದ ಬೇಡಿಕೆಗಳನ್ನು ಆಗ್ರಹಿಸಿ, ಖಾಸಗೀ ವಿ.ವಿ.ಗಳ ಸ್ಥಾಪನೆ ಹಾಗೂ ಶಿಕ್ಷಣದ ಖಾಸಗೀಕರಣದ ವಿರುದ್ಧ ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆಯ ಜಾರಿ, ಆದಾಯ ಪ್ರಮಾಣ ಪತ್ರದ ಮಿತಿ ಏರಿಕೆ ಮುಂತಾದ ಬೇಡಿಕೆಗಳ ಆಧಾರದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ) ನ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಿಂದ ಬಂದ 10 ಸಾವಿರಕ್ಕು ಹೆಚ್ಚು ವಿದ್ಯಾರ್ಥಿಗಳು ಸೆಪ್ಟೆಂಬರ್ 20ರಂದು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

'ಶಿಕ್ಷಣ ಸವಲತ್ತಲ್ಲ ನಮ್ಮ ಹಕ್ಕು-ನಮ್ಮ ಹಕ್ಕು'

ಶಿಕ್ಷಣ ಮಾರಾಟದ ವಸ್ತುವಲ್ಲ, ಸ್ವಾತಂತ್ರ್ಯ ಪ್ರಜಾ ಪ್ರಭುತ್ವ, ಸಮಾಜವಾದ, ಚಿರಾಯುವಾಗಲಿ, ವಿದ್ಯಾರ್ಥಿಗಳೇ ಒಂದಾಗಿ, ಹೋರಾಟಕ್ಕೆ ಮುಂದಾಗಿ' ಮುಂತಾದ ಘೋಷಣೆಗಳನ್ನು ವಿದ್ಯಾರ್ಥಿಗಳು ಕೂಗುತ್ತಿದ್ದರು. ಗಣನೀಯ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಮೆರವಣಿಗೆ ಹಾಗೂ ನಂತರ ನಡೆದ ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದರು.

ಬೆಳಿಗ್ಗೆ 11 ಗಂಟೆಗೆ ನಗರದ ಚಿಕ್ಕಲಾಲಭಾಗ್‌ನಿಂದ ಹೊರಟ ಬೃಹತ್ ಮೆರವಣಿಗೆ ಆನಂದ ರಾವ್ ವೃತ್ತ, ಕೆ.ಆರ್.ವೃತ್ತ ಮಾರ್ಗವಾಗಿ ಕಬ್ಬನ್‌ಪಾರ್ಕ್‌ಗೆ ತೆರಳಿತು. ಕಬ್ಬನ್ ಪಾರ್ಕಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಎಸ್.ಎಫ್.ಐ ಅಖಿಲ ಭಾರತ ಅಧ್ಯಕ್ಷರಾದ ವೈ.ವೆಂಕಟೇಶ್ವರರಾವ್, ಎಸ್.ಎಫ್.ಐ.ನ ಮಾಜಿ ಮುಖಂಡರೂ, ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿಯವರು, ಡಿ.ವೈ.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್, ಖ್ಯಾತ ವಕೀಲರಾದ ವಿ.ಗೋಪಾಲಗೌಡರು, ಎಸ್.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಮುಂತಾದವರು ಮಾತನಾಡಿದರು. ಎಸ್.ಎಫ್.ಐ.ನ ರಾಜ್ಯಾಧ್ಯಕ್ಷರಾದ ಶಾಂತರಾಮ್ ನಾಯಕ್ ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು.

ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿ ಇಂದಿನ ಶಿಕ್ಷಣ ವ್ಯವಸ್ಥೆಗೆ ಪಾರ್ಶ್ವವಾಯು ಬಡಿದಿದೆ. ಶಿಕ್ಷಣ ರಂಗದ ಮೂಲಭೂತ ಬದಲಾವಣೆಗೆ ಸರ್ಕಾರ ಪ್ರಯತ್ನಿಸುತ್ತಿಲ್ಲ. ಶಿಕ್ಷಣ ಖಾಸಗೀಕರಣವಾಗುತ್ತಾ ಉಳ್ಳವರು ಕೊಳ್ಳುವ ವಸ್ತುವಾಗಿದೆ. ಕೇಂದ್ರ ಸರ್ಕಾರ ಶಿಕ್ಷಣಕ್ಕೆ ವೆಚ್ಚ ಮಾಡುತ್ತಿರುವ ಹಣವನ್ನು ನಿರಂತರವಾಗಿ ಕಡಿತಗೊಳಿಸುತ್ತಿದೆ. ಶಿಕ್ಷಣ ಯಾವುದೇ ಸಮಾಜದ ಮಿದುಳಿನಂತೆ. ಇಂದು ಅದು ನಿರ್ಲಕ್ಷಕ್ಕೆ ಒಳಗಾಗಿದೆ ಎಂದು ವಿಷಾದಿಸಿದರು. ಸುಮಾರು ಒಂದು ವರ್ಷಕ್ಕೆ 1700 ಕೋಟಿಗೂ ಹೆಚ್ಚು ಹಣವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡುತ್ತಿರುವ ಕರ್ನಾಟಕ ಸರ್ಕಾರ, ಕ್ಯಾಪಿಟೇಶನ್ ಸುಲಿಗೆಗೆ ಆಸ್ಪದವಾಗದಂತೆ ಸರ್ಕಾರವೇ ಏಕೆ ಶಿಕ್ಷಣಸಂಸ್ಥೆಗಳನ್ನು ನಡೆಸಬಾರದು ಎಂದು ಅವರು ಪ್ರಶ್ನಿಸಿದರು.

ಎಸ್.ಎಫ್.ಐ.ಅಖಿಲ ಭಾರತ ಅಧ್ಯಕ್ಷರಾದ ವೈ.ವೆಂಕಟೇಶ್ವರ ರಾವ್ ಅವರು ಮಾತನಾಡಿ, ಹಾಸ್ಟೆಲ್ ವಿದ್ಯಾರ್ಥಿಗಳು ಶೋಚನೀಯ ಸನ್ನಿವೇಶದಲ್ಲಿ ಅಭ್ಯಾಸ ಮಾಡಬೇಕಾಗಿದೆ. ಒಬ್ಬ ವಿದ್ಯಾರ್ಥಿಗೆ ಮೂರು ಹೊತ್ತಿನ ಊಟ ಹಾಗೂ ತಿಂಡಿಗೆ ರೂ.8 ನೀಡಲಾಗುತ್ತಿದೆ. ಸರಿಯಾದ ಕಟ್ಟಡ, ಶುಚೀಕರಣ ವ್ಯವಸ್ಥೆ ಇಲ್ಲ. ಪರೀಕ್ಷೆಗಳ ಸಮಯದಲ್ಲಿ ಮೆಸ್ ಸೌಲಭ್ಯ ರದ್ದುಮಾಡಲಾಗುತ್ತದೆ. ವೈದ್ಯಕೀಯ ಸೌಲಭ್ಯವಿಲ್ಲ, ಕ್ರೀಡಾ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶವಿಲ್ಲ. ಇಂತಹ ಪರಿಸ್ಥಿತಿ ಬದಲಾಗಲು ವಿದ್ಯಾರ್ಥಿಗಳು ಸಂಘಟಿತ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಶಿಕ್ಷಣದ ಖಾಸಗೀಕರಣವಾದರೆ, ಬಡವರೇ ಬಹುಸಂಖ್ಯಾತರಾಗಿರುವ ದಲಿತ, ಹಿಂದುಳಿದ ವಿದ್ಯಾರ್ಥಿಗಳಿಗೆ ದೊಡ್ಡ ವಂಚನೆಯಾಗುತ್ತದೆ ಎಂದರು.

ಎಸ್.ವೈ.ಗುರುಶಾಂತ್ ಮಾತನಾಡಿ ವಿಧಾನ ಸಭೆಯಲ್ಲಿ ಹಾಸ್ಟೆಲ್ ಸಮಸ್ಯೆ, ಶಿಕ್ಷಣದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುವುದಕ್ಕೆ ಬದಲಾಗಿ, ನ್ಯಾಯಾಂಗ ನಿಂದನೆಯ ತಪ್ಪಿಗೆ ಶಿಕ್ಷೆಗೆ ಗುರಿಯಾಗಿರುವ ಐ.ಎ.ಎಸ್. ಅಧಿಕಾರಿಯ ವಿಷಯ ಅಗತ್ಯಕ್ಕಿಂತ ಹೆಚ್ಚು ಪ್ರಾಮುಖ್ಯತೆ ಪಡೆದು ನೈಜ ಸಮಸ್ಯೆಗಳಿಂದ ಜನರ ಗಮನವನ್ನು ದೂರ ಸೆಳೆಯಲಾಗುತ್ತಿದೆ ಎಂದ ಅವರು ಇಂದು ಶಿಕ್ಷಣ ಹಾಗೂ ಉದ್ಯೋಗಕ್ಕೆ ಸಂಬಂಧವಿಲ್ಲ. ಕೆಲಸಕ್ಕೆ ಬಾರದ ಪದವಿ ಪತ್ರಗಳನ್ನು ನೀಡುವ ಸಂಸ್ಥೆಗಳಾಗಿ ವಿ.ವಿ.ಗಳು ಪರಿವರ್ತಿತವಾಗಿದೆ. ಸರ್ಕಾರ ಇಂದು ವೈಜ್ಞಾನಿಕವಾದಿ ಜಾತ್ಯಾತೀತ, ವೃತ್ತಿಪರ, ಶಿಕ್ಷಣವನ್ನು ಜಾರಿಗೆ ತರಬೇಕೆಂದು ಅವರು ಆಗ್ರಹಿಸಿದರು.

ಅಖಿಲ ಭಾರತ ವಕೀಲರ ಸಂಘದ ಪರವಾಗಿ ಖ್ಯಾತ ವಕೀಲರಾದ ವಿ.ಗೋಪಾಲಗೌಡ ಮಾತನಾಡಿ, ವಿದ್ಯಾರ್ಥಿಗಳ ಬೇಡಿಕೆಗಳು ನ್ಯಾಯಬದ್ಧವಾಗಿ, ಸಂವಿಧಾನದ ಆಶಯಕ್ಕೆ ಪೂರಕವಾಗಿವೆ. ವಕೀಲ ಸಂಘ ವಿದ್ಯಾರ್ಥಿ ಬೇಡಿಕೆ ಹಾಗೂ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಅವರು ಘೋಷಿಸಿದರು.

ಶಿಕ್ಷಣ ಸಚಿವರ ಭೇಟಿ:
ಸಮಸ್ಯೆಗಳ ಪರಿಹಾರದ ಭರವಸೆ:

ಬಹಿರಂಗ ಸಭೆಯ ನಂತರ ಎಸ್.ಎಫ್.ಐ.ನ ರಾಜ್ಯ ಮಟ್ಟದ ನಿಯೋಗ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್ ಅವರ ನೇತೃತ್ವದಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಶ್ರೀ ಗೋವಿಂದೇಗೌಡರನ್ನು ಭೇಟಿಯಾಗಿ ಬೇಡಿಕೆಗಳ ಬಗ್ಗೆ ಮನವಿ ಪತ್ರವನ್ನು ಸಲ್ಲಿಸಿತು. ಬೇಡಿಕೆಗಳ ಬಗ್ಗೆ ತಕ್ಷಣ ಚರ್ಚಿಸಿ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಶ್ರೀಗೋವಿಂದೇಗೌಡರು ಭರವಸೆ ನೀಡಿದರು.

ಸಾಮೂಹಿಕ ಸಂಘಟನೆಗಳ ವೇದಿಕೆ: ಧರಣಿ

ಕೋಲಾರ: ಸಪ್ಟೆಂಬರ್ 15 ರಂದು ಕೋಲಾರ ನಗರದ ಪ್ರವಾಸಿ ಮಂದಿರದಿಂದ ಮೆರವಣಿಗೆ ಪ್ರಾರಂಭವಾಗಿ ನಗರದ ಪ್ರಮುಖ ಬೀದಿಗಳ ಮೂಲಕ ಹಾದು ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಸಾಮೂಹಿಕ ಸಂಘಟನೆಗಳ ವೇದಿಕೆ ಕೋಲಾರ ಹಮ್ಮಿಕೊಂಡಿದ್ದ ಈ ಕಾರ್ಯಕ್ರಮದಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ, ಕರ್ನಾಟಕ ಪ್ರಾಂತ ರೈತ ಸಂಘದ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು. ಕೆಎಸ್‌ಆರ್‌ಟಿಸಿ ಕಾರ್ಮಿಕರು ಸಹ ಪಾಲ್ಗೊಂಡಿದ್ದರು.

ಧರಣಿಯನ್ನುದ್ದೇಶಿಸಿ ಜಿ.ಸಿ.ಬಯ್ಯಾರೆಡ್ಡಿ, ರೈತಸಂಘದ ಕೆ.ಎಂ.ವೆಂಕಟೇಶ, ಆರ್.ವೆಂಕಟರಾಮಯ್ಯ, ಎಸ್‌ಎಫ್‌ಐನ ಶ್ರೀರಾಮ್, ಡಿವೈ ಎಫ್‌ಐನ ಎಂ.ವಿ.ನಾರಾಯಣಸ್ವಾಮಿ, ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘದ ಶಂಕರಪ್ಪ ಮತ್ತಿತರು ಮಾತನಾಡಿದರು.

ಪಕ್ಷದ ತರಗತಿ

ಕುರುಗೋಡು: ಸಿಪಿಐ(ಎಂ)ನ ಬಳ್ಳಾರಿ ಸ್ಥಳೀಯ ಸಮಿತಿ ನೇತೃತ್ವದಲ್ಲಿ ಸೆ.19ರಂದು ಕುರುಗೋಡುನಲ್ಲಿ 25 ಜನ ಪಕ್ಷದ ಹೊಸ ಸದಸ್ಯರಿಗೆ ಶಾಲೆಯೊಂದನ್ನು ನಡೆಸಲಾಯಿತು. ಸಿಪಿಐ(ಎಂ) ಪಕ್ಷದ ಉದ್ದೇಶ ಹಾಗೂ ನಮ್ಮ ಪಕ್ಷ ಮತ್ತು ಇತರ ರಾಜಕೀಯ ಪಕ್ಷಗಳಿಗಿರುವ ವ್ಯತ್ಯಾಸ ಮತ್ತು ಪಕ್ಷದ ಸದಸ್ಯರ 3 ಪ್ರಾಥಮಿಕ ಮತ್ತು ಪ್ರಮುಖ ಕರ್ತವ್ಯಗಳ ಕುರಿತು ಕಾಂ. ಯು.ಬಸವರಾಜು ವಿವರಿಸಿದರು. ಕಾಂ.ವಿ.ಎಸ್.ಶಿವಶಂಕರ್ ಸದಸ್ಯರನ್ನು ಶಾಲೆ ಯಶಸ್ವಿಗೊಳಿಸಲು ಸ್ವಾಗತಿಸಿದರು. ಕಾಂ. ಕೆ.ಗಾದಿಲಿಂಗಪ್ಪ ಹಾಗೂ ಕಾಂ. ತಿಮ್ಮಪ್ಪ, ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರು, ಕಾಂ.ದಿವಾಕರಪ್ಪ ಭಾಗವಹಿಸಿದ

ಪ್ಯಾಲೆಸ್ತೀನ್ ಸ್ವಯಮಾಡಳಿತ ವಿಸ್ತರಣೆ: ಮತ್ತೇ ಇಸ್ರೇಲೀ ಹಠಮಾರಿತನ

16 ತಿಂಗಳ ಹಿಂದೆ ಅಮೇರಿಕಾದ ಮಧ್ಯಸ್ಥಿಕೆಯಿಂದ ಪ್ಯಾಲೆಸ್ತೀನ್ ಸ್ವಯಮಾಡಳಿತದ ಬಗ್ಗೆ ಅರಾಫತ್ ಮತ್ತು ಇಸ್ರೇಲ್ ನಡುವೆ ಏರ್ಪಟ್ಟ ಒಪ್ಪಂದದ ಅನುಷ್ಠಾನ ಪ್ರತೀ ಹಂತದಲ್ಲಿ. ಪ್ಯಾಲೆಸ್ತೇನಿಯನ್ನರು ಸಂಕಟಗಳನ್ನು ಎದುರಿಸಬೇಕಾಗಿ ಬಂದಿದೆ. ಇತ್ತೀಚೆಗೆ ಗಾಝಾ ಪಟ್ಟಿ ಮತ್ತು ಜೆರಿಕೋ ದಲ್ಲಿನ ಸ್ವಯಮಾಡಳಿತವನ್ನು ಪಶ್ಚಿಮ ತಟದ ಇನ್ನಷ್ಟು ಭಾಗಕ್ಕೆ ವಿಸ್ತರಿಸುವ ಬಗ್ಗೆ ಮಾತುಕತೆಯಲ್ಲಿ ಇಸ್ರೇಲೀ ನಿರ್ಲಕ್ಷ್ಯ, ಹಠಮಾರಿತನದಿಂದ ಪಿ.ಎಲ್.ಓ. ಅಧ್ಯಕ್ಷ ಯಾಸೆರ್ ಅರಾಫತ್ ರೇಗಿ ಹೋದರು ಎಂದು ವರದಿಯಾಗಿದೆ. ಮುಖ್ಯವಾಗಿ ಇಸ್ರೇಲೀ ಜೈಲುಗಳಲ್ಲಿರುವ 5000ಕ್ಕೂ ಹೆಚ್ಚು ಪ್ಯಾಲೆಸ್ತೇನೀ ಬಂಧಿಗಳ ಬಿಡುಗಡೆ ಹಾಗೂ ಸ್ವಯಮಾಡಳಿತ ಪ್ರದೇಶಗಳಿಂದ ಇಸ್ರೇಲ್ ಸೇನೆಗಳ ವಾಪಸಾತಿ ಬಗ್ಗೆ ಇಸ್ರೇಲಿ ಸರಕಾರ ಒಪ್ಪಂದಕ್ಕೆ ಬರಲು ಸಿದ್ಧವಿಲ್ಲ, ಪಶ್ಚಿಮ ತಟದಲ್ಲಿ ನೀರಿನ ಮೇಲೆ ಇನ್ನೂ ಇಸ್ರೇಲೀ ಹಿಡಿತವಿರುವುದು ಪ್ಯಾಲೆಸ್ತೇನಿಯನ್ನರಿಗೆ ನೀರಿನ ದೊಡ್ಡ ಸಮಸ್ಯೆಯನ್ನು ಉಂಟು ಮಾಡಿದೆ. ಅಗತ್ಯಗಳನ್ನು ಕಡೆಗಣಿಸಿ ಅವರಿಗೆ ಕೇವಲ ಮೂರನೇ ಒಂದು ಭಾಗ ನೀರು ಒದಗಿಸುವ ಬಗ್ಗೆ ಪ್ಯಾಲೆಸ್ತೇನೀಯನ್ನರು ಸಿಟ್ಟಾಗಿದ್ದಾರೆ. ಈಗ ಇಸ್ರೇಲೀಗಳು ಸ್ವಲ್ಪ ಹೆಚ್ಚು ನೀರನ್ನು ಕೊಡಲು ಒಪ್ಪಿದ್ದಾರಷ್ಟೇ. ಒಂದು ಲಕ್ಷ ಪ್ಯಾಲೆಸ್ತೇನಿಯನ್ನರು ಹಾಗೂ ಕೇವಲ 400 ಯೆಹೂದಿ ವಲಸಿಗರು ಇರುವ ಹಿಬ್ರೋನ್ ಕುರಿತಾದ ಸಮಸ್ಯೆಯೂ ಪರಿಹಾರ ಕಂಡಂತಿಲ್ಲ. ಈ ಸಮಸ್ಯೆ, ಹಠಮಾರಿತನಗಳ ನಡುವೆಯೂ ಒಂದು ಒಪ್ಪಂದವಾಗುವ ಸಂಭವವಿದೆಯೆಂದು ಕೆಲವು ಸುದ್ದಿ ಮೂಲಗಳು ತಿಳಿಸಿವೆ. ಅವುಗಳ ಅನುಷ್ಠಾನ ಹೇಗೋ!

ನಿರುದ್ಯೋಗ: ಲ್ಯಾಟೀನ್ ಅಮೇರಿಕ ಜನಗಳ ಅತಿ ದೊಡ್ಡ ಸಂಕಷ್ಟ

ಉರುಗ್ವೇ, ಪೆರು, ಅರ್ಜೆಂಟಿನಾ, ಮೆಕ್ಸಿಕೋ ಇತ್ಯಾದಿ ಏಳು ಲ್ಯಾಟಿನ್ ಅಮೇರಿಕಾದ ದೇಶಗಳಲ್ಲಿ ನಡೆಸಿದ ಒಂದು ಸರ್ವೇಕ್ಷಣೆ ಪ್ರಧಾನ ನಿರುದ್ಯೋಗ ಅತಿ ದೊಡ್ಡ ಸಮಸ್ಯೆಯಾಗಿದೆ. ಉರುಗ್ವೇಯಲ್ಲಿ ನಿರುದ್ಯೋಗ 10.4% ತಲುಪಿದೆ. ಇದಲ್ಲದೆ ವೆನುಜುವೆಲಾದ ಜನ ಹಣದುಬ್ಬರದ ಬಗ್ಗೆ, ಪೆರಾಗ್ವೇ ದೇಶದ ಜನ ಭ್ರಷ್ಟಾಚಾರದ ಬಗ್ಗೆ, ಬ್ರೆಜಿಲ್ ದೇಶದ ಜನ ಆರೋಗ್ಯದ ಬಗ್ಗೆ, ಚಿಲಿಯ ಜನ ತಮ್ಮ ಕಮ್ಮಿ ಸಂಬಳದ ಬಗ್ಗೆ ಆತಂಕಿತರಾಗಿದ್ದಾರೆ, ಹೆಚ್ಚುತ್ತಿರುವ ಹಿಂಸಾಚಾರದ ಬಗ್ಗೆ ಎಲ್ಲರೂ ಆತಂಕಿತರಾಗಿದ್ದಾರೆ ಎಂದು ಈ ಸರ್ವೇಕ್ಷಣೆ ತಿಳಿಸಿದೆ.

ನೇಪಾಳ: ಜನಪರ ನೀತಿಗಳನ್ನು ಕಸದ ಬುಟ್ಟಿಗೆ ಹಾಕ ಹೊರಟ ಹೊಸ ಸರಕಾರ

ನೇಪಾಳದ ಹಿಂದಿನ ಕಮ್ಯುನಿಸ್ಟ್ ಸರಕಾರ ಜನಪರ, ಮುಖ್ಯವಾಗಿ ಗ್ರಾಮೀಣ ಬಡವರ ಪರವಾದ ನೀತಿಗಳನ್ನು ಅನುಷ್ಠಾನಗೊಳಿಸುವುದನ್ನು ಕಂಡು ಭಯಭೀತಗೊಂಡು ನೇಪಾಳೀ ಕಾಂಗ್ರೆಸ್ ಹಿಂದೆ ತಾನೇ ವಿರೋಧಿಸುತ್ತಿದ್ದ ರಾಜನ ಪರವಾದ ಆರ್.ಪಿ.ಪಿ. ಜತೆಗೆ ಶಾಮೀಲಾಗಿ ಕಮ್ಯುನಿಸ್ಟ್ ಸರಕಾರವನ್ನು ಉರುಳಿಸಿತು ಎಂಬ ಅನುಮಾನ ಈಗ ನಿಜವಾಗುತ್ತಿದೆ. ಅಧಿಕಾರಕ್ಕೆ ಬಂದ ಎರಡೇ ವಾರದೊಳಗೆ ಹಲವಾರು ಜನ-ಪರ ಆರ್ಥಿಕ ನೀತಿಗಳನ್ನು ಬದಲಿಸಿದೆ. ನಿಜ, ಐಎಂಎಫ್/ವಿಶ್ವ ಬ್ಯಾಂಕ್ ತತ್ವಗಳನ್ನು ಇಡಿಯಾಗಿ ನುಂಗಿದ ನಮ್ಮ ಮನಮೋಹನ ಸಿಂಗ್ ಇತ್ಯಾದಿಗಳು ಹೇಳುವಂತೆ 'ಹಣಕಾಸು ಶಿಸ್ತು', 'ಸ್ಥಿರತೆ' ಇತ್ಯಾದಿ ಪದಗುಚ್ಛಗಳಿಂದ ಇವನ್ನು ಮರೆಮಾಚುವ ಪ್ರಯತ್ನವನ್ನು ನಡೆಸಿದೆ.

ಆದರೂ ಹಿಂದಿನ ಕಮ್ಯುನಿಸ್ಟ್ ಸರ್ಕಾರದ "ನಿಮ್ಮ ಗ್ರಾಮವನ್ನು ನೀವೇ ಕಟ್ಟಿ" ಯೋಜನೆಯನ್ನು ಮಾತ್ರ ಕೈಬಿಡಲು ಈ ಸರಕಾರವೂ ಭಯಪಡುತ್ತಿದೆ. ವಾಸ್ತವವಾಗಿ ಈ ಯೋಜನೆ ಗ್ರಾಮಗಳಲ್ಲಿ ಅಂತರ್ಯುದ್ಧದ ಪರಿಸ್ಥಿತಿ ಏರ್ಪಡಿಸುತ್ತಿದೆ ಎಂದು ಕಮ್ಯುನಿಸ್ಟ್ ಸರಕಾರದ ಮೇಲೆ ಆಪಾದನೆ ಹಾಕಲಾಗಿತ್ತು. ಗ್ರಾಮೀಣ ಜನತೆಗೆ ಹೆಚ್ಚಿನ ಅಧಿಕಾರ ಕೊಟ್ಟು ಅಧಿಕಾರಶಾಹಿ ಮತ್ತು ಆಡಳಿತ ವ್ಯವಸ್ಥೆ ಜನಗಳ ಮೂಲಭೂತ ಅವಶ್ಯಕತೆಗಳಿಗೆ ಹೆಚ್ಚು ಹೆಚ್ಚಾಗಿ ಸ್ಪಂದಿಸಲೆಂದು ನೇಪಾಳದ 4000 ಹಳ್ಳಿಗಳಿಗೆ 5 ಲಕ್ಷ ರೂ.ಗಳಷ್ಟು ಒದಗಿಸಿದ ಈ ಯೋಜನೆಯಿಂದಾಗಿ ಕಮ್ಯುನಿಸ್ಟರ ಜನಬೆಂಬಲ ವಿಸ್ತರಿಸುವುದನ್ನು ಕಂಡು ನೇಪಾಳೀ ಕಾಂಗ್ರೆಸ್ ಮತ್ತಿತರರು ಭಯಭೀತರಾದರು ಎಂದು ನೇಪಾಳದ ಹಿಂದಿನ ಪ್ರಧಾನಮಂತ್ರಿ ಹಾಗೂ ಕಮ್ಯುನಿಸ್ಟ್ ಮುಖಂಡ ಮನಮೋಹನ್ ಅಧಿಕಾರಿ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಯೋಜನೆಯನ್ನು ಕೈಬಿಡದಿದ್ದರೂ ಅದರಲ್ಲೂ ಕೆಲವು ಬದಲಾವಣೆಗಳನ್ನು ಮಾಡಲಾಗುವುದು ಎಂಬ ಹೊಸ ಹಣಕಾಸು ಮಂತ್ರಿ ರಾಮ್ ಶರಣ್ ಮಹತ್ "ದೇಶ ಬಾಂಧವರು ಸೊಂಟ ಪಟ್ಟಿಯನ್ನು ಬಿಗಿಗೊಳಿಸಿಕೊಳ್ಳಲು ತಯಾರಾಗಬೇಕು" ಎಂದು ಮನವಿ ಮಾಡಿದ್ದಾರಂತೆ. ಅಂದರೆ ಬಡ ನೇಪಾಳಿಗಳು ಹೊಟ್ಟೆಗೆ ತಣ್ಣೀರು ಪಟ್ಟಿ ಕಟ್ಟಿಕೊಳ್ಳಲು ತಯಾರಾಗಬೇಕು ಎಂದು.

ಅಮೇರಿಕದೊಳಗೊಂದು ಇಣುಕು

ಇದೆಂತಹ ತಿರುವು ಮುರುವು?

ಅಮೇರಿಕದ ಪ್ರಜಾಪ್ರಭುತ್ವದ ಎರಡು ಪಕ್ಷ ಪದ್ಧತಿಯ ಬಗ್ಗೆ ಬಹಳ ಜೋಕುಗಳಿವೆ. ಅದರ ಅರ್ಥಹೀನತೆ, ಎರಡು ಪಕ್ಷಗಳ ನಡುವೆ ದೊಡ್ಡ ಸೈದ್ಧಾಂತಿಕ ವ್ಯತ್ಯಾಸವೇನೂ ಇಲ್ಲದಿರುವುದು ಯಾರಿಗಾದರೂ ಮೊದಲ ನೋಟಕ್ಕೆ ತಿಳಿಯುವಂಥದ್ದು. ಆ ಬಗ್ಗೆ ಅಮೇರಿಕನ್ ಪತ್ರಿಕೆಯಲ್ಲಿ ಒಬ್ಬ ಓದುಗನ "ಪತ್ರ ಮನಸೆಳೆಯುವಂಥದ್ದು."

ಪ್ರಿಯ ಸಂಪಾದಕರೇ,

ಅಮೇರಿಕದ ರಾಜಕೀಯದಲ್ಲಿ ಸೈದ್ಧಾಂತಿಕ ಮೌಲ್ಯಗಳೇ ಇಲ್ಲದೆ, ಬರಿಯ ಪ್ರದರ್ಶನದ ಮಾರುಕಟ್ಟೆ ಆಗಿಬಿಟ್ಟಿದೆ ಎನ್ನುವುದು ಎಲ್ಲರಿಗೂ ತಿಳಿದದ್ದು. ಆದರೆ ಈ ಬಗ್ಗೆ ನಾನು ಒಂದು ಕಾರಿನ ಹಿಂದೆ ಅಂಟಿಸಿದ ಚೀಟಿಯಲ್ಲಿ ನೋಡಿದ್ದಕ್ಕಿಂತ ದೊಡ್ಡ ಯಾವುದೇ ಟಿಪ್ಪಣಿ ಇರಲಿಕ್ಕಿಲ್ಲ. ಆ ಚೀಟಿ ಹೀಗಿದೆ.

'ರಿಪಬ್ಲಿಕನ್ ಸರಕಾರದಲ್ಲಿ ಅಮೇರಿಕದಲ್ಲಿ ಮನುಷ್ಯ ಮನುಷ್ಯನನ್ನು ಶೋಷಿಸುತ್ತಾನೆ. ಆದರೆ ಡೆಮೊಕ್ರಾಟಿಕ್ ಸರಕಾರ ಬಂದಾಗ ಅದು ತಿರುವು-ಮುರುವಾಗುತ್ತದೆ'.

-ಶರತ್ಚಂದ್ರ

ಹೊಸ ಬ್ರೆಜಿಲ್ ನಿರ್ಮಾಣ
ಕಮ್ಯುನಿಸ್ಟ್ ಪಕ್ಷದ ವಿಶೇಷ ಸಮ್ಮೇಳನದ ನಿರ್ಧಾರ

ಬ್ರೆಜಿಲ್ ಕಮ್ಯುನಿಸ್ಟ್ ಪಕ್ಷ(PCB) ಇತ್ತೀಚೆಗೆ ಒಂದು ವಿಶೇಷ ಸಮ್ಮೇಳನ ನಡೆಸಿ ಒಂದು ಹೊಸ ಕಾರ್ಯಕ್ರಮವನ್ನು ಅಂಗೀಕರಿಸಿದೆ. ಮೂರು ವರ್ಷಗಳ ಹಿಂದೆ ನಡೆದ ಪಕ್ಷದ 8ನೇ ಮಹಾಧಿವೇಶನದ ನಿರ್ಧಾರದ ಪ್ರಕಾರ ಜರುಗಿದ ಈ ಸಮ್ಮೇಳನದಲ್ಲಿ 200ಕ್ಕೂ ಹೆಚ್ಚು ಚುನಾಯಿತ ಪ್ರತಿನಿಧಿಗಳು ಭಾಗವಹಿಸಿದ್ದರು. ಮೂರು ವರ್ಷಗಳ ತೀವ್ರ ಆಂತರಿಕ ಚರ್ಚೆಗಳ ನಂತರ ಈ ಸಮ್ಮೇಳನದಲ್ಲಿ ಪಕ್ಷದ ಸೈದ್ಧಾಂತಿಕ ನಿಲುವುಗಳನ್ನು ಹಾಗೂ ಬ್ರೆಜಿಲ್ ನಲ್ಲಿ ಸಮಾಜವಾದಿ ಕ್ರಾಂತಿಯ ಕಾರ್ಯನೀತಿಯನ್ನು ವಿವರಿಸುವ ಕಾರ್ಯಕ್ರಮವನ್ನು ಅಂಗೀಕರಿಸಲಾಯಿತು. ಸಿಪಿಐ(ಎಂ) ಪರವಾಗಿ ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ ಸೌಹಾರ್ದ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ಏಷ್ಯಾದಲ್ಲಿ ಭಾರತದಂತೆ ಲ್ಯಾಟಿನ್ ಅಮೇರಿಕಾದಲ್ಲಿ ಬ್ರೆಜಿಲ್ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅತ್ಯಂತ ಹೆಚ್ಚು ಅಭಿವೃದ್ಧಿ ಹೊಂದಿದ ದೇಶ. ಆದರೆ ಪರಾವಲಂಬಿ ಬಂಡವಾಳಶಾಹಿಯ ಮೂಲಕ ಬೆಳೆದ ದೇಶ. 1922ರಲ್ಲೇ ಕಮ್ಯುನಿಸ್ಟ್ ಪಕ್ಷ ಆರಂಭವಾಗಿದ್ದರೂ 1945ರವರೆಗೆ ಗುಪ್ತ ಚಟುವಟಿಕೆಗಳಲ್ಲೇ ತೊಡಗಿಕೊಳ್ಳಬೇಕಾಯಿತು. 1945ರಲ್ಲಿ ಅದಕ್ಕೆ ಕಾನೂನುಬದ್ಧ ಅಸ್ತಿತ್ವ ದೊರೆತರೂ ಮತ್ತೆ 1947ರಲ್ಲಿ ನಿಷೇಧಿಸಲ್ಪಟ್ಟಿತು. ನಂತರ ಅದು ಬಹಿರಂಗವಾಗಿ ಕಾರ್ಯನಿರ್ವಹಿಸಲು ಸಾಧ್ಯವಾದದ್ದು 1985ರಲ್ಲಿ ಮಿಲಿಟರಿ ಸರ್ವಾಧಿಕಾರ ಸೋತ ಮೇಲೆಯೇ.

ಈಗ ಎರಡು ಲಕ್ಷ ಸದಸ್ಯತ್ವ ಹೊಂದಿರುವ ಈ ಪಕ್ಷ ಗುಪ್ತ ಚಟುವಟಿಕೆಗಳ ಅವಧಿಯಲ್ಲಿ ಬ್ರೆಝಿಲ್‌ನಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಯನ್ನು ತನ್ನ ಗುರಿಯಾಗಿ ಇಟ್ಟುಕೊಂಡಿತ್ತು. ಸಿಐಎ ಸಂಚಿನಿಂದ 1964ರಲ್ಲಿ ಅಧಿಕಾರ ಕಿತ್ತುಕೊಂಡ ಮಿಲಿಟರಿ ಸರ್ವಾಧಿಕಾರದ ವಿರುದ್ಧ ಪ್ರಜಾಪ್ರಭುತ್ವ ಶಕ್ತಿಗಳ ಮಿತ್ರಕೂಟ 1988ರಲ್ಲಿ ದೇಶ ಒಂದು ಹೊಸ ಪ್ರಜಾಪ್ರಭುತ್ವವಾದಿ ಸಂವಿಧಾನವನ್ನು ಅಂಗೀಕರಿಸಿದಾಗ ಸಹಜವಾಗಿಯೇ ಎಡ-ಬಲ ಕೂಟಗಳಾಗಿ ಒಡೆಯಿತು. 1989ರಲ್ಲಿ ಬಲಪಂಥೀಯ ಕೂಟ ಅಧಿಕಾರಕ್ಕೆ ಬಂತು. ಆದರೂ ಬ್ರೆಜಿಲ್ ಜನತಾರಂಗದ ಅಧ್ಯಕ್ಷೀಯ ಅಭ್ಯರ್ಥಿ 47.5% ಮತ ಪಡೆದರು. ಬ್ರೆಜಿಲ್ ಕಾರ್ಮಿಕ ಪಕ್ಷ ಪ್ರಧಾನ ಅಂಗವಾಗಿರುವ ಈ ರಂಗದಲ್ಲಿ ಕಮ್ಯುನಿಸ್ಟ್ ಪಕ್ಷ ಒಂದು ಮಹತ್ವದ ಅಂಗ.

ಇತರ ಕೆಲವು ಕಮ್ಯುನಿಸ್ಟ್ ಪಕ್ಷಗಳಂತೆ ಬ್ರೆಜಿಲ್ ಕಮ್ಯುನಿಸ್ಟ್ ಪಕ್ಷದಲ್ಲೂ ಪರಿಷ್ಕರಣವಾದದ ವಿರುದ್ಧ ಹೋರಾಟ ನಡೆಯಿತು. ಒಡಕು ಕೂಡಾ ಉಂಟಾಯಿತು. ಈಗ ತನ್ನ 73 ವರ್ಷಗಳ ಹೋರಾಟದ ಅನುಭವದಿಂದ ಹೊಸ ಕಾರ್ಯಕ್ರಮವನ್ನು ಅಂಗೀಕರಿಸಿದೆ.

ಈ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಈ ದೇಶದಲ್ಲಿ ಪಿಸಿಬಿಯ ಮಹತ್ವವೇನು ಎಂದು ತೋರಿಸಿತು ಎನ್ನುತ್ತಾರೆ ಕಾಂ. ಸೀತಾರಾಂ ಯೆಚೂರಿ. ಆಳುವ ಪಕ್ಷ ಬಿಟ್ಟು ಬೇರೆಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳೂ ಇದರಲ್ಲಿ ಭಾಗವಹಿಸಿದ್ದರು. ಹಲವು ಬುದ್ಧಿಜೀವಿಗಳೂ ಭಾಗವಹಿಸಿದ್ದರು. ಮಿಲಿಟರಿ ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಬ್ರೆಜಿಲ್ ಕಮ್ಯುನಿಸ್ಟ್ ಪಕ್ಷ ತನ್ನ ಅವಿರತ ಚಟುವಟಿಕೆಗಳಿಂದಾಗಿ ಒಂದು ಗೌರವದ ಸ್ಥಾನ ಪಡೆದಿದೆ.

ಮಿಲಿಟರಿ ಆಳ್ವಿಕೆಯೂ ಕೆಡವಲಾರದ ಒಂದು ಅಪೂರ್ವ ಸ್ಮಾರಕ

ಆಸ್ಕರ್ ನೈ ಮೆಯೆರ್ ಬ್ರೆಜಿಲ್ ನ ಪ್ರಖ್ಯಾತ ವಾಸ್ತುಶಿಲ್ಪಿ. ಬ್ರೆಜಿಲ್ ನ ಬಹುಭಾಗವನ್ನು ಆವರಿಸಿಕೊಂಡಿರುವ ಅಮೆಝೋನ್ ಮಳೆ ಕಾಡುಗಳ ಅಂಚಿನಲ್ಲಿ ರಾಜಧಾನಿ ಬ್ರೆಜೀಲಿಯಾ ನಗರವನ್ನು 1960ರಲ್ಲಿ ನಿರ್ಮಿಸಿದವರು ಇವರು. ಮಿಲಿಟರಿ ಆಳ್ವಿಕೆಯ ಕಾಲದಲ್ಲಿ ಆಧುನಿಕ ಬ್ರಿಜಿಲ್‌ನ ನಿರ್ಮಾಪಕ ಎಂದು ಹೆಸರಾದ ಹಾಗೂ ಮಾಜಿ ಅಧ್ಯಕ್ಷನಾದ ವರ್ಗಾಸ್‌ಗೆ ಮಿಲಿಟರಿ ಸರಕಾರ ಒಂದು ಸ್ಮಾರಕ ನಿರ್ಮಿಸಬೇಕೆಂದು ಮೆಯೆನ್ ಗೆ ಆದೇಶ ನೀಡಿತು. ವಾಸ್ತವವಾಗಿ ಅಧ್ಯಕ್ಷ ವರ್ಗಾಸ್ ಸಿಐಎನ ಸಂಚಿನಿಂದಾಗಿ ಮಿಲಿಟರಿ ಆಳ್ವಿಕೆ ಬರುವ 4 ವರ್ಷಗಳ ಹಿಂದೆ **ಈ ಸರ್ವಾಧಿಕಾರದ ಪೂರ್ವ ಸೂಚನೆ ನೀಡುತ್ತಾ ಆತ್ಮಹತ್ಯೆ ಮಾಡಿಕೊಂಡಿದ್ದರು.**

ಆಸ್ಕರ್ ಮೆಯೆನ್ ನಿರ್ಮಿಸಿರುವ ಸ್ಮಾರಕ ಹೇಗಿದೆ ಗೊತ್ತೇ? - ನಗರದ ಒಂದು ಮೂಲೆಯಲ್ಲಿ ಒಂದು ಬೃಹತ್ ಗಾತ್ರದ ತಿರುವು ಮುದುವಾದ ಕುಡುಗೋಲು ಸುತ್ತಿಗೆ ನಿಲ್ಲಿಸಿ ಸುತ್ತಿಗೆಯ ಮೇಲೆ ಅಧ್ಯಕ್ಷ ವರ್ಗಾಸರೆ ಪ್ರತಿಮೆ ನಿಲ್ಲಿಸಿದರು. ಸಂಜೆಯಾಗುತ್ತಿದ್ದಂತೆ ಸೂರ್ಯ ಈ ಸ್ಮಾರಕದ ಹಿಂದೆ ಬಂದು ಬೃಹತ್ ಕುಡುಗೋಲು ಸುತ್ತಿಗೆಯ ನೆರಳು ಇಡೀ ನಗರದ ಮೇಲೆ ಬೀಳುತ್ತದೆ. ಆದರೂ ಸಾರ್ವಜನಿಕ ಕ್ರೋಧಕ್ಕೆ ಹೆದರಿ ಮಿಲಿಟರಿ ಆಳ್ವಿಕೆ ಈ ಸ್ಮಾರಕವನ್ನು ಒಪ್ಪಿಕೊಳ್ಳಬೇಕಾಯಿತು.

ಈ ಸ್ಮಾರಕ ಇನ್ನೂ ಇದೆ. ಇದು ಬ್ರೆಜಿಲ್ ನ ಭವಿಷ್ಯದ ಪ್ರತಿನಿಧಿ ಎನ್ನುತ್ತದೆ ಬ್ರೆಜಿಲ್ ಕಮ್ಯುನಿಸ್ಟ್ ಪಕ್ಷ. ಅದನ್ನು ನಿರ್ಮಿಸಿದ ವಾಸ್ತು ಶಿಲ್ಪಿ ಆಸ್ಕರ್ ಮೆಯೆರ್ ಕಮ್ಯುನಿಸ್ಟ್ ಪಕ್ಷದ ಬೆಂಬಲಿಗರಲ್ಲಿ ಪ್ರಮುಖರು.

ಕ್ಯೂಬಾ ಕ್ರಾಂತಿ ಕುಸಿಯುತ್ತದೆಂಬ ಅಮೇರಿಕನ್ ಆಳರಸರ ಆಸೆ ಕುಸಿದಿದೆ

ಕ್ಯೂಬಾ ಕಳೆದ ವಾರ ಹೊಸದೊಂದು ವಿದೇಶೀ ಹಣ ಹೂಡಿಕೆ ಶಾಸನವನ್ನು ಜ್ಯಾರಿಗೆ ತಂದಿದೆ. ಇದು 'ಬಂಡವಾಳಶಾಹಿಗೆ ಕ್ಯೂಬಾ ಸರಕಾರ ಕ್ರಮೇಣ ಶರಣಾಗುತ್ತಿರುವುದನ್ನು ತೋರಿಸುತ್ತಿದೆ' ಎಂಬ ವಿಶ್ಲೇಷಣೆ ಪಾಶ್ಚಿಮಾತ್ಯ ಮಾಧ್ಯಮಗಳಲ್ಲಿ ಬಂದಿದೆ. ಇದು ಸುಳ್ಳು, ಕ್ಯೂಬಾ ಎಂದಿನಂತೆ ಸಮಾಜವಾದಿ ಆದರ್ಶಗಳಿಗೆ ಬದ್ಧವಾಗಿದೆ ಎಂದು ಕ್ಯೂಬಾ ರಾಷ್ಟ್ರೀಯ ಅಸೆಂಬ್ಲಿಯ ವಿದೇಶ ವ್ಯವಹಾರಗಳ ಸಮಿತಿಯ ಅಧ್ಯಕ್ಷ ಜೋಸ್ ಲೆಯೊನಾರ್ಡೋ ಪೆರೆಝ್ ಐ.ಎನ್.ಎಸ್. ಸುದ್ದಿ ಸಂಸ್ಥೆ ಜತೆ ಮಾತನಾಡುತ್ತಾ ಸ್ಪಷ್ಟಪಡಿಸಿದ್ದಾರೆ. ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರೂ ಆಗಿರುವ ಪೆರೆಝ್ ಇತ್ತೀಚೆಗೆ ಅಲ್ಲಿನ ಸಂಸದೀಯ ನಿಯೋಗದ ಮುಖ್ಯಸ್ಥರಾಗಿ ಭಾರತ ಭೇಟಿಗೆ ಬಂದಿದ್ದರು.

ಸೆಪ್ಟೆಂಬರ್ 5ರಂದು ಕ್ಯೂಬಾದ ರಾಷ್ಟ್ರೀಯ ಅಸೆಂಬ್ಲಿ ಒಂದು ವರ್ಷದ ಚರ್ಚೆಯ ನಂತರ ಶಿಕ್ಷಣ, ಆರೋಗ್ಯ ಮತ್ತು ರಾಷ್ಟ್ರೀಯ ರಕ್ಷಣೆಯ ಕ್ಷೇತ್ರಗಳನ್ನು ಬಿಟ್ಟು ಉಳಿದ ವಲಯಗಳಲ್ಲಿ ವಿದೇಶೀ ಹಣ ಹೂಡಿಕೆಗೆ ಅವಕಾಶ ನೀಡುವ ಶಾಸನವೊಂದನ್ನು ಅಂಗೀಕರಿಸಿತು. ಕೆಲವು ಅಪರೂಪದ ಸಂದರ್ಭಗಳಲ್ಲಿ ವಿದೇಶೀ ಕಂಪನಿಗಳಿಗೆ 100% ಒಡೆತನ ಕೊಡುವ ಅವಕಾಶವೂ ಈ ಶಾಸನದಲ್ಲಿ ಇದೆ. ಕ್ಯೂಬಾದ 85% ವ್ಯಾಪಾರ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಾಜವಾದೀ ಬಣದ ದೇಶಗಳೊಂದಿಗಿತ್ತು. ಈ ಬಣದ ಕುಸಿತದಿಂದಾಗಿ ಒಮ್ಮೆಗೇ ಕ್ಯೂಬಾ ತನ್ನ ಆಮದು ಸಾಮರ್ಥ್ಯದ 70%ನ್ನು ಕಳಕೊಂಡಿತು. ಇದರ ಜತೆಗೆ ಅಮೇರಿಕಾದ ಆರ್ಥಿಕ ನಿರ್ಬಂಧ. ಅಲ್ಲದೆ ಕ್ಯೂಬಾಕ್ಕೆ ಯಾವುದೇ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಸಹಾಯ ದೊರೆಯುತ್ತಿಲ್ಲ. ಇಂತಹ ಸ್ಥಿತಿಯಲ್ಲಿ ನಾವು ಎದುರಿಸಲು ಸಿದ್ಧವಿಲ್ಲದಂತಹ ಒಂದು ಸನ್ನಿವೇಶ ಸೃಷ್ಟಿಯಾದ ಹಿನ್ನೆಲೆಯಲ್ಲಿ ಕ್ಯೂಬಾದ ಸರಕಾರ ಕೈಗೊಳ್ಳಬೇಕಾಗಿ ಬಂದ ಕೆಲವು ಕ್ರಮಗಳಲ್ಲಿ, ತನ್ನ ಅಸ್ತಿತ್ವ ಉಳಿಸಿಕೊಳ್ಳುವ ಹೋರಾಟದ ಭಾಗವಾಗಿ ಕೈಗೊಂಡ ಕ್ರಮಗಳಲ್ಲಿ ಇದೊಂದು ಎಂದು ಕಾಂ. ಪೆರೆಝ್ ವಿವರಿಸುತ್ತಾರೆ.

"ಆದರೆ ಇವೆಲ್ಲಾ ಬದಲಾವಣೆಗಳ ಉದ್ದೇಶ ಕ್ಯೂಬಾ ಕ್ರಾಂತಿ ಕಳೆದ ೩೬ ವರ್ಷಗಳಲ್ಲಿ ಸಾಧಿಸಿದ್ದನ್ನು ಉಳಿಸಿಕೊಳ್ಳುವುದು. ನಾವು ಲ್ಯಾಟಿನ್ ಅಮೇರಿಕಾದ ಇತರ ದೇಶಗಳಂತೆ ನವ ಉದಾರವಾದೀ ಆರ್ಥಿಕ ಮಾದರಿಯನ್ನು ಅನುಸರಿಸುತ್ತಿಲ್ಲ" ಎಂದು ಹೇಳುತ್ತಾರೆ ಅವರು.

ಈಗ ಕ್ಯೂಬಾದಲ್ಲಿ ಆರು ರೀತಿಯ ಒಡೆತನವಿದೆ - ಸಣ್ಣ ರೈತರ ಖಾಸಗೀ ಒಡೆತನ, ರೈತರ ಮತ್ತು ಕೃಷಿ ಕೂಲಿಕಾರರ ಮೂರು ರೀತಿಯ ಸಹಕಾರಿ ಒಡೆತನ, ವಿದೇಶೀ ಕಂಪನಿಗಳೊಂದಿಗೆ ಜಂಟಿ ಒಡೆತನ ಹಾಗೂ ಸರಕಾರೀ ಒಡೆತನ. ಸರಕಾರೀ ಒಡೆತನವೇ ಮುಂದೆಯೂ ಪ್ರಮುಖ ಒಡೆತನ ಸ್ವರೂಪವಾಗಿರುತ್ತದೆ, ಅಲ್ಲದೆ ಶಿಕ್ಷಣ, ಆರೋಗ್ಯ ಹಾಗೂ ರಾಷ್ಟ್ರೀಯ ರಕ್ಷಣೆ ಕ್ಯೂಬಾ ಸರಕಾರದ ಕೈಯಲ್ಲೇ ಇರುತ್ತದೆ ಎಂದು ಕಾಂ. ಪೆರೆಝ್ ಒತ್ತಿ ನುಡಿದರು. "ನಾವು ಬಂಡವಾಳಶಾಹಿಯತ್ತ ಹೋಗುವುದಿಲ್ಲ, ಬಂಡವಾಳಶಾಹೀ ಎಂದೂ ಕ್ಯೂಬಾಕ್ಕೆ ಮರಳಲಾರದು" ಎಂದು ನಮ್ಮ ಗೆಳೆಯರಿಗೆ ನಾವು ಭರವಸೆ ಕೊಡುತ್ತೇವೆ ಎಂದು ಅವರು ನುಡಿದರು.

ಈ ಎಲ್ಲಾ ಬದಲಾವಣೆಗಳಿಂದಾಗಿ ನಮ್ಮ ದೇಶದ ಅತ್ಯಂತ ಸಂಕಟದ ಅವಧಿಯನ್ನು ಈಗ ದಾಟಿ ಬಂದಿರುವುದಾಗಿ ಹೇಳಿದ ಪೆರೆಝ್ ಅವರು ಈಗ ಪಾಶ್ಚಿಮಾತ್ಯ ಜಗತ್ತಿನಲ್ಲಿ, ಅದರಲ್ಲ ಮುಖ್ಯವಾಗಿ ಅಮೇರಿಕಾದಲ್ಲಿ ಹಿಂದಿನಂತೆ ಜನ 'ಕ್ಯೂಬಾ ಕ್ರಾಂತಿ ಎಂದು ಕುಸಿಯುತ್ತದೆ' ಎಂಬ ಬಗ್ಗೆ ಬಾಜಿ ಕಟ್ಟುತ್ತಿಲ್ಲ, ಫಿಡೆಲ್ ಕ್ಯಾಸ್ಟ್ರೋ ಆಳ್ವಿಕೆ ಮುಂದುವರೆಯುತ್ತದೆ, ಅಮೇರಿಕಾದ ಆರ್ಥಿಕ ನಿರ್ಬಂಧದ ನೀತಿ ವಿಫಲಗೊಂಡಿದೆ, ಆದ್ದರಿಂದ ಅಮೇರಿಕಾ ಕ್ಯೂಬಾದ ಬಗ್ಗೆ ತನ್ನ ನಿಲುವನ್ನು ಬದಲಿಸಬೇಕು ಎಂಬ ಒತ್ತಾಯಗಳು ಅಲ್ಲಿ ಬರುತ್ತಿದೆ ಎಂದರು.

ಚೀಣಾ ಮತ್ತು ವಿಯೆಟ್ನಾಂನ ಅನುಭವಗಳ ಬಗ್ಗೆ ಕೇಳಿದಾಗ ಸೋವಿಯತ್ ಒಕ್ಕೂಟದಲ್ಲಾದಂತೆ ಸಮಾಜವಾದಿ ವ್ಯವಸ್ಥೆಯಲ್ಲಿನ ಬದಲಾವಣೆಗಳನ್ನು ಸಮಾಜವಾದಿ ವ್ಯವಸ್ಥೆಯನ್ನು ನಾಶ ಮಾಡದೆ ಸಮಾಜವಾದಿ ಚೌಕಟ್ಟಿನೊಳಗೆ ತರಲು ಸಾಧ್ಯವಾಗಿದೆ ಎಂದು ಎರಡು ದೇಶಗಳ ಅನುಭವ ಹೇಳುತ್ತದೆ ಎಂದರು. ಸೋವಿಯತ್ ಒಕ್ಕೂಟದ ಕುಸಿತದಿಂದ ಕಲಿತ ಒಂದು ಪ್ರಮುಖ ಪಾಠವೆಂದರೆ "ಎಲ್ಲೇ ಆಗಲಿ ಸಮಾಜವಾದ ಯಶಸ್ವಿಯಾಗಬೇಕಾದರೆ ಮುಖಂಡತ್ವಕ್ಕೆ ಸ್ಪಷ್ಟತೆಯಿರಬೇಕು, ಜನಗಳೊಂದಿಗೆ ನಿಕಟ ಸಂಪರ್ಕ ಹೊಂದಿರಬೇಕು, ಜನಗಳೊಂದಿಗೆ ಕೈ-ಕೈ ಜೋಡಿಸಿ ದುಡಿಯಬೇಕು" ಎಂದು ಕ್ಯೂಬಾದ ಈ ಮುಖಂಡ ಹೇಳುತ್ತಾರೆ.

KRNM/BGS-405 MAG (2) PRB DECR 319-78/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27.
ಫೋನ್ ನಂ. 2236462

ಭೂಮಿಗಾಗಿ ಒತ್ತಾಯಿಸಿ ರೈತರ ಧರಣಿ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ತಾಲ್ಲೂಕು ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಸಂಘದ ಅಧ್ಯಕ್ಷರಾದ ಲಕ್ಕಯ್ಯನವರ ನೇತೃತ್ವದಲ್ಲಿ ಆಗಸ್ಟ 1ರಂದು ಉಪವಿಭಾಗಾಧಿಕಾರಿಗಳವರ ಕಛೇರಿ ಮುಂದೆ ಬಗರಹುಕುಂ ಸಾಗುವಳಿ ಸಕ್ರಮಗೊಳಿಸುವ ಬಗ್ಗೆ ಒತ್ತಾಯಯಿಸಿ ಧರಣಿ ಸತ್ಯಾಗ್ರಹ ಕಾರ್ಯಕ್ರಮವನ್ನು ಹಮ್ಮಿಕ್ಕೊಳ್ಳಲಾಗಿತ್ತು. ಈ ಹಿಂದೆ ಹಲವಾರು ಧರಣಿ, ಪಿಕೆಟಿಂಗ್ ನಡೆಸಿದ್ದಾಗ್ಯೂ ಯಾವುದೇ ರೀತಿಯ ಸಾಗುವಳಿ ಚೀಟಿಗಳನ್ನು ವಿತರಿಸಿಲ್ಲ. ಅದ್ದರಿಂದ ಜಿಲ್ಲೆಯಾದ್ಯಂತ ಈ ಧರಣಿ ಸತ್ಯಗ್ರಹವನ್ನು ಹಮ್ಮಿಕ್ಕೊಳಲಾಗಿತ್ತು. ಅದರಂತೆ ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿಯೂ ಸಹ ಉಪವಿಭಾಗಾಧಿಕಾರಿಗಳ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ಕಾರ್ಯ ಕ್ರಮ ನಡೆಸಲಾಯಿತು. ನಂತರ ಪಟ್ಟಣದ ಪ್ರಮುಖ ಬೀದಗಳಲ್ಲಿ ಕೆಂಪು ಬಾವುಟಗಳೊಂದಿಗೆ ಮೆರವಣಿಗೆಯನ್ನು ನಡೆಸಲಾಯಿತು. ಸುಮಾರು 200 ಜನ ಭಾಗವಹಿಸಿದ್ದರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು..

ಈ ಧರಣಿ ಸತ್ಯಾಗ್ರಹದಲ್ಲಿ ಕಾರ್ಯದರ್ಶಿಗಳಾದ ಬಿ.ಎನ್. ಮುನಿಕೃಷ್ಣಪ್ಪ, ಸಿ.ಅಶ್ವಥ ನಾರಾಯಣಪ್ಪ, ಆರ್.ಕೆ. ಮುನಿರಾಜು, ಎಂ.ಕೃಷ್ಣಪ್ಪ, ನಾರಾಯಣಪ್ಪ ಮತ್ತಿತರು ಭಾಗವಹಿಸಿದ್ದರು.

ಚಿಂತಾಮಣಿ: ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಿ ಸಾಗುವಳಿ ಚೀಟಿಗಳನ್ನು ನೀಡಬೇಕು, ಬರ ಪರಿಹಾರ ಕ್ರಮಗಳನ್ನು ಸರ್ಕಾರ ತಕ್ಷಣ ಕೈಗೆತ್ತಿಕೊಳ್ಳಬೇಕೆಂದು ಆಗ್ರಹಿಸಿ ಆಗಸ್ಟ್ 1ರಂದು ಚಿಂತಾಮಣಿ ತಾಲೂಕು ಕಛೇರಿಯ ಎದುರು ಕರ್ನಾಟಕ ಪ್ರಾಂತ ರೈತ ಸಂಘ ಸಾಮೂಹಿಕ ಧರಣಿಯನ್ನು ಸಂಘಟಿಸಿತ್ತು.

ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ಸಮಿತಿಯ ತೀರ್ಮಾನದಂತೆ ಸಂಘಟಿಸಲ್ಪಟ್ಟಿದ್ದ ಈ ಹೋರಾಟಕ್ಕೆ ಬಡ ರೈತ, ಕೂಲಿಕಾರರಿಂದ ನಿರೀಕ್ಷೆಗೆ ಮೀರಿದ ಪ್ರತಿಕ್ರಿಯೆ ವ್ಯಕ್ತಗೊಂಡು ಸುಮಾರು 400 ಜನ ರೈತರು ಸ್ವಯಂ ಸ್ಪೂರ್ತಿಯಿಂದ ಹೋರಾಟದಲ್ಲಿ ಭಾಗವಹಿಸಿದ್ದರು. ವಿವಿಧ ಗ್ರಾಮಗಳಿಂದ ಆಗಮಿಸಿದ್ದ ನೂರಾರು ಜನ ಪ್ರವಾಸಿ ಮಂದಿರದಿಂದ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಮೆರವಣಿಗೆ ನಂತರ ಆರಂಭವಾದ ಸಭೆಯನ್ನು ಕಾಂ. ಗೋಪಿನಾಥ್ ಸ್ವಾಗತಿಸಿದರು. ಧರಣಿಯನ್ನು ಉದ್ದೇಶಿಸಿ ರೈತ ಸಂಘದ ಮುಖಂಡರಾದ ಕಾಂ.ಜಿ.ವಿ.ಅಶ್ವತನಾರಾಯಣ ರೆಡ್ಡಿ, ಕಾಂ. ಲಕ್ಷ್ಮಣರೆಡ್ಡಿ, ಕಾಂ.ಶ್ರೀನಿವಾಸರೆಡ್ಡಿ, ಕಾಂ. ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿ, ಹತ್ತಾರು ವರ್ಷಗಳಿಂದ ರೈತರಿಗೆ ಸಾಗುವಳಿ ಚೀಟಿ ನೀಡದಿರುವ ಸರ್ಕಾರಗಳ ನೀತಿಯನ್ನು ಖಂಡಿಸಿ, ತಕ್ಷಣ ಸಮಸ್ಯೆಗಳು ಪರಿಹಾರವಾಗದಿದ್ದಲ್ಲಿ ಉಗ್ರ ಹೋರಾಟಕ್ಕೆ ರೈತರು ಮುಂದಾಗಬೇಕೆಂದು ಕರೆ ನೀಡಿದರು.

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ಪುಟ 1ರಿಂದ

ಪುನರ್ವಿಮರ್ಶೆಗೆ ಅವಕಾಶ ಮಾಡಿಕೊಡಬೇಕೆಂದು ರಾಜ್ಯಪಾಲರ ಮೊರೆ ಹೋಕ್ಕಿವೆ. ಈ ನಿಲುವನ್ನು ಸಿಪಿಐ(ಎಂ) ರಾಜ್ಯ ಸಮಿತಿ ಖಂಡಿಸಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಜನತಾದಳ ಸರಕಾರದ ಭೂ ಸುಧಾರಣೆ ತಿದ್ದುಪಡಿ ಮತ್ತು ಕಾರ್ಮಿಕ ನೀತಿಯ ಬಗ್ಗೆ ರಾಜ್ಯ ಸಮಾವೇಶವನ್ನು ನಡೆಸಿ ಅದನ್ನು ತೀವ್ರವಾಗಿ ವಿರೋಧಿಸಲು ವಿಸ್ತೃತ ಕಾರ್ಯಕ್ರಮ ಕೈಗೊಳ್ಳಲಿದೆ.

ಈಗ ಜರೂರಾಗಿ ಅಕ್ಟೋಬರ್ 9ರಂದು ರಾಜ್ಯದಾದ್ಯಂತ ಭೂ ಕಾಯ್ದೆ ತಿದ್ದುಪಡಿ ಮತ್ತು ಕಾರ್ಮಿಕ ನೀತಿಯನ್ನು ವಿರೋಧಿಸಿ ಧರಣಿ ಪ್ರದರ್ಶನ ನಡೆಸಲಿದೆ. ಅಂದು ಈ ತಿದ್ದುಪಡಿಯ ನಕಲನ್ನು ಸುಟ್ಟು ಹಾಕಲಾಗುವುದು.

ಜನತಾದಳಕ್ಕೆ ವಿನಂತಿ

ಬಿಜೆಪಿಯ ಮುಖಂಡರು ದಿನಬೆಳಗಾದರೆ ಕೇಂದ್ರದಲ್ಲಿ ತಾವೇ ಸರಕಾರವನ್ನು ರಚಿಸುತ್ತೇವೆ ಎಂದು ಹೇಳುತ್ತಾ ಬರುತ್ತಿರುವುದನ್ನು ಚರ್ಚಿಸಿ ಇದು ಯಾವುದೇ ಆಧಾರವಿಲ್ಲದ್ದು ಎಂದು ಹೇಳುತ್ತಾ ನಮ್ಮ ರಾಜ್ಯದಲ್ಲಿ ಕೂಡಾ ಶಾಸನ ಸಭೆಯಲ್ಲಿದ್ದ ಬೆಂಬಲ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಕಡಿಮೆಯಾಗಿ ಕರ್ನಾಟಕದಲ್ಲಿ ಬಿಜೆಪಿಯ ಕುರಿತು ಜನರಲ್ಲಿ ಭ್ರಮನಿರಸನವಾಗುತ್ತಾ ಬರುತ್ತಿದೆ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ಶಾಸನ ಸಭೆಯಲ್ಲಿ ಅವಿಶ್ವಾಸ ನಿರ್ಣಯ, ಕಾವೇರಿ ವಿವಾದ, ಸಭಾಧ್ಯಕ್ಷ ರಮೇಶ್ ಕುಮಾರ್ ಬಗ್ಗೆ ಟೀಕೆಯಿಂದ ಉದ್ಭವಿಸಿದ ಹಕ್ಕುಚ್ಯುತಿ, ಗ್ರಾನೈಟ್ ಹಗರಣ ಇತ್ಯಾದಿ ನಡೆದು ಜನಸಾಮಾನ್ಯರ ಸಮಸ್ಯೆಗಳು, ವಿದ್ಯುಚ್ಛಕ್ತಿ, ಅಭಾವ, ಬರಗಾಲ ಕೃಷ್ಣಾ ಕಣಿವೆ ಯೋಜನೆ ಇವುಗಳ ಕುರಿತು ಚರ್ಚೆಯಾಗದೆ ಮೇಲ್ಕಾಣಿಸಿದ ಕಾರಣಗಳಿಗಾಗಿ ಹಣ ಖರ್ಚಾಗಿರುವುದಕ್ಕೆ ಕಾಂಗ್ರೆಸ್(ಐ) ಮತ್ತು ಬಿಜೆಪಿಗಳೇ ಕಾರಣವೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದೆ.

ಈ ಕೂಡಲೇ ಜನತಾದಳ, ಎಡಪಕ್ಷಗಳ ಜತೆ ಚುನಾವಣೆ ವಿಷಯದಲ್ಲಿ ಚರ್ಚೆ ನಡೆಸಿ ಕಾಂಗ್ರೆಸ್(ಐ) ಮತ್ತು ಬಿಜೆಪಿಗಳನ್ನು ಸೋಲಿಸಲು ರೂಪುರೇಶೆಗಳನ್ನು ನಿರ್ಧರಿಸಬೇಕೆಂದು, ಆದೇ ವೇಳೆ ಕೇಂದ್ರ ಸರಕಾರದ ನೀತಿಗಳ ವಿರುದ್ಧ ಸ್ಪಷ್ಟವಾದ ನಿಲುವುಗಳನ್ನು ತೆಗೆದುಕೊಳ್ಳಲು ಜನತಾದಳ ಮುಂದಾಗಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿ ವಿನಂತಿಸಿದೆ.

ಹೋರಾಟದ ಕಾರ್ಯಕ್ರಮ

ಮುಂದಿನ ದಿನಗಳಲ್ಲಿ ನೀರಾವರಿ ಬಗ್ಗೆ, ಕೃಷಿ ಕೂಲಿಕಾರರ ಮೇಲೆ ಗುಲ್ಬರ್ಗ, ರಾಯಚೂರು ಮೊದಲಾದ ಕಡೆಗಳಲ್ಲಿ ನಡೆಯುವ ದಬ್ಬಾಳಿಕೆ ವಿರುದ್ಧ ಹಾಗೂ ಅಸಂಘಟಿತ ಕಾರ್ಮಿಕರ ರಕ್ಷಣೆಗಾಗಿ ಹೋರಾಟಗಳನ್ನು ಹಮ್ಮಿಕ್ಕೊಳ್ಳಬೇಕೆಂದೂ ರಾಜ್ಯ ಸಮಿತಿ ತೀರ್ಮಾನಿಸಿತು.

ಗಂಗಾವತಿ ತಾಲ್ಲೂಕು ಚಿಂಚೋಳಿಯಲ್ಲಿ ಕೃಷಿ ಕೂಲಿಕಾರರ ಮೇಲೆ ನಡೆದ ಹಲ್ಲೆಯನ್ನು ಪರಿಶೀಲಿಸಿ ಮುಂದಿನ ಕ್ರಮವನ್ನು ಸೂಚಿಸಲು ಪಿ.ರಾಮಚಂದ್ರರಾವ್, ಜಿ.ವಿ.ಶ್ರೀರಾಮರೆಡ್ಡಿ ಮತ್ತು ಜಿ.ಎಸ್. ನಾಗರಾಜ್ ಈ ಮೂರು ಮಂದಿಯ ಸಮಿತಿಯನ್ನು ರಚಿಸಲಾಗಿದೆ. ಇವರು ಸ್ಥಳಗಳಿಗೆ ಭೇಟಿ ಕೊಟ್ಟು ರಾಜ್ಯ ಕಾರ್ಯದರ್ಶಿ ಮಂಡಳಿಗೆ ವರದಿ ಸಲ್ಲಿಸುತ್ತಾರೆ.

ರಾಜ್ಯ ಸಭೆಯು ಮಂಗಳೂರಿನಲ್ಲಿ ಇತ್ತೀಚೆಗೆ ಹೆಸರುವಾಸಿ ವಿಚಾರವಾದಿ ಹಾಗೂ ವಿಜ್ಞಾನಿಯಾದ ನರೇಂದ್ರ ನಾಯಕ್ ಇವರು ಗಣಪತಿಯ ವಿಗ್ರಹ ಹಾಲು ಕುಡಿಯುವ ವಿಷಯದಲ್ಲಿ ಎದ್ದು ಬಂದ ಭ್ರಮೆಯನ್ನು ಪ್ರಯೋಗದ ಮೂಲಕ ನಿರಸನಗೊಳಿಸುವಲ್ಲಿ ತೊಡಗಿದ್ದಾಗ ಪ್ರಯತ್ನಿಸಿ ಹಿಂದುತ್ವ ರಕ್ಷಕರೆಂಬ ತಿಳಿಗೇಡಿಗಳು ಅವರ ಮೇಲೆ ನಡೆಸಿದ ಸಶಸ್ತ್ರ ಆಕ್ರಮಣ ನಡೆಸಿರುವುದನ್ನು ಖಂಡಿಸಿತು. ಈ ವ್ಯಕ್ತಿಗಳ ಮೇಲೆ ತೀವ್ರ ಕ್ರಮಕೈಗೊಳ್ಳಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸುವ ಒಂದು ಠರಾವನ್ನು ರಾಜ್ಯ ಸಮಿತಿಯ ಈ ಸಭೆ ಅಂಗೀಕರಿಸಿತು.

ಕೃಷ್ಣಾ ಕಣಿವೆಯ ರೈತರ ಬೇಡಿಕೆಗಳು

1. 2000 ಇಸ್ವಿಯೊಳಗಡೆ 734 ಟಿ.ಎಂ.ಸಿ ನೀರನ್ನು ಬಳಸಿಕೊಳ್ಳಲು ಬೇಕಾದ ರಾಜಕೀಯ ದೃಢತೆಯನ್ನು ರಾಜ್ಯ ಸರಕಾರ ಪ್ರದರ್ಶಿಸಿ, ಸಮಗ್ರ ಯೋಜನೆಯನ್ನು ರಾಜ್ಯದ ಜನತೆಯ ಮುಂದೆ ಮಂಡಿಸಬೇಕು, ಸಂಪೂರ್ಣ ನೀರನ್ನು ಬಳಸಿಕೊಳ್ಳಲು ಬೇಕಾದ ಸಂಪನ್ಮೂಲವೆಷ್ಟು, ಅದರಲ್ಲಿ ರಾಜ್ಯ ಸರಕಾರವೆಷ್ಟು ಒದಗಿಸುತ್ತದೆ. ಕೇಂದ್ರ ಸರಕಾರದಿಂದ ಎಷ್ಟು ಸಹಾಯವನ್ನು ಆಶಿಸುತ್ತದೆಂದು ಸ್ಪಷ್ಟಪಡಿಸಿ ಅದನ್ನು ಪಡೆಯಲು ಕೇಂದ್ರ ಸರಕಾರಕ್ಕೆ ಒತ್ತಾಯಿಸಲು ರಾಜ್ಯ ಸರಕಾರ ಮುಂದಾಗಬೇಕು.

2. 734 ಟಿ.ಎಂ.ಸಿ.ಯಲ್ಲಿ ಇನ್ನು ಉಳಿದಿರುವ ನೀರನ್ನು ಪೂರ್ಣ ಬಳಕೆ ಮಾಡಿಕೊಳ್ಳಲು ಕೃಷ್ಣಾ ಕಣಿವೆ ಅಭಿವೃದ್ಧಿ ಪ್ರಾಧಿಕಾರವನ್ನು ಜಾರಿಗೆ ತರುವಂತಾಗಬೇಕು.

3. 173 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಯೋಜಿತವಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಎರಡು ಘಟ್ಟದ ಯೋಜನೆಗಳನ್ನು ಈ ಕೂಡಲೇ ಕೈಗೆತ್ತಿಕೊಳ್ಳಲು ಹಣ ಒದಗಿಸುವಂತಾಗಬೇಕು. ಆಗ ಮಾತ್ರವೇ 2000 ಇಸ್ವಿಯೊಳಗಡೆ ಯೋಜನೆಗಳನ್ನು ಸಂಪೂರ್ಣಗೊಳಿಸಲು ಸಾಧ್ಯ.

ಅ) ನಾರಾಯಣಪುರ ಎಡದಂಡೆ ನಾಲೆಯಡಿಯಲ್ಲಿ ಬರುವ, ಮುದ್ಬಾಳ ಬ್ರಾಂಚ, ಜೇವರ್ಗಿ ಬ್ರಾಂಚ್, ಇಂಡಿ ಬ್ರಾಂಚ್ ಕಾಲುವೆಗಳು

ಆ) 160 ಕಿ.ಮೀ ಉದ್ದವು ಸೇರಿದಂತೆ ನಾರಾಯಣಪುರ ಬಲದಂಡೆ ಕಾಲುವೆ.

ಇ) ಆಲಮಟ್ಟಿ ಎಡದಂಡೆ ಹಾಗೂ ಬಲದಂಡೆ ಕಾಲುವೆ.

ಈ) ಮುಳವಾಡ, ರಾಂಪುರ, ಇಂಡಿ, ನಗನೂರ, ಹಾಗೂ ಗುತ್ತಿ ಬಸವೇಶ್ವರ ಯಾತನೀರಾವರಿ ಯೋಜನೆಗಳು

4. ಕೃಷ್ಣಾ ಮೇಲ್ದಂಡೆಯ 173 ಟಿ.ಎಂ.ಸಿ. ಹಾಗೂ 209 ಟಿ.ಎಂ.ಸಿ. ನೀರು ಬಳಸಿಕೊಂಡು ಪೂರ್ಣಗೊಂಡ ಯೋಜನೆಗಳನ್ನು ಹೊರತುಪಡಿಸಿ ಇನ್ನುಳಿದ 352 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಸಂಪನ್ಮೂಲ ಒದಗಿಸುವಂತಾಗಬೇಕು.

ಹಾಗೂ ಗೋದಾವರಿ ಕಣಿವೆಯ ರಾಜ್ಯದ ಪಾಲಿನ ನೀರನ್ನು ಬಳಸಿಕೊಳ್ಳಲು ಯೋಜಿತ ಯೋಜನೆಗಳನ್ನು ಪೂರ್ಣಗೊಳಿಸಲು ಸಂಪನ್ಮೂಲ ಒದಗಿಸುವಂತಾಗಬೇಕು.

ಹಿಪ್ಪರಗಿ ಬ್ಯಾರೇಜು...ಘಟಪ್ರಭಾ-ಮೂರನೇ ಘಟ್ಟ...ಮಲಪ್ರಭಾ ....ಬೆನ್ನಿತೋರಾ.......ಕೆಳಗಿನ ಮುಲ್ಲಾಮಾರಿ...ಅಮರ್ಜಾ..ಹಿರೇಹಳ್ಳಾ .ಮುಸ್ಕಿನಾಲ..ರಾಣಿಕೆರೆ..ದೂದಗಂಗಾ..ಮಾರ್ಕಂಡೇಯಾ...ರಾಮಥಾಳ ..ಹರಿನಾಲಾ.......ಭೀಮಾ ಏತನೀರಾವರಿ.ಗಂಡೋರಿ ನಾಲಾ.ತುಂಗಾಮೇಲ್ದಂಡೆ..ಭದ್ರಾ ಮೇಲ್ದಂಡೆ. ......ಭೀಮಾಹರಿ ನೀರಾವರಿ... ....ಬಸಾಪುರ....ಸಾಸಲವಾಡಾ.. .....ಸೇರಿದಂತೆ ಇನ್ನುಳಿದ ಏತನೀರಾವರಿ ಹಾಗೂ ಚಿಕ್ಕ ನೀರಾವರಿ ಯೋಜನೆಗಳು

5. ಆಲಮಟ್ಟಿ ಜಲಾಶಯವನ್ನು ಪೂರ್ಣಗೊಳಿಸಲು ಅದಕ್ಕೆ ಅಡ್ಡಿಯಾಗಿರುವ ಬಾಗಲಕೋಟೆ ನಗರ ಸ್ಥಳಾಂತರದ ಪ್ರಶ್ನೆಯನ್ನು ಈ ಕೂಡಲೇ ಕೈಗೆತ್ತಿಕೊಳ್ಳುವಂತಾಗಬೇಕು. ಆಲಮಟ್ಟಿ ಜಲಾಶಯದ ನೀರಿನ ವಿಸ್ತರಣೆ ಹಾಗೂ ಕಾಲುವೆಗಳಿಗಾಗಿ ಸ್ಥಳ ಒದಗಿಸುವ ಕುಟುಂಬ ಹಾಗೂ ಗ್ರಾಮಗಳ ಪುನರ್ ವಸತಿಗೆ ಅತೀ ಹೆಚ್ಚಿನ ಆಧ್ಯತೆಯಲ್ಲಿ ಸಂಪನ್ಮೂಲ ಒದಗಿಸಿ, ಸೌಲಭ್ಯಗಳನ್ನು ಒದಗಿಸುವಂತಾಗಬೇಕು.

6. ಅ) 734 ಟಿಎಂಸಿಯಲ್ಲಿ ಈವರೆಗೆ 382.34 ಟಿ.ಎಂ.ಸಿ. ನೀರನ್ನು ಬಳಸಿಕೊಂಡು ಪೂರ್ಣಗೊಂಡಿರುವ ಯೋಜನೆಗಳಲ್ಲಿ ಉದ್ಭವವಾಗಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸಲು ರಾಜ್ಯ ಸರಕಾರ ತುರ್ತು ಕ್ರಮ ವಹಿಸುವಂತಾಗಬೇಕು. ತುಂಗಭದ್ರಾ ಎಡದಂಡೆ ಕಾಲುವೆಯ ಆಂತರಿಕ ಭದ್ರತೆ ಉಪಕಾಲುವೆಗಳ ರಿಪೇರಿ, ನೀರಾವರಿ ಸಹಕಾರಿ ಸಂಘಗಳನ್ನು ರಚಿಸಿ ಉಸ್ತುವಾರಿಯ ಸಂಪೂರ್ಣ ಜವಾಬ್ದಾರಿ ನೀಡುವಂತಾಗಬೇಕು. ಮಿನಿ ರಿ ಜ ಲರ್ವ ಯ್ ಂ ರ್ ಗ್ ಳ್ ನ್ ್ನ ರಚಿಸುವಂತಾಗಬೇಕು.

ಮಲಪ್ರಭಾ ನೀರಾವರಿಯಲ್ಲಿ ಹಾಗೂ ಇತರ ನೀರಾವರಿ ಯೋಜನೆಗಳಲ್ಲಿ ತೀವ್ರಗತಿಯಲ್ಲಿ ಉಪ್ಪು ಹೆರಡಿ ಭೂಮಿ ನಾಶವಾಗುವುದನ್ನು ತಡೆಯಲು ಶೀಘ್ರ ಕ್ರಮ ಕೈಗೊಳ್ಳುವಂತಾಗಬೇಕು.

ಆ) ತುಂಗಭದ್ರಾ ಹಿಂಬದಿ ನೀರು ಬಳಕೆ, ಹೆಚ್ಚುವರಿ ನೀರಿನ ಬಳಕೆ, ಹಾಗೂ ಸೀಪೇಜ ಭೂಮಿ ರೈತರಿಗೆ ಭತ್ತ ಬೆಳೆಯಲು ಅಧಿಕೃತ ನೀರು, ಮತ್ತು ನದಿಯ ಹೂಳೆತ್ತಲು ಕ್ರಮ ಮತ್ತು ಏತ ನೀರಾವರಿಗಳಿಗೆ ಹಣ ಬಿಡುಗಡೆ ಆಗಬೇಕು.

7. ಪ್ರಗತಿಯಲ್ಲಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ಇತರ ಕೃಷ್ಣಾ ಕಣಿವೆ ಪ್ರದೇಶದಲ್ಲಿ, ಗುತ್ತಿಗೆ ಪಡೆದ ಗುತ್ತೇದಾರರಲ್ಲಿ ಹಲವಾರು ಟೆಂಡರ್ ಶರತ್ತುಗಳನ್ನು ಗಾಳಿಗೆ ತೂರಿ ತೀರಾ ಕಳಪೆ ಕೆಲಸ ನಡೆಸಿ, ರಾಷ್ಟಕ್ಕೆ ಹಾಗೂ ರಾಜ್ಯದ ರೈತರಿಗೆ ರಾಜ್ಯದ ಅಭಿವೃದ್ಧಿಗೆ ದ್ರೋಹವೆಸಗುತ್ತಿದ್ದಾರೆ. ಅಂತಹವರ ಲೈಸನ್ಸನ್ನು ರದ್ದು ಮಾಡಬೇಕು. ಕಳಪೆ ಕೆಲಸವೆಂದು ಪುರಾವೆಯಾದಲ್ಲಿ ಅವರ ಮೇಲೆ ಕ್ರಮ ಕೈಗೊಂಡು ಶಿಕ್ಷೆಗೆ ಒಳಪಡಿಸುವಂತಾಗಬೇಕು.

ಅ) ಇಲಾಖೆ ಘೋಷಿತ ಡಿ.ಎಸ್.ಆರ್. ದರಕ್ಕಿಂತ 25% ಕ್ಕಿಂತ ಹೆಚ್ಚಿನ ದರವನ್ನು ಗುತ್ತಿಗೆದಾರರು ಟೆಂಡರ್ ತುಂಬಿದಲ್ಲಿ ಗುತ್ತಿಗೆ ಕೊಡದೆ ಇಲಾಖೆಯೇ ಕಾಮಗಾರಿ ಕೈಗೆತ್ತಿಕೊಳ್ಳುವಂತಾಗಬೇಕು.

ಆ) ತಮ್ಮ ಜವಾಬ್ದಾರಿಯನ್ನು ಮರೆತು, ಹಣಮಾಡುವುದೊಂದೇ ಗುರಿಯಿಟ್ಟುಕೊಂಡು, ಕಳಪೆ ಕೆಲಸಕ್ಕೆ ಸಂಪೂರ್ಣ ಸಹಕಾರ ನೀಡುತ್ತಿರುವ ಇಂಜಿನಿಯರ್ ಹಾಗೂ ಇತರ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಶಿಕ್ಷೆಗೆ ಒಳಪಡಿಸುವಂತಾಗಬೇಕು.

ಇ) ಮೊದಲನೇ ದರ್ಜೆ ಗುತ್ತೇದಾರರು ತಮ್ಮ ಕೆಲಸವನ್ನು ಇತರರಿಗೆ ಮರು ಗುತ್ತಿಗೆ ನೀಡುವುದು, ಅವರು, ಇನ್ನೊಬ್ಬರಿಗೆ ಕೊಡುವ ಮುಖಾಂತರ, ಎಲ್ಲಾ ಹಂತಗಳಲ್ಲಿ ಲಾಭ ದುರಾಸೆ ಹೆಚ್ಚಾಗಿ ಉಪ ಕಾಲುವೆ, ಬಿಡಿ ಕಾಲುವೆ, ಕೊನೆ ಕಾಲುವೆಗಳು, ನೀರನ್ನು ಹರಿಸಲಾರದಂತಹ ಪರಿಸ್ಥಿತಿಗೆ ಮುಟ್ಟಿವೆ. ಸಬ್ ಲೀಸ್ ಪದ್ಧತಿಯನ್ನು ಕೂಡಲೇ ತಡೆಯುವಂತಾಗಬೇಕು.

ಈ) ಹಲವಾರು ರೀತಿಯಲ್ಲಿ ನಡೆಯುವ ಹಣದ ದುರ್ಬಳಕೆ ಕಟ್ಟಡ ನಿರ್ಮಾಣ ಕ್ಯಾಂಪ್ ನಿರ್ಮಾಣಗಳಲ್ಲಿ ನಡೆಯುವ ಅವ್ಯವಹಾರವನ್ನು ತಡೆಯುವಂತಾಗಬೇಕು. ಇನ್ನು ಮುಂದೆ ಹೆಚ್ಚಿನ ಹಣವನ್ನು ತಾತ್ಕಾಲಿಕ ಕಟ್ಟಡಗಳಿಗೆ ಕ್ಯಾಂಪ್ ಗಳಿಗೆ ವ್ಯಯಮಾಡುವುದನ್ನು ತಡೆಯುವಂತಾಗಬೇಕು.

8. ಅ) ನಾರಾಯಣಪುರ ಎಡದಂಡೆ ಕಾಲುವೆಯ 0 ಯಿಂದ 74 ಕಿ.ಮೀವರೆಗೆ ಪುನರ್ ತನಿಖೆ ನಡೆದು, ಅದರ ಮರು ದುರಸ್ತಿಗೆ ಆಧ್ಯತೆ ನೀಡುವಂತಾಗಬೇಕು.

ಆ) ಡೋಣ ಅಕ್ವಿಡೆಟನ್ನು ದುರಸ್ತಿಗೊಳಿಸುವುದರ ಜೊತೆಗೆ ಈ ದುರಂತಕ್ಕೆ ಕಾರಣರಾದ ಅಂದಿನ ಗುತ್ತೇದಾರ ಹಾಗೂ ಇಂಜಿನಿಯರುಗಳನ್ನು ಶಿಕ್ಷಿಸಲು ಮುಂದಾಗಬೇಕು.

9. ಅ) ಭ್ರಷ್ಟ ಹಾಗೂ ಆಸಕ್ತಿಯಿಲ್ಲದ ಇಂಜಿನಿಯರ್ ಮತ್ತು ಅಧಿಕಾರಿಗಳನ್ನು ಈ ಕೂಡಲೇ ಬೇರೆಕಡೆ ವರ್ಗಾಯಿಸುವಂತಾಗಬೇಕು.

ಆ) ಐದು ವರ್ಷ ಕೆಲಸ ಮಾಡಲು ಒಪ್ಪಿ ಬರುವಂತಹ ದಕ್ಷ ಅಧಿಕಾರಿ, ಇಂಜಿನಿಯರ್ ಗಳನ್ನು ಯೋಜನೆಗೆ ತರುವಂತಾಗಬೇಕು.

ಇ) ಇದೇ ಪ್ರದೇಶದಲ್ಲಿರುವಂತಹವರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಲು ಹಾಗೂ ಹೆಸರುವಾಸಿಯಾದ ದಕ್ಷರಾದ ರಿಟೈರ್ಡ್ ಇಂಜಿನಿಯರುಗಳ ಸೇವೆಯನ್ನು ಪಡೆಯಲು ಕ್ರಮ ಕೈಗೊಳ್ಳಬೇಕು.

ಈ) ಆಸಕ್ತಿಯಿಂದ ಕೆಲಸ ಮಾಡುವ ಉದ್ಯೋಗಿಗಳಿಗೆ, ಅವಶ್ಯಕ ವಿಶೇಷ ಸೌಲಭ್ಯಗಳನ್ನು ನೀಡುವಂತ್ತಾಗಬೇಕು.

10. ಅ) 540 ಜನ ಗುತ್ತಿಗೆ ಇಂಜಿನಿಯರುಗಳನ್ನು ಖಾಯಂ ಗೊಳಿಸಬೇಕು.

ಆ) ಕೃಷ್ಣಾ ಜಲಾನಯನ ಪ್ರದೇಶದ ಎಲ್ಲಾ ಯೋಜನೆಗಳಲ್ಲಿ ಕಾಲುವೆ ಮಟ್ಟದಿಂದ ಅಣೆಕಟ್ಟಿನ ಹಂತದವರೆಗೂ ಎಲ್ಲಾ ರಾಜಕೀಯ ಪಕ್ಷಗಳ ಹಾಗೂ ರೈತ ಸಂಘದ ಪ್ರತಿನಿಧಿಗಳನ್ನೊಳಗೊಂಡ ಕಾವಲು ಸಮಿತಿಯನ್ನು ರಚಿಸುವಂತಾಗಿ, ಇಡೀ ಯೋಜನೆಯ ಜಾರಿಗೆ ಜನತೆಯ ಸಹಕಾರ ಸಿಗುವಂತಾಗಬೇಕು. ಹಾಗೆಯೇ ಯೋಜನೆಯಲ್ಲಿ ನಡೆಯುವ ಭ್ರಷ್ಟಾಚಾರ, ಅವ್ಯವಹಾರ ತಡೆಯುವಂತಾಗಬೇಕು.

ಇ) ಸರ್ಕಾರ ಈ ಕಾವಲು ಸಮಿತಿಯನ್ನು ರಚಿಸದಿದ್ದರೆ ಪ್ರಾಂತ ರೈತ ಸಂಘವೇ ನೀರಾವರಿ ತಜ್ಞರು ಪ್ರಾಮಾಣಿಕ ಸಾಮಾಜಿಕ ವ್ಯಕ್ತಿಗಳು, ರಾಜಕೀಯ ಪಕ್ಷ, ರೈತ ಸಂಘ, ಕೂಲಿಕಾರರ ಸಂಘಗಳ ಪ್ರತಿನಿಧಿಗಳು ಸೇರಿದ ಕಾವಲು ಸಮಿತಿಗಳನ್ನು ರಚಿಸಲು ಮುಂದಾಗುತ್ತದೆ.

ಈ) ಅತಿ ಭ್ರಷ್ಟ ಇಂಜಿನಿಯರ್ ಗಳ ಪಟ್ಟಿಯನ್ನು ಕೊಡಲಾಗುತ್ತದೆ. ಅವರನ್ನು ವರ್ಗಾಯಿಸದೆ ಹೋದಲ್ಲಿ, ಅವರ ಹೆಸರನ್ನು ಪ್ರಕಟಿಸಿ, ರೈತರನ್ನು ಅವರ